
ಕಲ್ಯಾಣ ಕಿರಣ

ಸೆಪ್ಟೆಂಬರ್ 2004

ಬೆಲೆ : 5-00





ಆಗಸ್ಟ್ 15ರಂದು ರಾಜಾಜಿನಗರದ ಬಸವ ಮಂಟಪದ ಎದುರಿನಲ್ಲಿ ಗಣಾಚಾರದ ಹಾಗೂ ರಾಷ್ಟ್ರೀಯ ಬಸವ ದಳದ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಂದು ಧ್ವಜಾರೋಹಣ ಮಾಡುತ್ತಿರುವ ಪೂಜ್ಯ ಲಿಂಗಾನಂದ ಸ್ವಾಮೀಜಿಯವರು

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ 35 ಬಸವ ಶಕೆ 871 ಆಜೀವ ಸದಸ್ಯತ್ವ 500 ರೂ.
ಸಂಚಿಕೆ 07 ಸೆಪ್ಟೆಂಬರ್ 2004 ವಾರ್ಷಿಕ ಚಂದಾ 50/- ರೂ.

* ಮಹಾಮಹಿಮರು *

ಸತ್ ಸ್ವರೂಪರು, ಚಿತ್ ಸ್ವರೂಪರು
ಸತ್-ಚಿತ್-ಆನಂದವೇ ಲಿಂಗಾನಂದರು
ಇವರೇ ಮಹಾಮಹಿಮರು ಲಿಂಗಾನಂದರು || 1 ||

ಅನ್ನದಾತರು, ನಮಗೆ ಜ್ಞಾನದಾತರು
ಅನ್ನ-ಅರಿವು-ಆಶ್ರಯವ ಧಾರೆಯೆರೆದರು
ಇವರೇ ಲಿಂಗಾನಂದರು, ಮಹಾಮಹಿಮರು || 2 ||

ಜನನರಹಿತರು, ಮರಣ ರಹಿತರು
ಜನನ-ಮರಣ-ಗಮನಗಳ ಗೆದ್ದು ನಿಂತರು
ಇವರೇ ಲಿಂಗಾನಂದರು, ಮಹಾಮಹಿಮರು || 3 ||

ತತ್ವನಿಷ್ಠರು, ಸತ್ಯ ಶುದ್ಧರು
ಬಸವ ತತ್ವಭೋದಿಸಲು ಇಳೆಗೆ ಬಂದರು
ಇವರೇ ಲಿಂಗಾನಂದರು, ಮಹಾಮಹಿಮರು || 4 ||

ಆಸೆ ರಹಿತರು, ಪಾಶ ಮುಕ್ತರು
ಆಸೆ-ಆಮಿಷ-ರೋಷ-ಹರುಷ ಮೆಟ್ಟಿನಿಂತರು
ಇವರೇ ಲಿಂಗಾನಂದರು, ಮಹಾಮಹಿಮರು || 5 ||

ಕಾಮ ರಹಿತರು, ಕ್ರೋಧ ರಹಿತರು
ಮೋಹ-ಮದ-ಮತ್ಸರವ ತೊರೆದು ನಿಂತರು
ಇವರೇ ಲಿಂಗಾನಂದರು, ಮಹಾಮಹಿಮರು || 6 ||

ಲಿಂಗ ವೇದ್ಯರು, ಲಿಂಗ ನಿಷ್ಠರು
ಲಿಂಗಾಂಗ ಯೋಗಿಯಾಗಿ ಲಿಂಗವೇ ಆದರು
ಇವರೇ ಲಿಂಗಾನಂದರು, ಮಹಾಮಹಿಮರು || 7 ||

ರಚನೆ : ವಿ. ಶ್ರೀಕಂಠ ಕುಮಾರ್

WWW. Vishwakalyana mission .org

ಕಲ್ಯಾಣ ಕಿರಣ

ಸಂಪುಟ 35
ಸಂಚಿಕೆ 07
ಬಸವ ಶಕೆ 871
ಸೆಪ್ಟೆಂಬರ್ 2004
ಆಜೀವ ಸದಸ್ಯತ್ವ 500 ರೂ.
ವಾರ್ಷಿಕ ಚಂದಾ 50/- ರೂ.

ಕಿರಣಗನ್ನಡಿ

WWW. Vishwakalyana mission .org

* ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ನೈತಿಕ, ಮಾನವೀಯ ಮೌಲ್ಯಗಳನ್ನು ಬಿತ್ತರಿಸುತ್ತಿರುವ ಕಲ್ಯಾಣ ಕಿರಣ ಮಾಸಪತ್ರಿಕೆಗೆ ಚಂದಾದಾರರಾಗಿರಿ ಮತ್ತು ಇತರರನ್ನು ಚಂದಾದಾರರಾಗುವಂತೆ ಪ್ರೇರೇಪಿಸಿರಿ. ವಾರ್ಷಿಕ ಸದಸ್ಯತ್ವ- ರೂ. 50, ಆಜೀವ ಸದಸ್ಯತ್ವ- ರೂ. 500

KALYANA KIRANA- Reg No. 19988/70. Monthly Magazine printed and vishwakalyana Mission, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335
ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಸಿದ್ಧಾಂತ ಶಿಖಾಮಣಿ - ಒಂದು ವಿಮರ್ಶೆ

- ಮಾತಾಜಿ

ಪಂಚ ಪೀಠಾಧೀಶರು, ಅವರ ಅನುಯಾಯಿಗಳು ವಿಶ್ವಗುರು ಬಸವಣ್ಣನವರಿಗೂ ಪೂರ್ವದಲ್ಲಿಯೇ ಈ (?) ಧರ್ಮ ಇತ್ತು ; ಅವರೇ ಈ ಧರ್ಮದ ಆದ್ಯರಲ್ಲ ಎಂದು ಅತ್ಯಂತ ದೃಢವಾಗಿ ಸಾಧಿಸಲಿಕ್ಕೆ ಒಂದು ''ಗುಮ್ಮ''ನನ್ನು ತೋರಿಸುತ್ತಾರೆ. ಅದೇ ಸಿದ್ಧಾಂತ ಶಿಖಾಮಣಿ ಎಂಬ ಸಂಸ್ಕೃತ ಗ್ರಂಥ. ಅಚ್ಚ ಕನ್ನಡದ ಧರ್ಮ ''ಲಿಂಗಾಯತ'', ವಚನ ಶಾಸ್ತ್ರೋಕ್ತ ಧರ್ಮ. ಹೀಗಿರುವಾಗ ವಚನ ಸಾಹಿತ್ಯ ಬಿಟ್ಟು ಬೇರಾವುದನ್ನೋ ಓದಿ ತಲೆಯಲ್ಲಿ ಗೊಂದಲವನ್ನು ತುಂಬಿಕೊಳ್ಳುವುದೇಕೆ ಎಂದು ನಾನು ಸಿದ್ಧಾಂತ ಶಿಖಾಮಣಿಯನ್ನು ಓದಲು ಹೋಗಿರಲೇ ಇಲ್ಲ. ಈ ಉದಾಸೀನತೆಗೆ ಇನ್ನೊಂದು ಕಾರಣವೇನೆಂದರೆ, ಬೆರಣಿಯನ್ನು ಆಯುವುದರಲ್ಲೇ ಹೊತ್ತುಗಳೆದರೆ ಅಡಿಗೆ ಮಾಡಿಕೊಂಡು ಉಣ್ಣುವುದು ಯಾವಾಗ ? ಹಾಗೆ, ಇನ್ನೂ ನಾವು ಆಚರಿಸುವ ಧರ್ಮದ ಜನಕ ಯಾರು ಎಂದು ಚರ್ಚಿಸುವುದರಲ್ಲೇ ಹೊತ್ತುಗಳೆದರೆ ಇದನ್ನು ಅರಿಯುವುದು, ಆಚರಿಸುವುದು, ಪ್ರಚಾರ ಮಾಡುವುದು ಯಾವಾಗ ? ಆದ್ದರಿಂದ ವಚನ ಸಾಹಿತ್ಯವು ಸ್ಪಷ್ಟವಾಗಿ ಘೋಷಿಸಿರುವಂತೆ ವಿಶ್ವಗುರು ಬಸವಣ್ಣನವರೇ ಲಿಂಗಾಯತ ಧರ್ಮದ ಸಂಸ್ಥಾಪಕರು, ಆದಿ ಗುರು, ಆದಿ ಪ್ರಮಥ ಎಂದು ನಂಬಿ ಮುಂದಿನ ಕಾರ್ಯದಲ್ಲಿ ತೊಡಗೋಣ ಎಂದು 1988ರಲ್ಲಿ ನಡೆದ ಪ್ರಥಮ ಶರಣ ಮೇಳದಲ್ಲಿ ಶರಣರ ಸಭೆಯಲ್ಲಿ ಸಾರಿದ್ದರಿಂದ ಸಿದ್ಧಾಂತ ಶಿಖಾಮಣಿ ಎಂಬ ಗ್ರಂಥವನ್ನು ಓದುವ ಆಸ್ಥೆ ತೋರಿಸಿರಲಿಲ್ಲ.

ಒಂದು ದಿವಸ ಓರ್ವ ಶರಣರು ವಿದ್ವಾನ್ ಪೂಜ್ಯ ಡಾ|| ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು ಬರೆದು ಸಂವಹನ ಪ್ರಕಾಶನದವರು ಪ್ರಕಟಿಸಿರುವ 'ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರ ಭಾಷ್ಯ: ನಿಜದ ನಿಲುವು' ಎಂಬ ಪುಸ್ತಕವನ್ನು ತಂದುಕೊಟ್ಟರು. ಪೂಜ್ಯ ಸ್ವಾಮಿಗಳು ಸಂಸ್ಕೃತ ವಿದ್ವಾನ್, ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಬೋಧನೆ ಮಾಡಿ ನಿವೃತ್ತರಾದವರು. ಪಂಚ ಪೀಠಾಧೀಶರು, ಪಂಚಾಚಾರ್ಯವಾದಿಗಳು ಕೃತಕ ಉಸಿರಾಟಕ್ಕೆ ಬಳಸುತ್ತಿರುವ ಸಿದ್ಧಾಂತ ಶಿಖಾಮಣಿ ಮತ್ತು ಶ್ರೀಕರ ಭಾಷ್ಯ ಎಂಬ ಎರಡು ಗ್ರಂಥಗಳ ಶಾಸ್ತ್ರೀಯ ಅಧ್ಯಯನ ಮಾಡಿ, ಅವುಗಳ ಕಾಲ ಕುರಿತಾದ ಪೊಳ್ಳುತನ, ಸುಳ್ಳುತನದ ವಾದಗಳನ್ನು ಬಯಲಿಗಿಟ್ಟು ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಬೀದಿಗೆಳೆದು ಲಿಂಗಾಯತ ಧರ್ಮದ ಇತಿಹಾಸ ಗುರುತಿಸಲಿಕ್ಕೆ ಪೂಜ್ಯ ಇಮ್ಮಡಿ ಶಿವಬಸವ ಸ್ವಾಮಿಗಳು ಮಹದುಪಕಾರ ಮಾಡಿದ್ದಾರೆ. ಯಾರೂ ಈವರೆಗೆ ಪ್ರತಿಪಾದಿಸದ ಕೆಲವು ವಿಷಯಗಳನ್ನು, ಸತ್ಯಗಳನ್ನು ಬೆಳಕಿಗೆ ತಂದಿದ್ದಾರೆ.

ಸಿದ್ಧಾಂತ ಶಿಖಾಮಣಿಯ ಕಾಲ ನಿರ್ಣಯ

ಸಿದ್ಧಾಂತ ಶಿಖಾಮಣಿಯು **ಲಿಂಗಾಯತ ಧರ್ಮಕ್ಕೆ** ಒತ್ತಟ್ಟಿಗಿರಲಿ ವೀರಶೈವ ಮತಕ್ಕಾದರೂ ಆಧಾರ ಗ್ರಂಥವಾಗಬಲ್ಲುದೆ ಎಂಬ ವಿಷಯವನ್ನು ನಂತರದ (ಅಧ್ಯಾಯ 5)ಲ್ಲಿ

ಪ್ರಸ್ತಾಪಿಸುತ್ತ ಮೊದಲು ಇದರ ರಚನೆಯ ಕಾಲ ನಿರ್ಣಯಕ್ಕೆ ಪ್ರಯತ್ನಿಸುತ್ತೇನೆ.

ಸಿದ್ಧಾಂತ ಶಿಖಾಮಣಿಯ ಕರ್ತೃ ಶಿವಯೋಗಿ ಶಿವಾಚಾರ್ಯ. ಈತ ತನ್ನ ವಂಶದ ಪರಿಚಯ ಮಾಡಿಕೊಡುತ್ತಾನೆ.

ಕಶ್ಚಿದಾಚಾರ ಸಿದ್ಧಾನಾಮಗ್ರಣಿಃ ಶಿವಯೋಗಿನಾಂ ।
ಶಿವಯೋಗೀತಿ ವಿಖ್ಯಾತಃ ಶಿವಜ್ಞಾನ ಮಹೋದಧಿಃ ॥ 13 ॥

ತಾ. ದೀ.: ಶಿವಯೋಗಿಗಳಲ್ಲಿ ಶ್ರೇಷ್ಠನೂ, ಲಿಂಗಾಂಗ ಸಾಮರಸ್ಯ ಬೋಧಕ ಶಿವಜ್ಞಾನಕ್ಕೆ ಸಮುದ್ರನೂ ಆದ ಸಿದ್ಧರಾಮೇಶ್ವರನೆಂಬ ಒಬ್ಬಾನೊಬ್ಬ ಶಿವಾಚಾರ್ಯನು ಸದಾಚಾರ ಸಂಪನ್ನರಾದವರ ವಂಶದಲ್ಲಿ ಹುಟ್ಟಿ ಶ್ರೀ ರೇವಣಸಿದ್ಧೇಶ್ವರ ಕೃಪಾಕಟಾಕ್ಷ ಗರ್ಭಸಂಭೂತನಾಗಿ, ಶಿವಯೋಗಿಯೆಂದು ಪ್ರಸಿದ್ಧನಾಗಿದ್ದನು.

ಶಿವಭಕ್ತಿಸುಧಾಸಿಂಧು ಜೃಂಭಣಾಮಲಚಂದ್ರಿಕಾ।
ಭಾರತೀ ಯಸ್ಯ ವಿದಧೆ ಪ್ರಾಯಃ ಕುವಲಯೋತ್ಸವಂ ॥ 14 ॥

ತಾ. ದೀ.: ಯಾವ ಸಿದ್ಧರಾಮ ಶಿವಯೋಗಿಯ ವಚನವು ಶಿವಭಕ್ತಿಯೆಂಬ ಕ್ಷೀರಸಮುದ್ರವನ್ನು ಉಕ್ಕೇರಿಸುವಲ್ಲಿ ನಿರ್ಮಲವಾದ ಬೆಳ್ದಿಂಗಳಂತೆ ಪರಿಣಮಿಸಿ, ಭೂಮಂಡಲವೆಂಬ ಕನ್ನೈದಿಲೆಗೆ ಸಂತೋಷವನ್ನುಂಟು ಮಾಡಿದ್ದಿತೊ

ತಸ್ಯ ಮಶೇ ಸಮುತ್ಪನ್ನೊ ಮುಕ್ತಾಮಣಿಂ ವಾಮಲಃ।
ಮುದ್ದದೇವಾಭಿದಾಚಾರ್ಯೋ ಮೂರ್ಧನ್ಯಃ ಶಿವಯೋಗಿನಾಂ ॥ 15 ॥

ತಾ. ದೀ.: ಅಂಥ ಸಿದ್ಧರಾಮೇಶ್ವರನ ವಂಶವೆಂಬ ಸಮುದ್ರದಲ್ಲಿ ಶಿವಯೋಗಿ ಶ್ರೇಷ್ಠನಾದ ಮುದ್ದದೇವನೆಂಬ ಆಚಾರ್ಯನು ನಿರ್ಮಲವಾದ ಮುತ್ತಿನಮಣಿಯಂತೆ ಉದಿಸಿದನು.

ಮುದ್ದಾನಾತ್ ಸರ್ವಜಂತೂನಾಂ ಪ್ರಣತಾನಾಂ ಪ್ರಬೋಧತಃ ।
ಮುದ್ದದೇವೇತಿ ವಿಖ್ಯಾತಸಮಾಖ್ಯಾ ಯಸ್ಯ ವಿಶ್ರುತಾ ॥ 16 ॥

ತಾ. ದೀ.: ಸಕಲ ಪ್ರಾಣಿಗಳಿಗೂ ಸಂತೋಷವನ್ನು ಕೊಡುತ್ತಿದ್ದುದರಿಂದಲೂ, ನಮಸ್ಕರಿಸಿದವರಿಗೆ ಶಿವಜ್ಞಾನ ಬೋಧೆಯನ್ನು ಮಾಡುತ್ತಿದ್ದುದರಿಂದಲೂ, ಆ ಆಚಾರ್ಯನಿಗೆ ''ಮುದ್ದದೇವ'' ಎಂಬ ಹೆಸರು ಅನ್ವರ್ಥವಾಗಿಯೂ ರೂಢವಾಗಿಯೂ ಇದ್ದಿತು.

ತಸ್ಯಾಸೀನ್ನಂದನಃ ಶಾಂತಃ ಸಿದ್ಧನಾಥಾಭಿಧಃ ಶುಚಿಃ ।
ಶಿವಸಿದ್ಧಾಂತನಿರ್ಣೇತಾ ಶಿವಾಚಾರ್ಯಃ ಶಿವಾತ್ಮಕಃ ॥ 17 ॥

ತಾ. ದೀ.: ಆ ಮುದ್ದದೇವನಿಗೆ ಪವಿತ್ರನೂ ರಾಗದ್ವೇಷಾದಿರಹಿತನೂ, ಶಿವಸ್ವರೂಪನೂ, ಪತಿ ಪಶುಪಾಶವೆಂಬ ಪದಾರ್ಥತ್ರಯದ ವಿಚಾರವನ್ನು ಮಾಡುವ ಕ್ರಿಯಾ ಚರ್ಯಾ ಜ್ಞಾನ ಯೋಗವೆಂಬ ನಾಲ್ಕು ಪಾದಗಳಿಂದ ಕೂಡಿದ ಶಿವಾಗಮಗಳ ಅರ್ಥವನ್ನು ಸಿದ್ಧಾಂತಗೊಳಿಸುವವನೂ ಆದ ಸಿದ್ಧನಾಥನೆಂಬ ಶಿವಾಚಾರ್ಯನು ಮಗನಾಗಿ ಹುಟ್ಟಿದನು.

ವೀರಶೈವಶಿಖಾರತ್ನಂ ವಿಶಿಷ್ಟಾಚಾರ ಸಂಪದಂ ।

ಶಿವಜ್ಞಾನ ಮಹಾಸಿಂಧುಂ ಯಂ ಪ್ರಶಂಸಂತಿದೇಶಿಕಾ । ॥ 18 ॥

ತಾ. ದೀ.: ಯಾವ ಸಿದ್ಧನಾಥಾಚಾರ್ಯನನ್ನು ಶಿವಯೋಗಿಗಳಿಗೆ ಶಿಖಾಮಣಿ ಎಂಬುದಾಗಿಯೂ, ಸದಾಚಾರ ಸಂಪನ್ನನೆಂಬುದಾಗಿಯೂ ಶಿವಜ್ಞಾನಕ್ಕೆ ಸಮುದ್ರನಾದನೆಂಬುದಾಗಿಯೂ ಗುರೂತ್ತಮರು ಹೊಗಳುತ್ತಿದ್ದರೋ

ಯಸ್ಯಾಚಾರ್ಯಕುಲಜ್ಞಾ ಜ್ಞಾಸ್ತಾ ಮಾಚಾರ ಮಾತೃಕಾಃ ।
ಶಿವಭಕ್ತಿಃ ಸ್ಥಿರಾ ಯಸ್ಮಿನ್ ಯಜ್ಞೇ ವಿಗತವಿಪ್ಲವಾಃ ॥ 19 ॥

ತಾ. ದೀ.: ಸತ್ಪುರುಷರ ಸದಾಚಾರಣೆಯ ಮೇಲ್ಪಂಕ್ತಿಯು ಯಾವ ಸಿದ್ಧನಾಥ ಆಚಾರ್ಯನ ವಂಶದಿಂದ ಉಂಟಾಯಿತೋ, ನಿರ್ದುಷ್ಟವಾದ ನವವಿಧ ಶಿವಭಕ್ತಿಯು ಯಾವ ಸಿದ್ಧನಾಥನ ತಲೆಯಲ್ಲಿ ಸಂಜನಿಸಿತೋ,

ತಸ್ಯ ವೀರಶಿವಾಚಾರ್ಯಶಿಖಾರತ್ನಸ್ಯ ನಂದನಃ ।
ಅಭವಚ್ಛಿವಯೋಗೀತಿ ಸಿಂಧೋರಿವ ಸುಧಾಕರಃ ॥ 20 ॥

ತಾ. ದೀ.: ಅಂಥ ವೀರಶೈವ ಶಿರೋಮಣಿಯಾದ ಸಿದ್ಧನಾಥಾಚಾರ್ಯನಿಗೆ ಸಮುದ್ರದಿಂದ ಚಂದ್ರನು ಉದಿಸಿದಂತೆ ಶಿವಯೋಗಿಯೆಂಬ ಆಚಾರ್ಯನು ಮಗನಾಗಿ ಜನಿಸಿದನು.

ಶಿವಯೋಗಿ → ಮುದ್ದುದೇವ → ಸಿದ್ಧನಾಥ → ಶಿವಯೋಗಿ ಶಿವಾಚಾರ್ಯ ಸದಾಚಾರ ಸಂಪನ್ನನಾದ ಶಿವಯೋಗಿ ಎಂಬ ಆಚಾರ್ಯನಿಂದ ಪ್ರಾರಂಭಿಸಿ, ಆತನ ಮಗ ಮುದ್ದದೇವ, ಅವನ ಮಗ ಸಿದ್ಧನಾಥ. ಈತನ ಮಗ ಶಿವಯೋಗಿ ಶಿವಾಚಾರ್ಯ ಎಂದು ಹೇಳುತ್ತಾನೆ. ಈ ವಂಶಾವಳಿಯಲ್ಲಿ ಬರುವ ಸಿದ್ಧನಾಥ ಎಂದರೆ ವಚನಕಾರ ಸಿದ್ಧರಾಮೇಶ್ವರರೋ ಅಲ್ಲವೊ ? ಸಿದ್ಧರಾಮ ಎಂದು ಬಳಸುವ ಬದಲಿಗೆ ಸಿದ್ಧನಾಥ ಎಂದೇಕೆ ಸಿದ್ಧಾಂತ ಶಿಖಾಮಣಿಯ ಕರ್ತೃ ಬಳಸಿದ್ದಾನೆ ಎಂಬ ಸಂದೇಹ ನಮಗೆ ಬರುವುದು ಸಹಜ. ಸಿದ್ಧರಾಮೇಶ್ವರರ ಭಕ್ತರು ಇಂದಿಗೂ ಸಿದ್ಧನಾಥ ಎಂಬ ಹೆಸರನ್ನು ಸೊಲ್ಲಾಪುರ ಭಾಗದಲ್ಲಿ ಇಟ್ಟುಕೊಳ್ಳುವುದನ್ನು ಕಾಣಬಹುದು. ಸಿದ್ಧನಾಥ, ಸಿದ್ಧೇಶ್ವರ ಎಂಬ ಪದಗಳು ಅಲ್ಲಿ ರೂಢಿಯಲ್ಲಿವೆ. ಆದರೆ ವಚನ ಸಾಹಿತ್ಯದ ಮೂಲಕ ಸಿದ್ಧರಾಮೇಶ್ವರರನ್ನು ತಿಳಿದು, ಆರಾಧಿಸುವ ಜನರು ಸಿದ್ಧೇಶ್ವರ ಎನ್ನುವುದು ಶಿವನ ಒಂದು ಹೆಸರಾಗುವುದು ಎಂದು ಶರಣ ಸೂಚಕವಾಗಿ ಸಿದ್ಧರಾಮೇಶ್ವರ ಎಂದೇ ಬಳಸುತ್ತಾರೆ. ಯೋಗಿನಾಥಾ, ಕಪಿಲಸಿದ್ಧ ಮಲ್ಲಿನಾಥಾ ಎಂಬ ಸಿದ್ಧರಾಮೇಶ್ವರರ ವಚನ ಮುದ್ರಿಕೆಗಳಲ್ಲಿ 'ನಾಥಾ' ಎಂಬ ಪ್ರಯೋಗವನ್ನು ಗಮನಿಸಬಹುದು. ಬಸವ ಧರ್ಮ ಸ್ವೀಕಾರಕ್ಕೆ ಮೊದಲು ಸಿದ್ಧರಾಮೇಶ್ವರರು ಶೈವ ಮಾರ್ಗದಲ್ಲಿ ಒಂದಾದ ಸಿದ್ಧ ಮಾರ್ಗದ ಅನುಯಾಯಿಯಾಗಿರಲೂ ಸಾಕು. ಸಿದ್ಧರಲ್ಲಿ ಶ್ರೇಷ್ಠ ಎಂಬ ಭಾವದಿಂದ ಸಿದ್ಧನಾಥಾ ಎಂಬ ಹೆಸರು ಸಿದ್ಧರಾಮೇಶ್ವರರಿಗೇ ಅನ್ವಯವಾಗುತ್ತದೆ ಎನ್ನಲು ಸಂಕೋಚ ಪಡಬೇಕಾಗಿಲ್ಲ.

ಇದನ್ನು ದೃಢೀಕರಿಸಲು ಇರುವ ಎರಡನೆಯ ಆಧಾರವೆಂದರೆ ಸಿದ್ಧನಾಥನ ತಂದೆಯ ಹೆಸರು ''ಮುದ್ದುದೇವ'' ಎನ್ನುವುದು. ಮುದ್ದು ಎಂಬ ಪದ ಶುದ್ಧ ಕನ್ನಡದ ಪದ.

ಕುಡು ಒಕ್ಕಲಿಗ ಮನೆತನದ ಆತನ ಹೆಸರು ಮುದ್ದೇಗೌಡ. ಸಾಮಾನ್ಯವಾಗಿ ವ್ಯಕ್ತಿಯೊಬ್ಬ ಉನ್ನತ ಸ್ಥಾನವನ್ನು ಅಲಂಕರಿಸಿದ ಮೇಲೆ ಆತನ ಅನುಯಾಯಿಗಳು ಪೂರ್ವಾಶ್ರಮವನ್ನು ಮುಚ್ಚಿಡಲು ಯತ್ನಿಸುವುದು ಭಾರತದಲ್ಲಿ ಅತ್ಯಂತ ಸಹಜ. ಹೀಗಾಗಿ ಮುದ್ದೇಗೌಡನು ಮುದ್ದುದೇವ (ಶಿವಾಚಾರ್ಯ) ಆಗಿಬಿಟ್ಟಿರುವುದರಲ್ಲಿ ಆಶ್ಚರ್ಯವೇನಿಲ್ಲ. ಸಿದ್ಧರಾಮೇಶ್ವರರು ವಿರಕ್ತರು. ಅವರಿಗೆ ಪುತ್ರ ಸಂತಾನವಿಲ್ಲ. ಹಾಗಾದರೆ ಅವರ ವಂಶಸ್ಥ ಶಿವಯೋಗಿ ಶಿವಾಚಾರ್ಯ ಹೇಗೆ ಅವರ ಪುತ್ರನಾಗುವನು ? ಸಾಮಾನ್ಯವಾಗಿ ಯಾರಾದರೂ ವಿಶೇಷ ವ್ಯಕ್ತಿಯಾದಾಗ ಅವರ ಹೆಸರಿನಿಂದ ತಮ್ಮನ್ನು ಗುರುತಿಸಿಕೊಳ್ಳಲೂ ಬಂಧುಗಳು ಪ್ರಯತ್ನಿಸುವರು. ಹೀಗೆ ಶಿವಯೋಗಿ ಶಿವಾಚಾರ್ಯನು ಸಿದ್ಧರಾಮೇಶ್ವರರ ವಂಶಜ.

ಸಿ.ಶಿ (ಸಿದ್ಧಾಂತ ಶಿಖಾಮಣಿ) ಕರ್ತೃ ಶಿವಯೋಗಿ ಹೇಳುವ ಸಿದ್ಧನಾಥ ವಚನಕಾರ ಸಿದ್ಧರಾಮೇಶ್ವರರೇ ಎನ್ನಲು ಇನ್ನೊಂದು ಬಹುದೊಡ್ಡ ಆಧಾರ ನಮಗೆ ಸಿಗುತ್ತದೆ. ಅದೆಂದರೆ, ಮರಿ ತೋಂಟದಾರ್ಯರು ಕ್ರಿ.ಶ. ಸುಮಾರು ಹದಿನೇಳನೆ ಶತಮಾನದಲ್ಲಿ ಕೆಳದಿಯ ಅರಸ ಎರಡನೇ ಬಸಪ್ಪ ನಾಯಕರಿಂದ (ಕ್ರಿ.ಶ. 1667) ಪೋಷಿತರಾಗಿದ್ದರು. ಅವರು ಸಿ.ಶಿ.ಗೆ ''ತತ್ತ್ವಪ್ರದೀಪಿಕಾ'' ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ಇದರ ಆರಂಭದಲ್ಲಿ ಹೀಗೆ ಹೇಳುತ್ತಾರೆ:

''ಅತ್ರ ಕಲಿಕಾಲಪ್ರವೇಶಾನಂತರಂ ಲೋಕಹಿತಾರ್ಥಂ ರೇಣುಕಗಣೇಶ್ವರ ಇತಿ ಪ್ರಸಿದ್ಧೋ ರೇವಣಸಿದ್ಧೇಶ್ವರಃ ಕುಂಭಸಂಭವಾಯ ವೀರಶೈವಶಾಸ್ತ್ರಮುಪದಿಷ್ಟವಾನ್। ತದ ನಂತರಂ ರೇವಣಸಿದ್ದೇಶ್ವರದೃಷ್ಟಿಗರ್ಭಸಂಭೂತಸ್ಸಿದ್ಧರಾಮೇಶ್ವರಸಂಪ್ರದಾಯಪ್ರಸಿದ್ಧೋ ನಿಗಮಾಗಮಪಾರಗಃ ಶಿವಯೋಗೀಶ್ವರ ಇತ್ಯಭಿಧಾನವಾನ್ ಕಶ್ಚಿನ್ಮಾ ಮಾಹೇಶ್ವರಃ ತದ್ರೇಣುಕಾಗಸ್ತ್ಯಸಂವಾದಂ ಸ್ವಶಿಷ್ಯಾನ್ ಬೋಧಯಿತುಂ.........।''

ಇಲ್ಲಿ ಎರಡು ಮಹತ್ವಪೂರ್ಣ ಐತಿಹಾಸಿಕ ಸಂಗತಿಗಳಿವೆ.

1. ಕಲಿಕಾಲ ಪ್ರವೇಶದ ನಂತರ ರೇಣುಕ ಗಣೇಶ್ವರನು ರೇವಣ ಸಿದ್ಧೇಶ್ವರ ಎಂಬ ಹೆಸರಿನಿಂದ ಬೋಧೆ ಮಾಡಿದ್ದು

2. ಈ ರೇವಣಸಿದ್ಧೇಶ್ವರ ದೃಷ್ಟಿಗರ್ಭ ಸಂಭೂತಸಿದ್ಧರಾಮೇಶ್ವರ ಎಂಬುದು

ಇವೆರಡೂ ಬಹಳ ಮಹತ್ವದ ಅಂಶಗಳು. ನಮ್ಮ ದೇಶದಲ್ಲಿ ಜನರು ತಾಯಿತಂದೆಗಳಿಂದ ಜನಿಸಿ ಉನ್ನತ ಸಾಧನೆ ಮಾಡಿದವರನ್ನು ಗೌರವಿಸಬೇಕಾದ ಮನೋಭಾವ ಬೆಳೆಸಿಕೊಳ್ಳದೆ ಇರುವುದರಿಂದ, ಮಹಾತ್ಮರನ್ನು ಘನವಂತರನ್ನು ಮಾಡಲು ಕೈಲಾಸ, ವೈಕುಂಠಗಳ ನೆರವನ್ನು ಶೈವರು, ವೈಷ್ಣವರು ಪಡೆಯುವ ಪ್ರಯತ್ನ ಮಾಡುತ್ತಾರೆ.

ರೇವಣಸಿದ್ಧೇಶ್ವರರು ಐತಿಹಾಸಿಕ ವ್ಯಕ್ತಿ. ಇವರಿಗೆ ಹಿರಿಮೆ ತಂದುಕೊಡಲು ಹಿಡಿದು ತಂದ ರೇಣುಕ ಗಣಾಧೀಶ್ವರ ಕಾಲ್ಪನಿಕ ಪಾತ್ರ; ಕೈಲಾಸದ ಬಾಗಿಲು ಕಾಯುವ ದ್ವಾರಪಾಲಕ. ರೇವಣಸಿದ್ಧೇಶ್ವರ ಐತಿಹಾಸಿಕ ಅಸ್ತಿತ್ವದ ಬಗ್ಗೆ ಯಾವ ಸಂದೇಹವೂ ಇಲ್ಲ. ಇದನ್ನು ಡಾ!! ಚಿದಾನಂದ ಮೂರ್ತಿಯವರೂ ಸಮರ್ಥಿಸುತ್ತಾರೆ (ವಚನ ಶೋಧ).

ನಾನೂ ಮುಂದಿನ ಅಧ್ಯಾಯ ಒಂದರಲ್ಲಿ ವಿವರವಾಗಿ ಬರೆಯಲಿದ್ದೇನೆ.

ರೇವಣಸಿದ್ಧರು ಸಂಚರಿಸುತ್ತಾ ಸೊನ್ನಲಿಗೆಗೆ ಬಂದಾಗ ಸ್ವಯಂ ಪ್ರೇರಣೆಯಿಂದ ಒಂದು ಓಣಿಯತ್ತ ಸಾಗುವರು. ಅಲ್ಲಿ ಹೋಗಿ ಒಂದು ಮನೆಯ ಬಳಿ ನಿಲ್ಲುವರು. ಶಿಷ್ಯರು ಜನರೂ ಆಶ್ಚರ್ಯಚಕಿತರಾಗುತ್ತಾರೆ. ಮಧ್ಯವಯಸ್ಸು ದಾಟಿದ ನಂತರ ಗರ್ಭಿಣಿಯಾಗಿದ್ದ ಸುಗ್ಗವ್ವೆ ಮಹಾತ್ಮರಿಗೆ ನಮಸ್ಕರಿಸಲು ಬಂದಾಗ ರೇವಣಸಿದ್ಧರು ಆಕೆಗೆ ತಲೆಬಾಗುತ್ತಾರೆ. ಗಾಬರಿಗೊಂಡ ಆಕೆ, ''ತಮ್ಮಂತಹ ಮಹಾತ್ಮರು ನನಗೆ ನಮಿಸುವುದೇ ?'' ಎಂದು ಸಂಕೋಚಗೊಂಡಾಗ, ''ನಾನು ನಮಸ್ಕರಿಸಿದ್ದು ನಿನಗಲ್ಲ; ನಿನ್ನೊಳಗೆ ಬೆಳೆಯುತ್ತಿರುವ ಶಿವನ ಚಿತ್ಕಳೆಗೆ '' ಎನ್ನುತ್ತಾರೆ. ಹುಟ್ಟುವ ಮಗುವಿಗೆ ಸಿದ್ಧ-ರಾಮ ಎಂದು ಹೆಸರಿಡಲು ಹೇಳಿ ಮುನ್ನಡೆಯುತ್ತಾರೆ. ಹೀಗೆ ಸಿದ್ಧರಾಮೇಶ್ವರರು ತಾಯಿಯ ಗರ್ಭದಲ್ಲಿರುವಾಗಲೇ ರೇವಣಸಿದ್ಧರಂಥ ಮಹಾತ್ಮರ ಕೃಪಾದೃಷ್ಟಿಗೆ 'ಬಿದ್ದವರು'.

ಸಿದ್ಧರಾಮರ ವಂಶಜನೇ ಆಗಿದ್ದರೂ ಶಿವಯೋಗಿ ಶಿವಾಚಾರ್ಯನು ಬಸವಾದಿ ಪ್ರಮಥರು ಬೋಧಿಸಿದ ಮಾರ್ಗವನ್ನು ಅನುಸರಿಸದೆ ಅಲಿಂಗಿ ಶೈವ ಮಾರ್ಗವನ್ನೇ ಹಿಡಿದಿರುವುದನ್ನು ಸಿದ್ಧಾಂತ ಶಿಖಾಮಣಿಯ ಮೂಲಕ ತಿಳಿಯಬಹುದು. ಸಿದ್ಧನಾಥನು ಶೈವ ಮಾರ್ಗಾನುಯಾಯಿಯಾಗಿರುವಾಗ ಅಲ್ಲಮಪ್ರಭುದೇವರು ಬಂದು ಛೇಡಿಸಿ, ವಿಡಂಬಿಸಿ ಪರಿವರ್ತನೆಗೊಳಿಸಿ, ಕಲ್ಯಾಣಕ್ಕೆ ಕರೆತಂದರು. ಇಷ್ಟಲಿಂಗ ಧಾರಣೆಯನ್ನು ಬಡಪೆಟ್ಟಿಗೆ 'ಸಿದ್ಧ'-ನಾಥನು ಒಪ್ಪಲಿಲ್ಲ. ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಮನವರಿಕೆ ಮಾಡಿಕೊಟ್ಟ ಬಳಿಕ ಅವರಿಂದಲೇ ಇಷ್ಟಲಿಂಗ ದೀಕ್ಷೆ ಪಡೆದ ಸಿದ್ಧರಾಮೇಶ್ವರರು ಶರಣ ಧರ್ಮದ ಅಪೂರ್ವ ಮಾಣಿಕ್ಯ, ಷಡುಗಣಾಧೀಶರಲ್ಲಿ ಒಬ್ಬರು, ಶೂನ್ಯಪೀಠದ ಮೂರನೆಯ ಅಧಿಕಾರಿ. ಸಿದ್ಧರಾಮೇಶ್ವರರಿಗೆ ಚನ್ನಬಸವಣ್ಣನವರಿಂದ ದೀಕ್ಷೆಯಾಗಲಿಲ್ಲ ಎಂಬ ಕಟ್ಟು ಕಥೆ ಹೆಣೆದು ಸಮಾಜವನ್ನು ದಾರಿತಪ್ಪಿಸಲು ಬಯಸಿ ಪಂಚಾಚಾರ್ಯವಾದಿಗಳ ಮುಖಕ್ಕೆ ಮಸಿ ಬಳಿದು ಕನ್ನಡಿ ಹಿಡಿಯುತ್ತವೆ ಬಸವ ಸ್ತೋತ್ರ ತ್ರಿವಿಧಿ, ಮಿಶ್ರ ಸ್ತೋತ್ರ ತ್ರಿವಿಧಿ. ವಚನ ಸಾಹಿತ್ಯದ ಕೆಲವು ಪದಗಳನ್ನು ಶಿವಯೋಗಿ ಶಿವಾಚಾರ್ಯನು ಸಿದ್ಧಾಂತ ಶಿಖಾಮಣಿಯಲ್ಲಿ ಬಳಸಿದ್ದರೂ ವಚನ ವಾಙ್ಮಯದಲ್ಲಿ ಆ ಪದಗಳು, ಅವುಗಳ ಪರಿಕಲ್ಪನೆಯಲ್ಲಿರುವ ಜೀವಂತಿಕೆಯನ್ನು ಇಲ್ಲಿ ಕಾಣಲಾಗುವುದಿಲ್ಲ. ಹೆಮ್ಮೆಯಿಂದ ಸಿದ್ಧರಾಮೇಶ್ವರರ ವಂಶಜ ಎಂದು ಹೇಳಿಕೊಂಡರೂ ಅವರಂತೆ ಇಷ್ಟಲಿಂಗಕ್ಕೆ ಮಹತ್ವ ಕೊಡದೆ ಕ್ರಿಯಾಲಿಂಗಕ್ಕಿಂತಲೂ ಒಳಗಣ ಜ್ಞಾನಲಿಂಗವೇ ಮುಖ್ಯ ಎಂದು ಶಿವಯೋಗಿ ಶಿವಾಚಾರ್ಯನು (ಇಷ್ಟ) ಲಿಂಗವಿರಹಿತ ಆಚರಣೆಗೇ ಮಹತ್ವ ನೀಡಿದ್ದಾನೆ.

ವಿಹಾಯ ಬಾಹ್ಯ ಲಿಂಗಾನಿ ಚಿಲ್ಲಿಂಗಂ ಮನಸಿ ಸ್ಮರನ್
ಪೂಜಯೇದ್ಭಾವ ಪುಷ್ಪೈರ್ಯೋಭಾವ ಲಿಂಗೀತಿ ಕಥ್ಯತೇ ॥ 41 ॥

ಯಾವನು (ಮಣ್ಣು, ಕಲ್ಲು ಮುಂತಾದವುಗಳಿಂದ ನಿರ್ಮಾಣವಾದ) ಬಾಹ್ಯ ಲಿಂಗಗಳನ್ನೆಲ್ಲ ಬಿಟ್ಟು ಚಿನ್ಮಯ ಆಂತರಿಕ ಲಿಂಗವನ್ನು ಮನಸ್ಸಿನಲ್ಲಿ ಸ್ಮರಿಸುವನೋ, ಭಾವ

ಪುಷ್ಪದಿಂದ ಆರಾಧಿಸುವನೋ ಅವನನ್ನು ''ಭಾವಲಿಂಗಿ'' ಎಂದು ಕರೆಯಲಾಗುವುದು.

ಕ್ರಿಯಾರೂಪಾತು ಯಾ ಪೂಜಾ ಸಾಜ್ಞೇಯಾಸ್ವಲ್ಪಸಂವಿದಾ
ಅಂತರಾಭಾವ ಪೂಜಾತು ಶಿವಸ್ಯಜ್ಞಾನಿನಾಂ ಮತಾ ॥ 44 ॥

ಜಲಪುಷ್ಪಾದ್ಯರ್ಚನರೂಪ ಬಾಹ್ಯ ಕ್ರಿಯೆಯಿಂದ ಕರ್ಮಕಾಂಡೋಕ್ತ ರೀತಿಯಲ್ಲಿ ಶಿವಲಿಂಗ ಪೂಜೆಯನ್ನು ಮಾಡುವುದಾವುದುಂಟೋ ಅದು ಅಲ್ಪಜ್ಞಾನಿಗಳಿಗೆ ಮಾತ್ರವೇ ಸಮ್ಮತವಾದುದೆಂದು ಅರಿಯಬೇಕು. ಜ್ಞಾನಕಾಂಡ ಪ್ರಸಿದ್ಧವಾದ ಆಂತರಿಕ ಪೂಜೆಯಾದರೋ, ಪರಿಪೂರ್ಣ ಶಿವಜ್ಞಾನಿಗಳಿಗೆ ಸಂಮತವಾದುದೆಂದು ಅರಿಯಬೇಕು.

ಈ ಶ್ಲೋಕವು ಅತ್ಯಂತ ಸ್ಪಷ್ಟವಾಗಿ ಬಸವೋಕ್ತ ಲಿಂಗಾಯತ ಧರ್ಮಕ್ಕೆ ಹೊರತಾದ ವಿಚಾರವನ್ನು ಸಿದ್ಧಾಂತ ಶಿಖಾಮಣಿ ಪ್ರತಿಪಾದಿಸುತ್ತಿದೆ ಎಂಬುದನ್ನು ನಾವು ಅರಿಯಬಹುದು. ಏಕೆಂದರೆ ಅಲ್ಲಿ ಇಷ್ಟಲಿಂಗಧಾರಣೆ, ಅದರ ಪೂಜೆ ಕಡೆಯ ಕ್ಷಣದವರೆಗೂ ಕಡ್ಡಾಯ.

''ಕನ್ನಡದಲ್ಲಿ ಸಿದ್ಧಾಂತಶಿಖಾಮಣಿಯನ್ನು ಕ್ರಿ.ಶ. 1917ರಲ್ಲಿ ವಿಸ್ತಾರವಾದ ಟಿಪ್ಪಣಿಯೊಡನೆ ಅದೇ ಎನ್.ಆರ್. ಕರಿಬಸವಶಾಸ್ತ್ರಿಗಳು ಪ್ರಕಟಿಸಿದರು. ಅದರ ಪೀಠಿಕೆಯಲ್ಲಿ ಅವರು ಯಾವುದೇ ಆಧಾರಗಳನ್ನು ನೀಡದೆ, 'ಸಿದ್ಧಾಂತ ಶಿಖಾಮಣಿಯು ಬಸವಾದಿ ಪ್ರಮಥರ ಅವತಾರಕ್ಕಿಂತಲೂ ಹಿಂದಣದ್ದಾಗಿರಬೇಕು' ಎಂಬ ಕಲ್ಪನೆಯ ಬೀಜವನ್ನು ಬಿತ್ತಿದರು''

ಸಿದ್ಧಾಂತ ಶಿಖಾಮಣಿಯು ಬಸವ ಪೂರ್ವದ್ದು ಎಂದು ಸಾಧಿಸಲು ಪ್ರಯತ್ನಿಸುವವರು ಕೊಡುವ ಕಾರಣಗಳು ಮೂರು

1. ಸಿದ್ಧಾಂತ ಶಿಖಾಮಣಿಯಲ್ಲಿರುವ ಒಂದು ಶ್ಲೋಕ ಬಸವಣ್ಣನವರ ವಚನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

ನೀನೊಲಿಯಿತ್ತೇ ಪುಣ್ಯ; ನೀನೊಲ್ಲದುದೆ ಪಾಪ
ಸಕಲ ಜಗದೊಳಗೆ ಅನುಶ್ರುತನಾಗಿಪ್ಪೆಯಯ್ಯಾ.
ನೀನೊಲಿದವನೆ ನಿಮ್ಮನರಿವನು.
ನೀನೊಲಿದವನೆ ಧನ್ಯ, ಜಗಕ್ಕೆ ಪಾವನ, ಲಿಂಗದೇವಾ. ಬ.ವ.ದೀ 503

ಪ್ರವಾಹದಲ್ಲಿ ಮುಳುಗುವ ಗಾಬರಿಯಲ್ಲಿರುವವನು ಒಂದು ಹುಲ್ಲುಕಡ್ಡಿ ಸಿಕ್ಕರೂ ಅದು ತನ್ನನ್ನು ಸಂರಕ್ಷಿಸಬಹುದೆಂಬ ಆಶೆಯನ್ನು ಹೊಂದುವಂತೆ ಈ ಶ್ಲೋಕದ ಬಲದಿಂದ ತಮ್ಮ ಸುಳ್ಳಿನ ಕಥೆಗಳನ್ನು ಉಳಿಸಿಕೊಳ್ಳಲು ಕಾಶಿಯ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಶಿವಾಚಾರ್ಯರು ಮುಂತಾದವರು ಪ್ರಯತ್ನಿಸುತ್ತಿದ್ದಾರೆ. ಡಾ॥ ಚಿದಾನಂದ ಮೂರ್ತಿ ಒಬ್ಬ ಪ್ರಾಮಾಣಿಕ ಸಂಶೋಧಕರಾಗಿ, ''ಸಿ.ಶಿಯ ಕಾಲ ಕ್ರಿ.ಶ. 1160-80 ಕ್ಕಿಂತ ನಿಶ್ಚಿತವಾಗಿಯೂ ಹಿಂದೆಯಲ್ಲ, ಬಹುಶಃ 13-14ನೇ ಶತಮಾನದ ಕೃತಿ'' ಎಂದು ಹೇಳಿದ್ದಾರೆ. (ವಚನ ಶೋಧ ಡಾ॥ ಎಂ. ಚಿದಾನಂದ ಮೂರ್ತಿ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು 1998, 2/42) ಆದರೆ ಜಾತಿವಾದ ಪ್ರೇರಿತರಾಗಿ ನಂತರ ಬರೆದ ''ವೀರಶೈವ

ಧರ್ಮ ಭಾರತೀಯ ಸಂಸ್ಕೃತಿ,'' ಎಂಬ ಗ್ರಂಥದಲ್ಲಿ 'ಸಿ.ಶಿ. ಕೃತಿ ಬಸವನಿಗಿಂತ ಪ್ರಾಚೀನ ಎಂಬುದರಲ್ಲಿ ಅನುಮಾನವಿಲ್ಲ' ಎನ್ನುತ್ತಾರೆ. ಆದರೆ ಅವರ ಅಂತರಾತ್ಮ ಸುಳ್ಳು ಹೇಳಲು ತಡೆ ಒಡ್ಡಿದ ಕಾರಣ ಈ ಶ್ಲೋಕ ವಾತುಲಾಗಮದ್ದಾದರೆ ಬಸವ(ಣ್ಣನವರು) ಅಲ್ಲಿಂದ ತೆಗೆದುಕೊಂಡಿರುವ ಸಾಧ್ಯತೆಯಿದೆ'' ಎಂದಿದ್ದಾರೆ. ಡಾ॥ ಇಮ್ಮಡಿ ಶಿವಬಸವ ಸ್ವಾಮಿಗಳು ಬಹಳಷ್ಟು ಪುರಾತನ ಗ್ರಂಥಗಳಲ್ಲಿ ಈ ಶ್ಲೋಕದ ಉಲ್ಲೇಖ ಬಂದಿರುವುದನ್ನು ದೃಢಪಡಿಸಿದ್ದಾರೆ.

1. ಕ್ರಿ.ಶ. 11ನೆಯ ಶತಮಾನದ ಆದಿ ಭಾಗದಲ್ಲಿದ್ದ 'ಮಲ್ಲಿನಾಥನ ಮಗ ಜ್ಯೋತಿರ್ನಾಥ ತಾನು ಬರೆದ 'ಶೈವ ರತ್ನಾಕರ' ಕೃತಿಯಲ್ಲಿ ಈ ಶ್ಲೋಕವನ್ನು ಉಲ್ಲೇಖಿಸಿದ್ದಾನೆ. ಇದಕ್ಕೆ ಮೂಲ ವಾತುಲಾಗಮ ಎಂದು ತಿಳಿಸಿದ್ದಾನೆ. ಇನ್ನೂ ಒಂದು ಕಡೆ ಈ ಶ್ಲೋಕವನ್ನು ಉಲ್ಲೇಖಿಸಿದ್ದು ಇದನ್ನು ಲಿಂಗ ಪುರಾಣದ್ದು ಎಂದು ಪ್ರಸ್ತಾಪಿಸಿದ್ದಾನೆ.

ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ।
ಯಥೈವಾಂಕುರತೋ ಬೀಜ ಬೀಜತೋ ವಾ ಯಥಾಂಕುರಃ॥

ಶೈವ ಮಾರ್ಗವು ವೈದಿಕ ಮಾರ್ಗದಂತೆ ಕರ್ಮಕಾಂಡಕ್ಕೆ, ಶುದ್ಧ ವೇದಾಂತದಂತೆ ಜ್ಞಾನ ಮಾರ್ಗಕ್ಕೆ ಒತ್ತು ಕೊಡದೆ ಭಕ್ತಿಮಾರ್ಗಕ್ಕೆ ಮಹತ್ವ ನೀಡುತ್ತದೆ. ದೇವನ ಅನುಗ್ರಹ, grace ಬಹಳ ಮುಖ್ಯ. ಒಂದು ಪ್ರಶ್ನೆ ಸಾಧಕರನ್ನು ಕಾಡುತ್ತದೆ. ದೇವನ ಕೃಪೆಯಾದಾಗ (ಅವನ ದೃಷ್ಟಿ ಬಿದ್ದಾಗ) ಭಕ್ತಿಯು ನೆಲೆಗೊಳ್ಳುವುದೋ ಅಥವಾ ಭಕ್ತಿಯು ವಿಕಸಿತವಾದಾಗ ದೇವನ ಕಾರುಣ್ಯ ಅವತೀರ್ಣವಾಗುವುದೋ ? ಈ ಪ್ರಶ್ನೆಗೆ ಉತ್ತರ ಬಹಳ ಕಠಿಣ, ಬೀಜ ಮೊದಲೋ ವೃಕ್ಷ ಮೊದಲೋ ಎಂಬ ತರ್ಕದಂತೆ. ಇದನ್ನು ಬಸವಣ್ಣನವರು ತಮ್ಮ ವಚನದಲ್ಲಿ ಉಲ್ಲೇಖಿಸುತ್ತಾರೆ. ಸಿದ್ಧಾಂತ ಶಿಖಾಮಣಿಯಲ್ಲಿ ಈ ಶ್ಲೋಕವಿದೆ. ಆದ್ದರಿಂದ ಬಸವಣ್ಣನವರಿಗೂ ಪೂರ್ವದ್ದು ಎಂಬ ತರ್ಕವನ್ನು ನಿರಾಕರಿಸಿ ಈ ಶ್ಲೋಕವು ವಾತುಲಾಗಮ ಮತ್ತು ಲಿಂಗ ಪುರಾಣಗಳಲ್ಲಿ ಇರುವಂಥದು ಎಂದು ಹೇಳಬಹುದು. ಜ್ಯೋತಿರ್ನಾಥನು ಹನ್ನೊಂದನೆಯ ಶತಮಾನದ ಆದಿ ಭಾಗದಲ್ಲಿದ್ದು ತಾನು ವಿವರಿಸುವ ವಿಷಯಗಳಿಗೆ ಸಂಬಂಧಿಸಿದ ಆಧಾರ ಗ್ರಂಥಗಳನ್ನು ಹೆಸರಿಸಿದ್ದಾನೆ. ಶೈವ ರತ್ನಾಕರದಲ್ಲಿ ಸೋಮಶಂಭು, ವಾಯವೀಯ ಸಂಹಿತೆ, ವಾತುಲ ತಂತ್ರ, ಸ್ಕಾಂದ ಪುರಾಣ, ಶಿವಪುರಾಣ, ಕೂರ್ಮಪುರಾಣ, ಶಿವ ಧರ್ಮ, ವೀರಭದ್ರೀಯ, ಭೀಮಾಗಮ, ಶಿವರಹಸ್ಯ, ಕಾಮಿಕಾಗಮ ಮುಂತಾದ ನಲವತ್ತಕ್ಕಿಂತಲೂ ಹೆಚ್ಚಿನ ಗ್ರಂಥಗಳನ್ನು ಸೂಚಿಸಿದ್ದಾನೆ. ಸಿದ್ಧಾಂತ ಶಿಖಾಮಣಿಯ ಹೆಸರು ಪ್ರಸ್ತಾಪಿಸಿಲ್ಲ. ಒಂದು ವೇಳೆ ಮೂಲತಃ ಈ ಶ್ಲೋಕ ಸಿ.ಶಿ.ಯದಾಗಿದ್ದರೆ ಅವನು ಉಲ್ಲೇಖಿಸದೆ ಇರುತ್ತಿದ್ದನೆ ? ಕೇವಲ ಬಸವಣ್ಣನವರ ವಚನಗಳಲ್ಲಿ ಕಾಣಿಸಿಕೊಳ್ಳುವ ಈ ಶ್ಲೋಕದ ಆಧಾರವಿಡಿದು ಸಿ.ಶಿ. ಬಸವ ಪೂರ್ವದ್ದು ಎನ್ನಲು ಸಾಧ್ಯವಿಲ್ಲ. ವೇದಾಗಮಪುರಾಣಗಳಲ್ಲಿ ಅಪಾರ ಪಾಂಡಿತ್ಯವಿದ್ದ ಬಸವಣ್ಣನವರು ಲಿಂಗಪುರಾಣ, ವಾತುಲಾಗಮ, ಶಿವಪುರಾಣ ಮುಂತಾದ ಗ್ರಂಥಗಳಿಂದ ಆಯ್ದುಕೊಂಡಿರಬಹುದು.

ಧರ್ಮ ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಬರೆದಿರುವ ಕೆಲವು ವಚನಗಳಲ್ಲಿ ಸಂಸ್ಕೃತ ಶ್ಲೋಕಗಳು ಉದ್ಧೃತವಾಗಿರುವುದು ಸರಿಯಷ್ಟೆ. ಅಂಥ ಒಂದು ಶ್ಲೋಕದಲ್ಲಿ ಬರುವ ಒಂದು ಭಾಗ ''ಮುಕ್ತಃ ಶಿವ ಸಮೋಭವೇತ್ '' ಎಂಬುದನ್ನು ಆಧಾರವಾಗಿ ಇಟ್ಟುಕೊಂಡು, ''ಸಿದ್ಧಾಂತ ಶಿಖಾಮಣಿಯು ಶ್ರೀಕಂಠ ಶಿವಾಚಾರ್ಯನಿಗಿಂತಲೂ ಪೂರ್ವದ್ದು'' ಎಂಬ ವಾದವನ್ನು ಪ್ರಥಮವಾಗಿ 1942ರಲ್ಲಿ ಶ್ರೀಮುರುಘೇಂದ್ರ ಶಿವಾಚಾರ್ಯರು ಮಂಡಿಸಿದರು. 1948ರಲ್ಲಿ ಕಾಶೀನಾಥ ಶಾಸ್ತ್ರಿಗಳು ಪ್ರಬಲವಾಗಿ ಇದನ್ನು ಅನುಮೋದಿಸಿದರು. ಚನ್ನಬಸವಣ್ಣನವರ ಒಂದು ವಚನದಲ್ಲಿ ಈ ಶ್ಲೋಕವು ಹೀಗೆ ಬಂದಿದೆ:

ಶಿವನ ಭಕ್ತಿಯೇ ಶಿವಾನುಗ್ರಹಕ್ಕೆ ಕಾರಣವಾಗಿರ್ಪುದು ನೋಡಾ।
ಶಿವಾನುಗ್ರಹವೆ ಇಹಪರ ಸುಖಕ್ಕೂ ಪರಮಾನಂದ ಪ್ರಾಪ್ತಿಗೂ
ಕಾರಣವಾಗಿರ್ಪುದು ನೋಡಾ
ಯೋಗೇನ ತು ಪರಾ ಭಕ್ತಿಃ ಪ್ರಸಾದಸ್ತದನಂತರಮ್।
ಪ್ರಸಾದಾನ್ಮುಚ್ಯತೇ ಜಂತುರ್ಮುಕ್ತಶ್ಶಿವಸಮೋ ಭವೇತ್ ॥
ಎಂದಿಹುದನಾರಯ್ಯದೆ, ಎನ್ನ ನಂಬುಗೆ ಎನ್ನ ಕಟ್ಟು ಕ್ರಿಯಾದಿಗಳಿಂದ
ಸರ್ವಸುಖ ಪಡೆವೆನೆಂಬ ಜೀವಭಾವದ ಹಮ್ಮಿನ ಬಿಮ್ಮು ಹತ್ತಿ
ಮುಂದುಗಾಣದ ಮಂದಮತಿಗೆ ಮೆಚ್ಚುವರೆ
ಕೂಡಲಚೆನ್ನಸಂಗಯ್ಯನ ಶರಣರು ?

ಸಿದ್ಧಾಂತ ಶಿಖಾಮಣಿಯಲ್ಲಿನ ಈ ಶ್ಲೋಕ ಹೀಗಿದೆ:

ಪ್ರಸನ್ನೇ ಸತಿ ಮುಕ್ತೋಽಭೂತ್ ಮುಕ್ತಃ ಶಿವಸಮೋ ಭವೇತ್।
ಅಲ್ಪಭಕ್ತ್ಯಾಪಿ ಯೋ ಮರ್ತ್ಯಃ ತಸ್ಯ ಜನ್ಮ ಕ್ರಮಾತ್ ಪರಮ್॥ (ಸಿ.ಶಿ. 9/14)

ಶ್ರೀಕಂಠ ಶಿವಾಚಾರ್ಯನ ಕಾಲ ಕ್ರಿ.ಶ. 1270. ಜ್ಯೋತಿರ್ನಾಥನು 11ನೆಯ ಶತಮಾನದಲ್ಲಿ ರಚಿಸಿದ ಶೈವ ರತ್ನಾಕರದಲ್ಲಿ ''ಮುಕ್ತಃ ಶಿವಸಮೋ ಭವೇತ್'' ಎಂಬ ಪಾದಾಂಶವಿರುವ ಒಂದು ಶ್ಲೋಕವನ್ನು ಉದಾಹರಿಸಿದ್ದಾನೆ.

ಜ್ಞಾನೇನ ಹಿ ಪರಾ ಭಕ್ತಿಃ ಪ್ರಸಾದಸ್ತದನಂತರಮ್।
ಪ್ರಸಾದಾನ್ಮುಚ್ಯತೇ ಜಂತುಃ ಮುಕ್ತಃ ಶಿವಸಮೋ ಭವೇತ್ ॥

ಈ ಶ್ಲೋಕಕ್ಕೆ ಮೂಲ ಆಕರ ವೀರತಂತ್ರ ಎಂದು ಜ್ಯೋತಿರ್ನಾಥನು ಹೇಳಿದ್ದಾನೆ. ಚನ್ನಬಸವಣ್ಣನವರ ವಚನದಲ್ಲಿ ಬಂದಿರುವ ಪೂರ್ಣ ಶ್ಲೋಕವು ಬೇರೆಯೇ ಇದ್ದು ಅದರಲ್ಲಿ ''ಮುಕ್ತಃ ಶಿವ ಸಮೋ ಭವೇತ್'' ಮಾತ್ರ ಇದೆ. ಆದ್ದರಿಂದ ಕೇವಲ ಈ ಅರ್ಧ ವಾಕ್ಯದ ಆಧಾರದ ಮೇಲೆಯೇ ಸಿದ್ಧಾಂತ ಶಿಖಾಮಣಿಯನ್ನು ಬಸವ ಪೂರ್ವದ್ದು ಎನ್ನಲು ಬರದು. ಇಂಥ ವಿಚಾರ ಶಿವಪುರಾಣ, ಆಗಮ, ತಂತ್ರಗಳಲ್ಲೆಲ್ಲ ಕಾಣಿಸಿಕೊಂಡಿವೆ. ನೀಲಕಂಠ ಶಿವಾಚಾರ್ಯ ಎಂಬ 1400 ರಲ್ಲಿದ್ದ ವಿದ್ವಾಂಸನು ಈ ಶ್ಲೋಕವು ಶಿವ ಪುರಾಣದ ವಾಯವೀಯ ಸಂಹಿತೆಯದು ಎಂದಿದ್ದಾನೆ.

ಮುಂದುವರಿಯುವುದು ....

ಸಮಸ್ಯೆ ? - ಸಮಾಧಾನ !

- ಮಾತಾಜಿ

- ಸಿದ್ಧಾರ್ಥ ಶೆಟಕಾರ್, ಹೈದರಾಬಾದ್

? ನನ್ನ ಅಜ್ಜಿಗೆ 53 ವರ್ಷ, ಮನೆಯಲ್ಲಿ ಲಕ್ಷ್ಮಿ ಪೂಜೆ, ತುಳಜಾ ಭವಾನಿ ಪೂಜೆ, ಸಾಮೂಹಿಕ ಭಜನೆ ಮಾಡುತ್ತಾರೆ. ಭಜನೆ ಮಾಡುವಾಗ ಭವಾನಿ ಮೈಮೇಲೆ ಬಂದಳು ಎಂದು ಕುಣಿಯುತ್ತಾರೆ. ದೇವರು ಹೀಗೆ ಮೈಮೇಲೆ ಬರುವುದುಂಟೆ?

★ ಕೆಲವರು ಜನರನ್ನು ವಂಚಿಸಲು, ದುಡ್ಡು ಸೆಳೆಯಲು ದೇವರು ಮೈಮೇಲೆ ಬಂದಿರುವುದೆಂದು ನಟಿಸುವುದುಂಟು. ಇನ್ನು ಕೆಲವರು ತಮ್ಮ ಮಹತ್ವ ಹೆಚ್ಚಿಸಿಕೊಳ್ಳಲು, ಎಲ್ಲರ ಗಮನ ಸೆಳೆಯಲು ಹೀಗೆ ಮಾಡುವುದುಂಟು. ಮತ್ತೆ ಕೆಲವರು, ಸ್ವಭಾವತಃ ಮುಗ್ಧರು ತಮಗೆ ತಾವೇ ದೇವರು ಬಂದಿರುವುದೆಂಬ ಭ್ರಾಂತಿಗೆ ಒಳಗಾಗಿ, ಸಮ್ಮೋಹಿತರಾಗಿ (self-hypnotism)ನರ್ತಿಸುವುದುಂಟು, ವರ್ತಿಸುವುದುಂಟು. ದೇವರ ದಿವ್ಯಾನುಭವ ಸಂತರಿಗೆ ಆಗುವುದು ಅಸಾಧ್ಯವೇನಲ್ಲ, ಅಸಹಜವೂ ಅಲ್ಲ. ದಿವ್ಯಾನುಭವಕ್ಕೆ ಅಲ್ಲಿ ಜ್ಞಾನವೇ ತಳಹದಿಯಾಗಿರುತ್ತದೆ ಮತ್ತು ದಿವ್ಯಾನುಭವ ಹೊಂದಿದವರು ಉದ್ರಿಕ್ತರಾಗಿ, ಆವೇಶದಿಂದ ವರ್ತಿಸದೆ (ಶಂಭುಲಿಂಗವನೊಲಿಸಿ ಗಂಭೀರ ಸುಖದೊಳಿರುವಂತಹ-ನಿಜಗುಣ ಶಿವಯೋಗಿಗಳು) ಸ್ಥಿರವಾಗಿ ಉರಿಯುವ ಪ್ರಶಾಂತ ದೀಪದಂತೆ, ಗಂಭೀರವಾದ ಶಾಂತಿಯನ್ನು ಹೊಂದುವರು.

- ನಾಗಶೆಟ್ಟಿ ಕೆ. ಶೆಟಕಾರ

? ಓಂಕಾರದ ಅಗತ್ಯ 'ಶ್ರೀ ಗುರುಬಸವ ಲಿಂಗಾಯ ನಮಃ' ಮಂತ್ರಕ್ಕಿದೆಯೆ ?

★ ಖಂಡಿತಾ ಇದೆ. ಎಲ್ಲಕ್ಕೂ ಮೂಲವೇ 'ಓಂ', ಆದ್ದರಿಂದ ಗಾಯಿತ್ರಿ ಮಂತ್ರವಾಗಲಿ, ಶಿವ ಷಡಕ್ಷರಿಯಾಗಲಿ, ವಿಷ್ಣು ಮಂತ್ರವಾಗಲೀ ಓಂಕಾರ ಸಹಿತವಾಗಿ ಉಚ್ಚರಿಸಲ್ಪಡುವುದು. ಪರಮಾತ್ಮನ ನಾಮವೇ ಓಂಕಾರ, ಸ್ವರೂಪವೂ ಓಂಕಾರ. ಬೌದ್ಧ, ಜೈನ, ಸಿಖ್ ಧರ್ಮಗಳಲ್ಲಿ ಸಹ ಓಂಕಾರ ಪಠಣವಿದೆ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ದ್ವಾದಶಾಕ್ಷರ ಮಂತ್ರವಾಗುವುದರಿಂದ ಸಮಗ್ರವೂ, ಪರಿಪೂರ್ಣವೂ ಆಗುತ್ತದೆ.

- ಸವಿತಾ ರಾಣಿ, ಬೆಂಗಳೂರು

? ಓರ್ವ ವಿಚಾರವಾದಿ ಸ್ವಾಮಿಗಳು ಸಾರ್ವಜನಿಕ ಸಭೆಯೊಂದರಲ್ಲಿ 'ಸ್ವಾಮಿತ್ವ ಒಂದು ಬಂಧನ' ಎಂದು ಹೇಳಿದರು. ನಿಮಗೂ ಹಾಗೆ ಅನ್ನಿಸುವುದೆ ?

★ ಅವರವರ ಆದರ್ಶಕ್ಕೆ ತಕ್ಕಂತೆ ಅವರು ಭಾವಿಸುತ್ತಾರೆ. ಯಾರದೋ ಒತ್ತಡಕ್ಕೆ ಅಥವಾ ಯಾವುದೋ ಆಸೆ-ಆಕಾಂಕ್ಷೆಗಾಗಿ ಸ್ವಾಮಿ, ಮಠಾಧಿಪತಿಯಾದರೆ ಅವರಿಗೆ ಕಾವಿ ಒಂದು ಬಂಧನ. ಸ್ವಯಂ ಪ್ರೇರಣೆಯಿಂದ ಸನ್ಯಾಸಿ ಆದವರಿಗೆ ವೈರಾಗ್ಯ ಜೀವನ ಅತ್ಯಂತ ಸಂತೋಷದಾಯಕ. ಸಂಸಾರದ ಕೆಸರಲ್ಲಿ ಮುಳುಗಗೊಡದೆ ಅಧ್ಯಾತ್ಮಿಕ ಸರೋವರದಲ್ಲಿ ಹಂಸಪಕ್ಷಿಯಂತೆ ವಿಹರಿಸುವ ಸದವಕಾಶ ಕೊಟ್ಟ ದೇವರ ಲೀಲೆಯ ಬಗ್ಗೆ

ಅಷ್ಟೇ ವಿಸ್ಮಯಪೂರ್ಣ ಭಕ್ತಿ, ಧನ್ಯತಾಭಾವ ಇರುತ್ತದೆ.

- ಜಯಶ್ರೀ ಬಸವರಾಜ ಶಿವಪುರ, ಹಾವೇರಿ

? ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ದಿ. 20-8-2004ರಂದು ನಡೆದ ಬಸವ ಲಿಂಗೈಕ್ಯ ಸಂಸ್ಮರಣಾ ಕಾರ್ಯಕ್ರಮವು ಬಹಳ ಯಶಸ್ವಿಯಾಯಿತು. ಬಹಳ ಜನ ಸೇರಿದ್ದರು ಎಂದು ಭಾಗವಹಿಸಿದ್ದ ನಮ್ಮ ಪರಿಚಿತರು ಹೇಳಿದರು. ತಾವು ಚುನಾವಣೆಯಲ್ಲಿ ಭಾಗಿಗಳಾಗಿದ್ದರಿಂದ ಎಲ್ಲಿ ಜನಪ್ರಿಯತೆ ಕುಗ್ಗಿದೆಯೋ ಎಂಬ ಆಂತಕ ಬಹಳ ಜನರನ್ನು ಕಾಡುತ್ತಿತ್ತು. ಕಾರ್ಯಕ್ರಮದ ಯಶಸ್ಸಿನ ಬಗ್ಗೆ ಕೇಳಿ ಸಂತೋಷವಾಯಿತು.

★ ನಮ್ಮ ಅಭಿಮಾನಿಗಳು ತತ್ತ್ವನಿಷ್ಠರು. ಯಾವುದೇ ಕಾರ್ಯವನ್ನು ನಾವು ಕೈಗೆ ಎತ್ತಿಕೊಂಡರೂ ಅದರಲ್ಲಿ ಉದಾತ್ತ ಉದ್ದೇಶ, ಕಳಕಳಿ, ದೇಶ ಪ್ರೇಮ, ಜನಹಿತ ಇರುತ್ತದೆಂದು ದೃಢವಾಗಿ ನಂಬಿದ್ದಾರೆ. ಅಂತ ತಿಳಿದೇ ಶರಣ-ಶರಣೆಯರು ಬಂದು ಯಾವ ಸಂಭಾವನೆಯನ್ನು ಪಡೆಯದೆ ಚುನಾವಣಾ ಪ್ರಚಾರ ಮಾಡಿದರು. ನಮ್ಮ ಉದಾತ್ತ ಚಿಂತನೆ ಅರಿಯದ ಮತದಾರರು ಮತದಾನ ಮಾಡಿ ಗೆಲ್ಲಿಸಲಾರದುದಕ್ಕೆ ಅವರು ವಿಷಾದಿಸುವರೇ ವಿನಾ ನಮ್ಮ ಬಗ್ಗೆ ಇರುವ ಅಭಿಮಾನ ಕಳೆದುಕೊಳ್ಳುವುದಿಲ್ಲ ಎಂಬುದು ಗಮನಾರ್ಹ.

- ಸಚ್ಚಿದಾನಂದ, ಬೆಂಗಳೂರು

? ನಮ್ಮ ಕರ್ನಾಟಕ ಸರ್ಕಾರದ ನೇತಾರರಾದ ಮುಖ್ಯಮಂತ್ರಿ ಶ್ರೀ ಧರ್ಮ ಸಿಂಗ್ ಅವರು, ಉಪ ಮುಖ್ಯ ಮಂತ್ರಿ ಶ್ರೀ ಸಿದ್ಧರಾಮಯ್ಯ, ಇವರೆಲ್ಲರ ಕಿಂಗ್ ಮೇಕರ್ ಶ್ರೀ ದೇವೇಗೌಡರು ತೂಕಡಿಸುವ, ನಿದ್ರಿಸುವ ಛಾಯಾಚಿತ್ರಗಳು ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುತ್ತವೆ. ನಮ್ಮಂತಹ ಸಾಮಾನ್ಯರು ಸಹ ಸಭೆ-ಸಮಾರಂಭಗಳಲ್ಲಿ ತೂಕಡಿಸುವುದಿಲ್ಲ. ಇವರು ಏಕೆ ಹೀಗೆ ಮಾಡುತ್ತಾರೆ ?

★ ಜನರ ಹಿತದ ಬಗ್ಗೆಯೇ ರಾತ್ರಿಯೂ ಸೇರಿದಂತೆ ಬಾಕಿ ಸಮಯದಲ್ಲೆಲ್ಲ ಅವರು ಚಿಂತನೆ ಮಾಡುವುದರಿಂದ ಬಹುಶಃ ವೇದಿಕೆಗಳ ಮೇಲೆ ಚಿಂತಾರಹಿತರಾಗುವ ಕಾರಣ ನಿದ್ರೆ ಬರುವಂತೆ ತೋರುತ್ತದೆ. ಅಥವಾ ಮೆದುಳನ್ನು "ಸುರಕ್ಷಿತ" ಜಾಗದಲ್ಲಿ ತೆಗೆದಿಟ್ಟು ಬರುವುದರಿಂದ ಚಿಂತೆಗಳು ದೂರಾಗಿ ಆರಾಮವಾಗಿ ವೇದಿಕೆಯ ಮೇಲೆ ನಿದ್ರೆ ಬರುವಂತೆ ಕಾಣುತ್ತದೆ.

- ಜಯದೇವ, ವಿಜಯಪುರ

? ಒಂದು ಧಾರ್ಮಿಕ ಸಮಾರಂಭದಲ್ಲಿ ಓರ್ವ ವಿರಕ್ತ ಸ್ವಾಮಿಗಳು ಹೇಳಿದರು. "ಪಂಚಾಚಾರ್ಯ ಸ್ವಾಮಿಗಳು ಬಸವಣ್ಣನವರನ್ನು ದ್ವೇಷಿಸುವುದನ್ನು ಕಡಿಮೆ ಮಾಡಿದ್ದಾರೆ. ಅವರು ಸಾಕಷ್ಟು ಬಸವಣ್ಣನವರ ಬಗ್ಗೆ ಅಲ್ಲಸಲ್ಲದ ಕಲ್ಪನೆ ಬಿತ್ತಿದ್ದು ನಿಜ. ಆದರೆ ಅದನ್ನು ನಾವು ವಿಧಾಯಕವಾಗಿಯೇ ತೆಗೆದುಕೊಳ್ಳೋಣ. ಜಯ-ವಿಜಯರೆಂಬ ದ್ವಾರಪಾಲಕರು ನೀವು ಭಕ್ತರಾಗಿ 10 ಜನ್ಮ ಎತ್ತಿ ನಂತರ ನನ್ನನ್ನು ಸೇರುತ್ತೀರೋ ಅಥವಾ ವಿರೋಧಿಗಳಾಗಿ 3 ಜನ್ಮ ಎತ್ತುತ್ತೀರೋ ಎಂದಾಗ ಅವರು ಎರಡನೆಯದನ್ನು ಆಯ್ಕೆ

ಮಾಡಿಕೊಂಡು, ದೇವರ ಬಳಿಗೆ ಬೇಗ ಹೋಗಲು ಬಯಸಿದಂತೆ . ಹಾಗೆ ಪಂಚಪೀಠಾಧೀಶರ ಅಪೇಕ್ಷೆ ಎಂದರು. ಇದು ಸರಿಯೆ ?

★ ಈ ಪರಿಯ ಚಿಂತನೆ ಶುದ್ಧಾಂಗ ತಪ್ಪು. ಬಸವ ಸಿದ್ಧಾಂತಕ್ಕೆ ವಿರುದ್ಧವಾದ ವಿಚಾರಧಾರೆ. "ನಾನು ಜನ್ಮವೆತ್ತಲು ಬೇಸರಿಸಿಕೊಳ್ಳುವುದಿಲ್ಲ. ಜನನವಾದರೆ ಪಾದೋದಕ ಪ್ರಸಾದವ ಕೊಂಬೆ ; ಮರಣವಾದರೆ ನಿಮ್ಮ ಶ್ರೀಚರಣವನ್ನೈದುವೆ. ಏಳೇಳು ಜನ್ಮ ಬಂದರೂ ಶಿವಭಕ್ತನಾಗಿ ಬರಲು ಇಚ್ಛಿಸುತ್ತೇನೆ ಮತ್ತು ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆ" ಎಂದು ಬಸವಣ್ಣನವರು ದೇವರಲ್ಲಿ ಬಿನ್ನವಿಸುತ್ತಾರೆ. ಒಳ್ಳೆಯದನ್ನು ಮಾಡಿ ದೇವರನ್ನು ಸೇರಲು ದೀರ್ಘಕಾಲ ತೆಗೆದುಕೊಂಡು ದೇವನಿಂದೆ, ಕೆಟ್ಟದ್ದು ಮಾಡುವವರು ಬೇಗನೆ ದೇವರನ್ನು ಹೊಂದುವುದಾದರೆ ಭಕ್ತಿ, ನೀತಿ ಮುಂತಾದ ಮೌಲ್ಯಗಳಿಗೆ ಬೆಲೆ ಎಲ್ಲಿರುತ್ತದೆ ? ಒಳ್ಳೆಯವರಾಗಿ ಇರಲು ಕಷ್ಟವನ್ನೇಕೆ ಪಡಬೇಕು ? ಹೀಗೆ ಪರಸ್ಪರ ವಿರೋಧಾಭಾಸವಾದ ವಿಚಾರಗಳನ್ನು ವಿಮರ್ಶೆ ಮಾಡಲರಿಯದವರು ಗೊಂದಲ ಪೂರ್ಣವಾಗಿಯೇ ಮಾತನಾಡುವ ಅಭ್ಯಾಸ ರೂಢಿಸಿಗೊಂಡಿರುತ್ತಾರೆ.

- ಶ್ರೀಕಂಠ ಕುಮಾರ್, ಬಸವ ಗಂಗೋತ್ರಿ, ಬೆಂಗಳೂರು

? ಓರ್ವ ಸ್ವಾಮಿಗಳು ಮಾತನಾಡುತ್ತ ತ್ರಿಪುಟಿಯಳಿದ ಸ್ಥಿತಿಯನ್ನು ವಿವರಿಸುವಾಗ ರಾಮಕೃಷ್ಣಪರಮ ಹಂಸರು ವಿಶೇಷ ಅನುಭಾವಿಕ ಸ್ಥಿತಿಯಲ್ಲಿದ್ದಾಗ ಹೂವುಗಳನ್ನು ದೇವರಿಗೆ ಏರಿಸದೆ, ತಮ್ಮ ಮೇಲೇ ತಾವು ಹಾಕಿಕೊಳ್ಳುತ್ತಿದ್ದರು ಎಂದು ಹೇಳಿದರು. ಇದು ಸರಿಯೆ?

★ ಅದ್ವೈತವು ಅಹಂ ಬ್ರಹ್ಮಾಸ್ಮಿ ಎನ್ನುವ ಸೂತ್ರ ಒಪ್ಪುವುದರಿಂದ ಆ ಸಿದ್ಧಾಂತಕ್ಕೆ ಇಂಥ ವರ್ತನೆ ಹೊಂದಬಹುದು; ವಚನ ಸಾಹಿತ್ಯ ಇದನ್ನು ಒಪ್ಪುವುದಿಲ್ಲ. ಸೋಹಂ (ಸ ಅಹಂ=ಅವನೇ ನಾನು) ಎಂದು ಜನ್ಮ ಜನ್ಮಕ್ಕೆ ಹೋಗಲೀಯದೆ ದಾಸೋಹಂ ಎಂದೆನಿಸಯ್ಯ ಎಂದು ಧರ್ಮಪಿತ ಬಸವಣ್ಣನವರು ದೇವರಲ್ಲಿ ಪ್ರಾರ್ಥಿಸುತ್ತಾರೆ. ಸೃಷ್ಟಿಕರ್ತನ ಸರ್ವೋತ್ತಮಿಕೆಯನ್ನು ಅಂತಿಮ ಕ್ಷಣದವರೆಗೂ ಗೌರವಿಸುತ್ತ ಶರಣರು ಸೃಷ್ಟಿಕರ್ತ ಲಿಂಗದೇವನನ್ನು ಇಷ್ಟಲಿಂಗ ರೂಪದಲ್ಲಿ ಅರ್ಚಿಸಿ, ಪ್ರಾರ್ಥಿಸಿ, ಧ್ಯಾನಿಸುತ್ತಾರೆ. ಆರೂಢ ಸ್ಥಿತಿಗೆ ಏರಿದವರೆಂದು ಹೇಳಿಕೊಳ್ಳುತ್ತ ಕೆಲವರು ಸ್ನಾನ-ಶುಚಿತ್ವ, ಪೂಜೆ ಮುಂತಾದುವನ್ನು ಬಿಟ್ಟರೆ ಅಂಥವರನ್ನು "ಆಚಾರವಿಲ್ಲದಿದ್ದರೆ ಶರಣನಲ್ಲ ಮರುಳು"(ಹುಚ್ಚ) ಎಂದು ಸಹ ಧರ್ಮಪಿತ ಬಸವಣ್ಣನವರು ಹೇಳಿದರೆ, "ಅರಿವು ಸಾಧ್ಯವಾಯಿತ್ತೆಂದು ಆಚಾರವ ಬಿಡಬಹುದೆ ?" ಎಂದು ಚನ್ನಬಸವಣ್ಣನವರು ಹೇಳಿದ್ದಾರೆ.

- ಬಸವರಾಜ ಮುಂಗಲಿ, ಹುಬ್ಬಳ್ಳಿ

? ಪಂಚಾಚಾರ್ಯರು ಸ್ಥಾವರಲಿಂಗದಿಂದ ಉದ್ಭವವಾಗುವರೆಂದು ಪಂಚಪೀಠಾಧೀಶರು ಹೇಳುತ್ತಾರೆ. ತಾವು ಉದ್ಭವವಾದ ಸ್ಥಾವರಶಿವಲಿಂಗವನ್ನೇ ಅವರು ಮೆಟ್ಟಿ ನಿಂತಿರುತ್ತಾರೆ. ಇದು ಒಂದು ರೀತಿ ಶಿವಲಿಂಗಕ್ಕೆ ತೋರಿಸುವ ಅಗೌರವ ಎನಿಸುತ್ತದೆ.

ತಾವು ಪ್ರತಿಷ್ಠಾಪಿಸುವ ಬಸವಣ್ಣನವರ ಮೂರ್ತಿಯ ಹಿಂದೆ ಬೃಹತ್ ಇಷ್ಟಲಿಂಗಾಕಾರದ ಶಿಲೆ ಇರುತ್ತದೆ. ಇದೂ ಅದರಂತೆಯೇ ಅಲ್ಲವೆ ? ಎರಡಕ್ಕೂ ಇರುವ ವ್ಯತ್ಯಾಸವೇನು ?

★ ಎರಡರ ಮಧ್ಯೆ ಅಜಗಜಾಂತರ ವ್ಯತ್ಯಾಸವಿದೆ. ಬಸವಣ್ಣನವರು ಪರಮಾತ್ಮನ ಅನುಗ್ರಹವನ್ನೇ ಬೆನ್ನಬಲವಾಗಿ ಇಟ್ಟುಕೊಂಡವರು. ಆದ್ದರಿಂದ ಬ್ರಹ್ಮಾಂಡದೊಡೆಯ ಸೃಷ್ಟಿಕರ್ತನ ಕುರುಹಾದ ಇಷ್ಟ(ಗಣ)ಲಿಂಗಾಕೃತಿಯನ್ನು ಬಸವ ಮೂರ್ತಿಯ ಹಿಂದೆ ಇಡಲಾಗುತ್ತದೆ. ಕಪ್ಪು ಬಣ್ಣದ ಗ್ರಾನೈಟ್ ಶಿಲೆ ಇಡುವುದರಿಂದ ಮುಂದಿನ ಮೂರ್ತಿಗೆ ವಸ್ತುಶಃ ತೇಜಸ್ಸು ಕೊಟ್ಟಂತಾಗುತ್ತದೆ. ಲಿಂಗಾಯತ ಧರ್ಮದ ಮುಖ್ಯ ಲಾಂಛನಕ್ಕೆ ಗೌರವ ತೋರಿಸಿದಂತೆ ಆಗುತ್ತದೆ.

- ಚಂದ್ರಮೋಹನ್, ಬೀದರ

? ಬಸವ ಕಲ್ಯಾಣದ ದೇವಾಲಯ ಸಮಿತಿಯವರು ಮತ್ತು ಆಧುನಿಕ ಅನುಭವ ಮಂಟಪದವರು ನಿಮ್ಮನ್ನು ವಿರೋಧಿಸುವುದೇಕೆ ?

★ ಮತ್ತೆ ಏನಾದರೂ ಚಟುವಟಿಕೆಯಲ್ಲಿ ತೊಡಗಿಸಿಕೊಂಡರೆ ತಾನೇ ಅವರ ಅಸ್ತಿತ್ವ ಜಗತ್ತಿಗೆ ಗೊತ್ತಾಗುವುದು. ಸೃಜನಶೀಲವಾದ ಯಾವುದೇ ಯೋಜನೆ, ಆಲೋಚನೆಗಳು ಅವರಿಗೆ ಹೊಳೆಯುವುದಿಲ್ಲ. ಅದಕ್ಕೆ ಬೇರೆ ವಿಧಾಯಕ ಕಾಯಕ ಮಾಡುವವರಿಗೆ ಅಡ್ಡಿಮಾಡುವುದರಿಂದ ಸುದ್ದಿಯಲ್ಲಿ ಇರಬಹುದು ಎಂಬುದು ಅವರ ಆಲೋಚನೆ ಇರಬಹುದು. ಒಮ್ಮೆ ಒಂದು ಆರ್ಕೆಷ್ಟ್ರಾ ನಡೆಯುತ್ತಿತ್ತು. ಬಹಳ ಜನ ವಿವಿಧ ವಾದ್ಯದವರು ಸುಶ್ರಾವ್ಯವಾಗಿ ವಾದ್ಯಗಳನ್ನು ನುಡಿಸುತ್ತಿದ್ದರು. ಆಗ ಇಬ್ಬರು ಜೋರಾಗಿ ಅಪಸ್ವರದಲ್ಲಿ ವಾದ್ಯ ಬಾರಿಸಿದರು. ಎಲ್ಲರೂ ಅವರತ್ತ ಕೆಂಗಣ್ಣು ಬೀರಿದರು. ಏಕೆ ಹೀಗೆ ಎಂದಾಗ ಎಲ್ಲರೊಡನೆ ವಾದ್ಯ ಬಾರಿಸಿದರೆ ಯಾರೂ ನಮ್ಮ ಬಗ್ಗೆ ಗಮನ ನೀಡುವುದಿಲ್ಲ. ಅದಕ್ಕೇ ಅಪಸ್ವರ ಬಾರಿಸಿದೆವು ಎಂದು ಉತ್ತರಿಸಿದರು. ಅವರಂತೆಯೇ ಇವರು. ★★

ಹುಟ್ಟು ಹಬ್ಬದ ಶುಭಾಶಯಗಳು





ದಿ. 18-9-2004 ರಂದು ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ 74ನೆಯ ಜಯಂತಿಯು ಒದಗಿ ಬಂದಿದ್ದು ಅಂದು ರಾಷ್ಟ್ರೀಯ ಬಸವ ದಳಗಳ ಹುಟ್ಟು ಹಬ್ಬ ಹಾಗೂ ಧಾರವಾಡದ ಜಗನ್ಮಾತ ಅಕ್ಕಮಹಾದೇವಿ ಅನುಭವ ಪೀಠದ ಪೀಠಾಧ್ಯಕ್ಷರಾದಂತಹ ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 47ನೆಯ ವರ್ಧಂತ್ಯೋತ್ಸವವನ್ನೂ ಆಚರಿಸಲಾಗುವುದು. ತನ್ನಿಮಿತ್ತ ಕಲ್ಯಾಣ ಕಿರಣದ ಎಲ್ಲಾ ಓದುಗರಿಗೆ ಶುಭ ಹಾರೈಕೆಗಳು. ಅಂದು ಎಲ್ಲರೂ ತಮ್ಮ ತಮ್ಮ ಊರಿನ ರಾಷ್ಟ್ರೀಯ ಬಸವ ದಳಗಳ ಹುಟ್ಟು ಹಬ್ಬವನ್ನು ಆಚರಿಸಬೇಕೆಂದು ಕೋರುತ್ತೇವೆ.

ದಿ. 10-8-2004 ರಿಂದ ದಿ. 20-8-2004ರವರೆಗೆ ಬಸವ ಮಂಟಪದಲ್ಲಿ ನಡೆದ ಧರ್ಮ ಪ್ರಚಾರಕರ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ಕೊಪ್ಪಳ, ಕುಷ್ಟಗಿ, ಯಲಬುರ್ಗಾ ಕ್ಷೇತ್ರದಿಂದ ಆಗಮಿಸಿದ್ದ ಶಿಬಿರಾರ್ಥಿಗಳ ಹೆಸರು ಮತ್ತು ಊರು

ಹೆಸರು	ಊರು	ವಯಸ್ಸು	ಜಾತಿ/ಧರ್ಮ
1. ಜಯಶ್ರಿ ಎಸ್.ಶೆಟ್ಟರ್	ಕೊಪ್ಪಳ	20	ಲಿಂಗಾಯತ
2. ಸುಮಿತ್ರ ಪಾಟೀಲ್	ಚಿಕ್ಕಮ್ಯಾಗೇರಿ	20	ಲಿಂಗಾಯತ
3. ಮಂಜುಳಾ	ಕಲಗೇರಿ	24	ಎಸ್.ಸಿ.
4. ದೀಪಾ ಅಗ್ನಿಹೋತ್ರಿ	ಕೊಪ್ಪಳ	21	ಬ್ರಾಹ್ಮಣ
5. ಅಕ್ಕಮಹಾದೇವಿ	ತಂಬ್ರಳ್ಳಿ	19	ರೆಡ್ಡಿ
6. ಭೀಮಮ್ಮ ಮಡಿವಾಳರ	ಬಳಗೇರಿ	20	ಮಡಿವಾಳ
7. ಮುದುಕಮ್ಮ ಮಾದಿನೂರು	ಮಂಗಳೂರು	19	ಲಿಂಗಾಯತ
8. ಶಾಂತ ಕುಮಾರಿ	ಕಿನ್ನಾಳ್	26	ಲಿಂಗಾಯತ
9. ವಜ್ರಮ್ಮ ಮತಗಟ್ಟಿ	ಮಾದಿನೂರು	25	ಜೈನ್
10. ಸುವರ್ಣ ಬಡಿಗೇರ್	ಅರಕೇರಿ	20	ಬಡಿಗೇರ
11. ಸರೋಜಾ ಡೊಳ್ಳಿನ್	ಮಂಗಳೂರು	19	ವಾಲ್ಮೀಕಿ
12. ಗಂಗಮ್ಮ ಮಠದ	ಯಲಬರ್ಗಾ	19	ಲಿಂಗಾಯತ
13. ಅಕ್ಕಮಹಾದೇವಿ ಚಿಲವಾಡಗಿ	ಕುಡಗುಂತಿ	18	ಲಿಂಗಾಯತ
14. ಹುಲಿಗೆವ್ವ	ಯಡಿಯಾಪುರ	19	ಹರಿಜನ
15. ವಿಶಾಲಾಕ್ಷಿ ಹಿರೇಮಠ	ಮಾದಿನೂರು	19	ಲಿಂಗಾಯತ
16. ಶಂಕರಮ್ಮ ಚನ್ನಳ್ಳಿ	ಕೊಪ್ಪಳ	19	ರೆಡ್ಡಿ
17. ಚಂದ್ರಕಲಾ ಗಣಪ	ನವನಗರ	32	ಕುರುವಿನಶೆಟ್ಟಿ
18. ಸುನಂದ ವದನಾಳ	ಬೆಳೂರು	22	ಗಾಣಿಗ
19. ದ್ಯಾಮವ್ವ ಕೊಪ್ಪಳ	ಓಜನಹಳ್ಳಿ	22	ಲಿಂಗಾಯತ
20. ಹನುಮವ್ವ ಕಮ್ಮಾರ್	ಅರಕೇರಿ	20	ಕಮ್ಮಾರ
21. ರತ್ನ ಕೋಗಿಲೆ	ಹೊನ್ನುಂಚಿ	19	ಉಪ್ಪಾರ
22. ಶರಣಮ್ಮ ಕಾಡಣ್ಣನವರ್	ಮುತ್ತಾಳ್	19	ಲಿಂಗಾಯತ
23. ಗೀತಾ	ಓಜನಹಳ್ಳಿ	18	ಲಿಂಗಾಯತ
24.ದೇವಕ್ಕ	ಬುಡಶೆಟ್ಯಾಳ	30	ಲಿಂಗಾಯತ
25. ರೇಖಾ	ಮುದ್ದಾಪುರ	20	ಲಿಂಗಾಯತ
26. ಶರಣಮ್ಮ ಬೊಮ್ಮನಾಳ	ಚಿಕ್ಕಬಿಡನಾಳ	18	ಎಸ್.ಟಿ.
27. ರೇಣುಕಾ	ಲೇಬಗೇರಿ	18	ಕುರುಬ

ಧರ್ಮಪ್ರಚಾರಕರ ತರಬೇತಿ ಕಾರ್ಯಕ್ರಮ ಮತ್ತು ಸೇವಾದೇಶ

ಶರಣ. ಪ್ರಶಾಂತ ಪಾಟೀಲ್ ಅವರು ಕೊಪ್ಪಳ, ಕುಷ್ಟಗಿ, ಯಲಬುರ್ಗಾ ತಾಲ್ಲೂಕುಗಳ ಗ್ರಾಮಗಳಿಂದ ಆಯ್ಕೆ ಮಾಡಿದ ಕಾರ್ಯಕರ್ತೆಯರಿಗೆ 10-8-2004 ರಿಂದ 20-8-2004 ರವರೆಗೆ ಬೆಂಗಳೂರು ಬಸವ ಮಂಟಪದಲ್ಲಿ ತರಬೇತಿ ನೀಡಿ ದಿ. 1-9-2004 ರಿಂದ ಒಂದು ವರ್ಷದ ವರೆಗೆ ಕಾಯಕ-ಸೇವಾ ಮಗ್ನರಾಗಲು ಸೇವಾದೇಶವನ್ನು ನೀಡಲಾಗಿದೆ. ತಿಂಗಳಿಗೆ 500 ರೂ.ಗಳ ಗೌರವ ಧನ ನೀಡಲಾಗುವುದು.

ಸಮಾಜ ಸೇವಾ ಕಾರ್ಯಕರ್ತರ ನೇಮಕ ಮತ್ತು ಧನ ಸಹಾಯ ವಿವರ

ಈಗಾಗಲೇ ಹೆಸರು ಪ್ರಕಟಿಸಲಾಗಿರುವ 27 ಜನರನ್ನು 1-9-2004ರಿಂದ ಒಂದು ವರ್ಷಗಳವರೆಗೆ ಸೇವಾ ಕಾರ್ಯಕ್ಕೆ ನೇಮಕ ಮಾಡಿರುವ ಆದೇಶ ಪತ್ರ ನೀಡಲಾಗಿದೆ. ಇವರಿಗೆ ಪ್ರತಿ ತಿಂಗಳು 500 (ಐದು ನೂರು)ರೂಗಳ ಗೌರವ ಧನವನ್ನು ನೀಡಲಾಗುವುದು. ಈ ದಿಶೆಯಲ್ಲಿ ಕಲ್ಯಾಣ ಕಿರಣದಲ್ಲಿ ಮುದ್ರಣಗೊಂಡ ಮನವಿ ನೋಡಿ ಮತ್ತೆ ಕೆಲವರು ಪ್ರತಿ ತಿಂಗಳಿಗೆ ರೂ. 500 ದಂತೆ ಒಂದು ವರ್ಷದವರೆಗೆ ಒಬ್ಬರ ಗೌರವ ಧನದ ವೆಚ್ಚ ಭರಿಸಲು ಒಪ್ಪಿಕೊಂಡಿದ್ದಾರೆ.

1. ಶರಣೆ. ಸರೋಜಮ್ಮ ನಾಗರಾಜು, ಮೈಸೂರು
2. ಶರಣ. ಜಿ.ಸಿ. ಅನಿಲಕುಮಾರ್, ಬೆಂಗಳೂರು
3. ಶರಣ. ಎ.ಸಿ. ಮೂಲೀಮನಿ, ಶಿವಮೊಗ್ಗ
4. ಶರಣೆ. ನಾಗರತ್ನಮ್ಮ ಲಿಂಗಾಯತ್, ಬೆಂಗಳೂರು
5. ಶರಣ. ಗಿರೀಶ್, ಬೆಂಗಳೂರು
6. ಶರಣ. ಶಿವಬುದ್ಧಿ, ಬಸವ ಬಳಗ ಅಧ್ಯಕ್ಷರು, ಹಲ್ಲರೆ
7. ಶರಣ. ಮಂಜುನಾಥ್, ಬೆಂಗಳೂರು
8. ಶರಣ. ಸಂಗಪ್ಪ, ಬೆಂಗಳೂರು
9. ಗುಪ್ತದಾನಿ, ಬೆಂಗಳೂರು
10. ಶರಣೆ. ಪ್ರೇಮಾ ಚಂದ್ರಯ್ಯಾ, ದಾವಣಗೆರೆ
11. ಶರಣೆಯರುಗಳಾದ ವನಜಾಕ್ಷಮ್ಮ ಓಂಕಾರ ಸ್ವಾಮಿ,
ನಿರ್ಮಲಾ ಜಯದೇವ್
ಲೀಲಾ ವಿಜಯಕುಮಾರ್
ಸುವರ್ಣಮ್ಮ ಈಶ್ವರಪ್ಪ
ಅನ್ನಪೂರ್ಣ ರಾಜಶೇಖರ ಸೇರಿ ಒಬ್ಬರ ಗೌರವ ಧನ ಕೊಡಲಿದ್ದಾರೆ.


ಅತ್ಯಂತ ಪವಿತ್ರವಾದ ಈ ಕಾರ್ಯಕ್ಕೆ ನೆರವಾಗುವ ಅಪೇಕ್ಷೆಯುಳ್ಳವರಿಗೆ ಇನ್ನೂ 16 ಜನರಿಗೆ ಕೊಡಲು ಅವಕಾಶವಿದೆ. ಆಸಕ್ತರು ಪತ್ರ ಅಥವಾ ಫೋನ್ ಮೂಲಕ ಸಂಪರ್ಕಿಸಿರಿ.

ಈ ಎಲ್ಲ ದಾನಿಗಳಿಗೆ ಶುಭಹಾರೈಕೆಗಳು

- ಮಾತಾಜಿ



ದಿ. 20-8-2004ರಂದು ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಆಯೋಜಿಸಿದ್ದ ಬಸವಣ್ಣನವರ 809ನೆಯ ಲಿಂಗೈಕ್ಯ ಸಂಸ್ಮರಣಾ ದಿನದಂದು ಧ್ವಜಾರೋಹಣ ಮಾಡಲು ಸಿದ್ಧರಾಗಿರುವ ಪೂಜ್ಯರು ಹಾಗೂ ಸಭೆಗೆ ಧ್ವಜ ಗೀತೆ ಹೇಳಿಕೊಡುತ್ತಿರುವ ಪೂಜ್ಯರು ಮತ್ತು ಅವರೊಂದಿಗೆ ಗಣ್ಯರು



ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರದ ನಿರ್ದೇಶಕ ಡಾ|| ಪ್ರಭುದೇವ ಅವರಿಂದ ಪುಟ್ಟಣ್ಣ ಚೆಟ್ಟಿ ಪುರಭವನ ಕಾರ್ಯಕ್ರಮದ ಉದ್ಘಾಟನೆ



ಕುಮಾರಿ. ಸುನಂದಾ, ನೃತ್ಯ ದೀಪಿಕಾ ಶಾಲೆಯ ಸಂಸ್ಥಾಪಕಿ ಇವರಿಂದ ಬಸವ ಸ್ತೋತ್ರದ ನೃತ್ಯಾಭಿನಯ



ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರದ ನಿರ್ದೇಶಕ
ಡಾ|| ಪ್ರಭುದೇವ ಅವರಿಗೆ ಪೂಜ್ಯ ಸ್ವಾಮೀಜಿಯವರಿಂದ ಸತ್ಕಾರ



ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರದ ನಿರ್ದೇಶಕ
ಡಾ|| ಪ್ರಭುದೇವ ಅವರಿಗೆ ಪೂಜ್ಯ ಮಾತಾಜಿಯವರಿಂದ ಬಸವ ಭಾವಚಿತ್ರದ ಕೊಡುಗೆ



ಡಾ॥ ಸಿ. ವೀರಪ್ಪ ಯು.ಎಸ್.ಎ ಅವರಿಗೆ ಪೂಜ್ಯ ಸ್ವಾಮೀಜಿಯವರಿಂದ ಸತ್ಕಾರ



ಡಾ॥ ಸಿ. ವೀರಪ್ಪ, ಯು.ಎಸ್.ಎ ಅವರಿಗೆ ಪೂಜ್ಯ ಮಾತಾಜಿಯವರಿಂದ ಬಸವ ಭಾವಚಿತ್ರದ ಕೊಡುಗೆ



ಡಾ॥ ಕೆ. ಆರ್. ಚನ್ನರಸಪ್ಪ ಯು.ಎಸ್.ಎ ಅವರಿಗೆ ಪೂಜ್ಯ ಸ್ವಾಮೀಜಿಯವರಿಂದ ಸತ್ಕಾರ



ಡಾ॥ ಕೆ. ಆರ್. ಚನ್ನರಸಪ್ಪ, ಅವರಿಗೆ ಪೂಜ್ಯ ಮಾತಾಜಿಯವರಿಂದ ಬಸವ ಭಾವಚಿತ್ರದ ಕೊಡುಗೆ




ಶ್ರೀ ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ. ಸುಶೀಲಮ್ಮ ಅವರಿಗೆ
ಪೂಜ್ಯ ಮಾತಾಜಿಯವರಿಂದ ಸತ್ಕಾರ



ಶ್ರೀ ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ. ಸುಶೀಲಮ್ಮ ಅವರಿಗೆ
ಪೂಜ್ಯ ಮಾತಾಜಿಯವರಿಂದ ಬಸವ ಭಾವಚಿತ್ರದ ಕೊಡುಗೆ



ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್ವರ ಅವರಿಗೆ ಪೂಜ್ಯ ಸ್ವಾಮೀಜಿಯವರಿಂದ ಸತ್ಕಾರ



ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್ವರ ಅವರಿಗೆ
ಪೂಜ್ಯ ಮಾತಾಜಿಯವರಿಂದ ಬಸವ ಭಾವಚಿತ್ರದ ಕೊಡುಗೆ




ದಿ. 21-8-2004 ರಂದು ಬಸವ ಮಂಪಟದಲ್ಲಿ ಆಯೋಜಿಸಲಾಗಿದ್ದ ನೀಲಮ್ಮ ಷಷ್ಠಿಯ ಅಂಗವಾಗಿ ಏರ್ಪಡಿಸಿದ್ದ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಪ್ರಾತ್ಯಕ್ಷಿಕೆ ತೋರಿಸುತ್ತಿರುವ ಪೂಜ್ಯ ಮಾತಾಜಿ



ದಿ. 21-8-2004 ರಂದು ಬಸವ ಮಂಪಟದಲ್ಲಿ ಆಯೋಜಿಸಲಾಗಿದ್ದ ನೀಲಮ್ಮ ಷಷ್ಠಿಯ ಅಂಗವಾಗಿ ಏರ್ಪಡಿಸಿದ್ದ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಗಳಾಗಿ ಪೂಜಾ ನಿರತರಾಗಿರುವ ಶರಥಿ-ಶರಣೆಯರು



ದಿ. 22-8-2004 ರಂದು ಬಸವ ಮಂಪಟದಲ್ಲಿ ಆಯೋಜಿಸಲಾಗಿದ್ದ ಬಸವ ಲಿಂಗೈಕ್ಯ ಸಂಸ್ಮರಣಾ ಸಪ್ತಾಹ ಮುಕ್ತಾಯ ಸಮಾರಂಭ ಉದ್ಘಾಟಿಸುತ್ತಿರುವ ಶರಣ. ಡಿ.ಪಿ. ಪ್ರಕಾಶ್




ಕಾರ್ಯಕ್ರಮದ ವೇದಿಕೆಯಲ್ಲಿ (ಎಡದಿಂದ ಬಲಕ್ಕೆ) ಶರಣರಾದ ಪುಟ್ಟರುದ್ರಪ್ಪ, ಡಿ.ಪಿ. ಪ್ರಕಾಶ್, ಪೂಜ್ಯ ಶ್ರೀ ಶಿವರುದ್ರ ಸ್ವಾಮಿಗಳು, ಪೂಜ್ಯ ಮಾತಾಜಿ, ಕೆ.ಆರ್. ಮಂಗಳಾ ಮತ್ತು ಸುಜಯಾದೇವಿ ಮಹಾಲಿಂಗಯ್ಯ



ಚರಕ ಪ್ರಶಸ್ತಿ ವಿಜೇತೆ ಮಂಗಳಾ ಅವರಿಗೆ ಪೂಜ್ಯ ಮಾತಾಜಿಯವರಿಂದ
ಸತ್ಕಾರ ಮತ್ತು ಭಾವಚಿತ್ರದ ಕೊಡುಗೆ




ದಿ. 22-8-2004 ರಂದು ಬಸವ ಲಿಂಗೈಕ್ಯ ಸಪ್ತಾಹ ಮುಕ್ತಾಯ ಕಾರ್ಯಕ್ರಮದಲ್ಲಿ
ಪ್ರವಚನವನ್ನು ತಲ್ಲೀನವಾಗಿ ಆಲಿಸುತ್ತಿರುವ ಶರಣರು



ದಿ. 22-8-2004 ರಂದು ಬಸವ ಲಿಂಗೈಕ್ಯ ಸಪ್ತಾಹ ಮುಕ್ತಾಯ ಕಾರ್ಯಕ್ರಮದಲ್ಲಿ
ಪ್ರವಚನವನ್ನು ತಲ್ಲೀನವಾಗಿ ಆಲಿಸುತ್ತಿರುವ ಶರಣೆಯರು




ಪತ್ರಕರ್ತರ ದಿನಾಚರಣೆ : ದಿ. 1-7-2004 ರಂದು ಕನಡ ಸಾಹಿತ್ಯ ಪರಿಷತ್ ಭವನದಲ್ಲಿ
ಪತ್ರಕರ್ತರ ವೇದಿಕೆಯಿಂದ ನಡೆದ ಕಾರ್ಯಕ್ರಮದಲ್ಲಿ
ಪೂಜ್ಯ ಮಾತಾಜಿಯವರೊಡನೆ ಪುರಸ್ಕೃತರಾದ ಪ್ರತಿಭಾವಂತರು ಮತ್ತು ಅತಿ ಗಳು




ಅಂಗವಿಕಲ ಬಾಲಕ ಕೈಗಳು ಇಲ್ಲದಿದ್ದರು ತನ್ನ ಕಾಲುಗಳಿಂದ ಹಾಲು ಕುಡಿಯುತ್ತಿರುವುದು.



ದಿ. 20-8-2004ರಂದು ಬಸವ ಪಂಚಮಿ ನಿಮಿತ್ತ ಉದಗೀರ್‌ನ 'ಅಂಗವಿಕಲರ'(ಅಪಂಗ್) ವಿದ್ಯಾಲಯದಲ್ಲಿ ಮಕ್ಕಳಿಗೆ ಹಾಲು ವಿತರಿಸುತ್ತಿರುವ ಪೂಜ್ಯ ಗಂಗಾ ಮಾತಾಜಿಯವರು ಮತ್ತು ಉದಗೀರ್ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು.



ಅಂಗವಿಕಲರ ವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿರುವ ಬಾಲಕ ತನ್ನ ಕಾಲುಗಳಿಂದ ಪೂಜ್ಯರಿಗೆ ಬರೆದು ತೋರಿಸುತ್ತಿರುವುದು



ಶ್ರಾವಣ ಮಾಸದ ನಿಮಿತ್ತ ಅಥಣಿಯ ಬಳವಾಡ ಗ್ರಾಮದಲ್ಲಿ ವಿಶ್ವಧರ್ಮ ಪ್ರವಚನ ವೇದಿಕೆಯಲ್ಲಿ ಬಸವ ಧರ್ಮ ಪೀಠದ ಪೂಜ್ಯರುಗಳಾದ ಚನ್ನಬಸವಾನಂದ ಸ್ವಾಮೀಜಿ ಮತ್ತು ಸಿದ್ಧರಾಮೇಶ್ವರ ಸ್ವಾಮೀಜಿ

ವಚನ ಚಿಂತನೆ - 2

ಪ್ರತಿಕ್ರಿಯೆಗಾಗಿ..........

ಗಣ ಸಂಬಂಧಿ ಕ್ರಿಯೆಗಳು

ಉಂಬಲ್ಲಿ ಉಡುವಲ್ಲಿ ಕ್ರೀಯಳಿಯೆತ್ತೆಂಬರು
ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು,
ಎಂತಯ್ಯಾ, ಅವರ ಭಕ್ತರೆಂಬೆ ?
ಎಂತಯ್ಯಾ ಅವರ ಯುಕ್ತರೆಂಬೆ ? ಲಿಂಗದೇವ, ಕೇಳಯ್ಯ
ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯ

–ಬ.ವ. ದೀ. 626

ಗುರು ಬಸವಣ್ಣನವರ ಗುರಿ ಎಲ್ಲ ಮಾನವರಿಗೂ ಯಾವುದೇ ಭೇದವಿಲ್ಲದೆ ಧರ್ಮ ಸಂಸ್ಕಾರವನ್ನು ಕೊಡುವುದಾಗಿತ್ತು. ಇದಕ್ಕೆ ನೆರವಾಗುವುದು ಇಷ್ಟಲಿಂಗ ದೀಕ್ಷೆ. ಜಂಗಮ ಸಾಕ್ಷಿಯಾಗಿ ಗುರುವು ಇಷ್ಟಲಿಂಗವನ್ನು ಓರ್ವ ವ್ಯಕ್ತಿಗೆ ಧರಿಸುತ್ತಲೇ ಅವನು ಗಣ ಸಂಬಂಧವನ್ನು ಹೊಂದುತ್ತಾನೆ. ಈ ಗಣ ಸಂಬಂಧವು ಮೂರು ಹಂತದಲ್ಲಿ ಸಾಗುತ್ತದೆ.

1. ಶರಣರ ಸಂಗದಲ್ಲಿ ಒಡನಾಡುವುದು, ಗಣಗೋಷ್ಠಿಯಲ್ಲಿ ಭಾಗಿಯಾಗುವುದು.
2. ಸಹ(ಪಂಕ್ತಿ) ಭೋಜನ
3. ವೈವಾಹಿಕ ಸಂಬಂಧ ಬೆಳೆಸುವುದು.

ಕೆಲವು ಜನರು ''ದೀಕ್ಷಿತರಲ್ಲಿ ಊಟೋಪಚಾರ ನಡೆಯುತ್ತದೆ. ಆದರೆ ಮದುವೆ ಸಂಬಂಧ ಸಾಧ್ಯವಿಲ್ಲ. ಅದು ನಮ್ಮ ನಮ್ಮ ಕುಲದಲ್ಲೇ ಆಗಬೇಕು'' ಎನ್ನುವರು. ಇಂಥವರನ್ನು ಧರ್ಮಪಿತ ಬಸವಣ್ಣನವರು ಟೀಕಿಸಿ ಇಂಥ (ಅರೆ) ಭಕ್ತರು ಭಕ್ತರೂ ಅಲ್ಲ ಯುಕ್ತರು ವಿವೇಕಿಗಳೂ ಅಲ್ಲ. ಹೊಲತಿ ಅಂದರೆ ಮುಟ್ಟಾದ ಮಹಿಳೆ ರಜೋ ವಿಸರ್ಜನೆಯ ಕಾಲದಲ್ಲಿ ಎಷ್ಟು ಸಲ ಶುದ್ಧ ನೀರಲ್ಲಿ ಮಿಂದರೂ, ರಕ್ತಸ್ರಾವವು (ಮೂರು ದಿವಸ) ಆಗುತ್ತಲೇ ಇರುವಂತೆ ಅರೆಭಕ್ತರಾದವರ ಮನಸ್ಸು ಸಂದೇಹ ಕ್ರಿಯೆಯಿಂದ ಕೊಳಕಾಗುತ್ತಲೇ ಇರುತ್ತದೆ.

ಇದೇ ರೀತಿ ಚನ್ನಬಸವಣ್ಣನವರ ಎರಡು ವಚನಗಳು ಸಹ ಪ್ರತಿಪಾದಿಸುತ್ತವೆ :

ಉಂಬಲ್ಲಿ ಉಡುವಲ್ಲಿ ಕ್ರಿಯಳಿಯಿತ್ತೆಂಬರು
ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು. ಏನೆಂಬೆನಯ್ಯಾ ?
ಒಚ್ಚಿ ಒಚ್ಚಿ ಭವಿಗಳು; ಒಚ್ಚಿ ಒಚ್ಚಿ ಭಕ್ತರು!
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ
ಭಕ್ತಕಾಯ ಮಮಕಾಯವೆಂತೆಂಬರು ? 369

ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ ಎಂಬ ಅನಾಚಾರಿಯ ಮಾತ ಕೇಳಲಾಗದು.

ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೆ ಎಂದು
ಕೊಟ್ಟುಕೊಂಬುದು ಸದಾಚಾರ, ಉಳಿದುದೆಲ್ಲ ಅನಾಚಾರ, ಅದೆಂತೆಂದಡೆ:
ಸ್ಪಟಕದ ಕೊಡದಲ್ಲಿ ಕಾಳಿಕೆಯನರಸುವ ಹಾಗೆ,
ಸಿಹಿಯೊಳಗೆ ಕಹಿಯನರಸುವ ಹಾಗೆ,
ರಜಸೂತಕ, ಕುಲಸೂತಕ, ಜನನಸೂತಕ,
ಪ್ರೇತಸೂತಕ, ಉಚ್ಚಿಷ್ಟಸೂತಕ ಎಂದಡೆ
ಆತಂಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ತೀರ್ಥವಿಲ್ಲ ಪ್ರಸಾದವಿಲ್ಲ,
ಇಂತೀ ಪಂಚಸೂತಕವ ಕಳೆದಲ್ಲದೆ ಭಕ್ತನಾಗ.
ಇಂತಹ ಭಕ್ತರಲ್ಲಿ ಕೊಟ್ಟುಕೊಂಬುದು ಸದಾಚಾರ,
ಕೂಡಲಚನ್ನಸಂಗಮದೇವಯ್ಯಾ. 399

ಉಂಬುದು ಎಂದರೆ ತಾನು ಇನ್ನೊಬ್ಬ ಶರಣರ ಮನೆಗೆ ಹೋಗಿ ಪ್ರಸಾದ ಸ್ವೀಕರಿಸುವುದು. ಉಡುವುದು ಎಂದರೆ ಬಟ್ಟೆ ತೊಡುವುದು. ಬಟ್ಟೆ ತೊಡುವ ಕ್ರಿಯೆ ಯಾವ ರೀತಿಯಲ್ಲೂ ಈ ವಚನಕ್ಕೆ ಪೋಷಕವಾಗಿಲ್ಲ. ಆದ್ದರಿಂದ ಉಂಬುದರ ಜೊತೆಗೆ ಉಡುವ ಬದಲಿಗೆ **ಊಡುವ** ಎಂಬ ಪದವನ್ನಿಟ್ಟರೆ, ತಾನು ಇನ್ನೊಬ್ಬರಲ್ಲಿ ಉಣ್ಣುವುದು ಹೇಗೆ ಕರ್ತವ್ಯವೋ ಅವರಿಗೆ ಊಡಿಸುವುದು ಅಂದರೆ ಇನ್ನೊಬ್ಬರಿಗೆ ಊಟಕ್ಕೆ ಇಡುವುದೂ ಕರ್ತವ್ಯವೆ! ಎಂದು ಅರ್ಥ ನೀಡುವುದು. ವಚನಗಳನ್ನು ಪ್ರತಿ ಮಾಡುವವರು ಈ ಮಹತ್ವಪೂರ್ಣವಾದ ಅರ್ಥವ್ಯತ್ಯಾಸವನ್ನು ಅರಿಯದೆ ಉಡುವುದು ಎಂದು ಬಳಸಿರುವ ಸಾಧ್ಯತೆ ಇದೆ. ಆದ್ದರಿಂದ ''ಉಂಬುವುದು ಊಡುವುದು'' ಎಂದು ಮೇಲಿನ ಮೂರು ವಚನಗಳ ಮೊದಲ ಸಾಲಿನಲ್ಲಿ ಕೊಂಚ ಬದಲಾವಣೆ ಸೂಕ್ತವೆನಿಸುತ್ತದೆ.

ವಚನ ಕಿರಣ

'ಬ' ಎಂಬಲ್ಲಿ ಭಕ್ತಿ ಬಲವಾಗಿತ್ತು
'ಸ' ಎಂಬಲ್ಲಿ ಸಜ್ಜನರ-ಶರಣರ ಸಂಗ ಬೆಳೆದಿತ್ತು
'ವ' ಎಂಬಲ್ಲಿ ವಂದಿಸುವರ ವರ್ಚಸ್ಸು ವಜ್ರವೈಢೂರ್ಯದಂತಾಯಿತ್ತು
ಇಂತೀ ಬಸವ ಎಂಬ ತ್ರೇಯಾಕ್ಷರದ ತ್ರಿಪದದ ಕಿರಣಗಳು
ಬಸವಾತ್ಮಜೆಯ ರೂಪದಿಂ ಪ್ರವಚನ ಧಾರೆಯಾಗಿ
ದೇಶ ವಿದೇಶದಲ್ಲಿ ಬೆಳಗುವುದ ಕಂಡು
ಅಸಂಖ್ಯಾತ ಶರಣರು ಬಸವಾತ್ಮಜೆ ಬಸವಾತ್ಮಜೆ ಎನ್ನುತ್ತಿದ್ದರು ನೋಡಾ
ಇಂಥಹ ಬಸವಸುತೆಯ ಎನಗೆ ತೋರಿದ ಲಿಂಗದೇವಯ್ಯ
ನಿಮ್ಮ ಮಹಿಮೆಯ ಕಂಡು ಆನು ಬೆರಗಾಗಿ
ನಮೋ ನಮೋ ಎಂದು ಬದುಕಿದೆನು ಕಾಣಾ
ಮಹಾಮಹಿಮ ಮಡಿವಾಳೇಶ್ವರ

– ಶರಣೆ. ವಿನೋದ ಕೃಷ್ಣಮೂರ್ತಿ

ವಿವಿಧ ಪತ್ರಿಕೆಗಳಲ್ಲಿ ಪ್ರಕಟಿತ ಲೇಖನಗಳು

ಗ್ರಂಥಸ್ಥ ವಚನ ಸಾಹಿತ್ಯ ಜನಮನಕ್ಕೆ ತಲುಪಿಸಿದ ಜ್ಞಾನ ಜಂಗಮ

'ಜಂಗಮ ಎನ್ನುವುದು ಜಾತಿಯಲ್ಲ; ಸಾಧನೆಯಿಂದ ಪಡೆದುಕೊಳ್ಳುವ ಸ್ಥಿತಿ. ಬಸವಣ್ಣನವರು ಕೊಟ್ಟ ಹಲವಾರು ಪರಿಕಲ್ಪನೆಗಳಲ್ಲಿ ಜಂಗಮ ಅತ್ಯಂತ ಕ್ರಾಂತಿಕಾರಿಯಾದುದು. ಜಂಗಮ ನಿಸ್ವಾರ್ಥಿಯೂ, ತ್ಯಾಗಿಯೂ ಆದ ಬೋಧಕ ಮಾತ್ರವಲ್ಲ ಸಮಾಜ ಸಧಾರಣೆಯ ಹರಿಕಾರ' ಎಂದು ಬಸವಣ್ಣನವರು ಚಿತ್ರಿಸಿದ ಜಂಗಮಕ್ಕೆ ವ್ಯಾಖ್ಯಾನ ಕೊಟ್ಟಿದ್ದು ಮಾತ್ರವಲ್ಲದೆ ಅದರಂತೆ ಬದುಕಿ ತೋರಿಸಿದ ಧೀಮಂತ ಪ್ರವಚನಕಾರರು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು. ಬಿಜಾಪುರ ಜಿಲ್ಲೆಯ ಬಾಗೇವಾಡಿ 12ನೆಯ ಶತಮಾನದ ವಿಶ್ವವಿಭೂತಿ ಬಸವಣ್ಣನವರ ಜನ್ಮ ಸ್ಥಳ. ಅಲ್ಲಿಗೆ ಸನಿಹದಲ್ಲಿರುವ ಮನುಗೂಳಿ ಗ್ರಾಮದ ವ್ಯಾಪಾರ ವೃತ್ತಿಯ ಮಲ್ಲಪ್ಪ ಮತ್ತು ಕಲ್ಲಮ್ಮನವರ ಮೊದಲನೆಯ ಮಗನಾಗಿ 15-9-1931ದ ಗಣೇಶ ಚೌತಿಯಂದು ಜನ್ಮ ತಾಳಿದ ಸ್ವಾಮಿಗಳ ಹೆಸರು ಸಂಗಮೇಶ. ಬಹಳ ಕಷ್ಟದಿಂದ ಮಾಧ್ಯಮಿಕ ಶಾಲೆಯ ಶಿಕ್ಷಣವನ್ನು ಪೂರೈಸಿದ ಸಂಗಮೇಶ ಪ್ರೌಢಶಾಲಾ ಶಿಕ್ಷಣಕ್ಕೆ ವಿಜಾಪುರಕ್ಕೆ ಬಂದು ಅವರಿವರ ನೆರವಿನಿಂದ ವಿದ್ಯಾಭ್ಯಾಸ ಮುಂದುವರಿಸಿದ. ಬಡತನದ ಸಂಕಷ್ಟಕ್ಕೆ ಸಿಕ್ಕಿ ನಲುಗಿದ್ದ ಮನುಸ್ಸು ದೇವರೆ-ಧರ್ಮ-ಆತ್ಮ ಮುಂತಾದವು ಭ್ರಾಮಕ ಕಲ್ಪನೆಗಳು ಎಂಬುದನ್ನು ಪ್ರತಿಪಾದಿಸುತ್ತಿದ್ದ ಮಾರ್ಕ್ಸ್‌ವಾದಿಗಳ ಉಪನ್ಯಾಸಕ್ಕೆ ಮಾರು ಹೋಯಿತು. ಮುಂದೆ ಬಿ.ಎ. ಆನರ್ಸ್ ಪದವಿಗಾಗಿ ತತ್ವಜ್ಞಾನ ವಿಷಯವನ್ನು ಪ್ರಧಾನವಾಗಿ ತೆಗೆದುಕೊಂಡು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಸಂಗಮೇಶರು ಅಧ್ಯಯನ ಮಾಡುವಾಗ ಬೋಧಕರಾಗಿದ್ದ ಡಾ. ರಾಜಗೋಪಾಲ ಅವರು ನೀಡುತ್ತಿದ್ದ ವೈಜ್ಞಾನಿಕ ಹಿನ್ನೆಲೆಯ ತತ್ವಜ್ಞಾನದ ಉಪನ್ಯಾಸಗಳು ಸಂಗಮೇಶರನ್ನು ಆಸ್ತಿಕರನ್ನಾಗಿ ಪರಿವರ್ತಿಸಿದವು. ಧರ್ಮದ ತಳಹದಿಯ ಮೇಲೆ ಸಮತಾವಾದವನ್ನು ಬೋಧಿಸಿದ ಕ್ರಾಂತಿಯೋಗಿ ಬಸವಣ್ಣನವರ ಭಾವಚಿತ್ರ ಪ್ರತಿಷ್ಠಾಪನೆಗೊಂಡುದು ಒಂದು ಮಹತ್ವದ ಘಟನೆ.

ಬಿಜಾಪುರದ ಸಿದ್ಧೇಶ್ವರ ಹೈಸ್ಕೂಲ್‌ನಲ್ಲಿ ಶಿಕ್ಷಕ ವೃತ್ತಿಯನ್ನು ಕೆಲವು ಕಾಲ ಮಾಡಿದರಾದರೂ ಸಂಗಮೇಶರ ಆಂತರಿಕ ಒತ್ತಡ ತ್ಯಾಗ ಜೀವನಕ್ಕೆ ಪ್ರೇರೇಪಿಸುತ್ತಿತ್ತು. ಧರ್ಮ ಪ್ರಚಾರದ ಹಂಬಲವು ಉತ್ಕಟವಾಗುತ್ತಿತ್ತು. ಒಂದು ದಿವಸ ಸುಪ್ರಭಾತದಲ್ಲಿ 'ಬಸವಗಿರಿ' ಗುಡ್ಡದ ಮೇಲಿದ್ದ ಬಸವಣ್ಣನ ಗುಡಿಯಲ್ಲಿ ಕುಳಿತು ಸಂಕಲ್ಪ ದೃಢಪಡಿಸಿಕೊಂಡು 19-11-1956 ರಂದು ಕಾವಿ ಧರಿಸಿ, ಜ್ಞಾನ ಸನ್ಯಾಸ ಸ್ವೀಕರಿಸಿ ಜಂಗಮ ಲಾಂಛನಧಾರಿಯಾಗಿ ಧರ್ಮಪ್ರಚಾರಕ್ಕೆ ಹೊರಟೇ ಬಿಟ್ಟರು. ಇಷ್ಟಲಿಂಗ ವಿಜ್ಞಾನವನ್ನು ಪ್ರಚಾರ ಮಾಡಬೇಕು ಎಂದು ಸಂಕಲ್ಪಿಸಿ ತಮ್ಮ ಹೆಸರನ್ನು ಸ್ವಾಮಿ ಲಿಂಗಾನಂದ ಎಂದು ಪರಿವರ್ತಿಸಿಕೊಂಡರು. ಶಿಕ್ಷಕ ವೃತ್ತಿಯಲ್ಲಿ ಇರುವಾಗ ಬಿಜಾಪುರದ ಶ್ರೀ ಪೂಜ್ಯ ಮಲ್ಲಿಕಾರ್ಜುನ ಸ್ವಾಮಿಗಳಿಂದ ಇಷ್ಟಲಿಂಗ ದೀಕ್ಷೆ ಪಡೆದಿದ್ದ ಲಿಂಗಾನಂದ ಸ್ವಾಮಿಗಳು ಪ್ರವಚನ ಮಾಡುತ್ತ ಸಂಚರಿಸುತ್ತ ಮೈಸೂರಿಗೆ ಬಂದರು. ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ತಮ್ಮ ಸನ್ನಿಧಿಯಲ್ಲೇ ಪ್ರವಚನ ಏರ್ಪಡಿಸಿ ಬಹುವಾಗಿ ಪ್ರೋತ್ಸಾಹಿಸಿದರು. ಲಿಂಗಾನಂದ ಸ್ವಾಮಿಗಳು ದಿನಾಂಕ

7-8-1961 ರಂದು ಸುತ್ತೂರಿನಲ್ಲಿ ಪೂಜ್ಯ ಜಗದ್ಗುರುಗಳಿಂದ ಕ್ರಿಯಾ ಸನ್ಯಾಸವನ್ನು ಸ್ವೀಕರಿಸಿದರು.

ಚರ ಜಂಗಮರಾಗಿ 1956 ರಿಂದ 1995ರವರೆಗೆ ನಿಂತ ನೀರಾಗದೆ ಹರಿವ ನದಿಯಂತೆ ಜ್ಞಾನವನ್ನು ಧಾರೆ ಎರೆಯುತ್ತ ಸತತವಾಗಿ ಸಂಚರಿಸಿದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಕರ್ನಾಟಕದಾದ್ಯಂತ ಮಾತ್ರವಲ್ಲ ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳ ವಿವಿಧ ಪ್ರದೇಶಗಳಲ್ಲಿ ಸಂಚರಿಸಿ ಗ್ರಂಥಸ್ಥವಾಗಿ ಉಳಿದಿದ್ದ ವಚನ ಸಾಹಿತ್ಯವನ್ನು ಜನ ಸಾಮಾನ್ಯರ ಬಳಿಗೆ ಕೊಂಡೊಯ್ದರು. 1956ರಲ್ಲಿ ಬಿ.ಎಸ್‌ಸಿ ಪದವಿ ಪಡೆದು ತ್ಯಾಗ ಜೀವನ ಸ್ವೀಕರಿಸಿ ಧರ್ಮ ಪ್ರಚಾರಕ್ಕೆ ತಮ್ಮ ಬದುಕನ್ನು ಮೀಸಲಿಟ್ಟು ಆಗಮಿಸಿದ ಮಾತೆ ಮಹಾದೇವಿಯವರನ್ನು ಸ್ನಾತಕೋತ್ತರ ತತ್ವಜ್ಞಾನ ಪದವೀಧರೆಯಾಗಲು ಪ್ರೋತ್ಸಾಹಿಸಿದ್ದೇ ಅಲ್ಲದೆ ಧಾರವಾಡದಲ್ಲಿ ಮಹಿಳೆಯರ ಗುರುತ್ವವನ್ನು ಎತ್ತಿ ಹಿಡಿಯಲು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಸ್ಥಾಪಿಸಿ ಮಾತೆ ಮಹಾದೇವಿಯವರನ್ನು ಪ್ರಥಮ ಮಹಿಳಾ ಜಗದ್ಗುರುವಾಗಿ ಪೀಠಾರೋಹಣ ಮಾಡಿಸಿದರು. ಪೂಜ್ಯ ಶ್ರೀ ಮಹಾ ಜಗದ್ಗುರು ಲಿಂಗಾನಂದ ಸ್ವಾಮಿಗಳು ಸ್ಥಾಪಿಸಿದ ಇನ್ನಿತರ ಸಂಸ್ಥೆಗಳೆಂದರೆ ಬೆಂಗಳೂರಿನ ವಿಶ್ವ ಕಲ್ಯಾಣ ಮಿಷನ್, ಕೂಡಲ ಸಂಗಮದ ಬಸವ ಧರ್ಮ ಪೀಠ, ಗ್ರಂಥ ಪ್ರಕಾಶನ ಸಂಸ್ಥೆಯಾದ ಸುಯಿಧಾನ ಸುಗ್ರಂಥ ಮಾಲೆ, ಸಾಮಾಜಿಕ ಸಂಘಟನೆಯಾದ ರಾಷ್ಟ್ರೀಯ ಬಸವದಳ. ಶ್ರೀಗಳು ಹಿರಿಯೂರಿನಲ್ಲಿ 30-6-1995 ರಂದು ಪ್ರವಚನ ಮಾಡುವಾಗ ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿ ಹೊಂದಿದರು. ಅವಿಶ್ರಾಂತ ಚೇತನವಾಗಿ ಜೀವನದ ಕಡೆಯ ಕ್ಷಣದವರೆಗೂ ಜ್ಞಾನದಾಸೋಹ ಮಾಡಿದ ವಾಙ್ಮಯ ತಪಸ್ವಿ, ಪ್ರವಚನ ಯೋಗಿ ಪೂಜ್ಯ ಲಿಂಗಾನಂದ ಶ್ರೀಗಳು.

(ವಿಜಯ ಕರ್ನಾಟಕ, 30-6-2004 ಕೃಪೆಯಿಂದ)

ಬಸವಣ್ಣ ಅಪ್ರತಿಮ ಯೋಗಿ : ಮಾತೆ ಮಹಾದೇವಿ

ಬೆಂಗಳೂರು: ಸಮಾಜ ಸುಧಾರಕರು ಬಹಿರ್ಮುಖ ಸ್ವಭಾವದವರಾದರೆ ಯೋಗ ಸಾಧಕರು ಲೋಕಾಂತಕ್ಕಿಂತಲೂ ಏಕಾಂತ ಜೀವನ ವಿಧಾನ ಇಷ್ಟಪಡುವ ಅಂತರ್ಮುಖ ಸ್ವಭಾವದವರು ಎಂದು ಬಸವ ಧರ್ಮ ಪೀಠಾಧ್ಯಕ್ಷೆ ಮಾತೆ ಮಹಾದೇವಿ ಹೇಳಿದರು. 809ನೆಯ ಬಸವ ಲಿಂಗೈಕ್ಯ ಸಂಸ್ಮರಣೆ ಸಪ್ತಾಹದಲ್ಲಿ ಮಾತನಾಡುತ್ತಿದ್ದ ಅವರು, ಬಸವಣ್ಣನವರು ಲೋಕಾಂತದಲ್ಲಿದ್ದುಕೊಂಡೇ ಆಧ್ಯಾತ್ಮಿಕ ಸಿದ್ಧಿಯನ್ನು ಸಾಧಿಸಿದರು. ಅವರ ಆತ್ಮ , ಪಂಜರದ ಪಕ್ಷಿಯಾಗಿರದೆ ಗೂಡಿನ ಪಕ್ಷಿಯಾಗಿತ್ತು. ಆದ್ದರಿಂದಲೇ ಅವರು ಇಚ್ಛಾಮರಣಿಯಾಗಿ ದೇಹವನ್ನು ವಿಸರ್ಜಿಸಿ ಶ್ರಾವಣ ಶುದ್ಧ ಪಂಚಮಿಯಂದು ಉರಿಯುಂಡ ಕರ್ಪೂರದಂತೆ ಪರಮಾತ್ಮನಲ್ಲಿ ಲೀನವಾದರು ಎಂದರು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಸಂಯೋಜಿಸಿದ್ದ ಕಾರ್ಯಕ್ರಮದ ಸಮಾರೋಪ ಸಮಾರಂಭ ಉದ್ಘಾಟಿಸಿದ ಜೈನ್ ವೃತ್ತಿಪರ ಸಂಸ್ಥೆ ನಿರ್ದೇಶಕ ಡಿ.ಪಿ. ಪ್ರಕಾಶ್ ಮಾತನಾಡಿ, ಬಸವಣ್ಣನವರ ನೇತೃತ್ವದಲ್ಲಿ ನಡೆದ ಶರಣರ ಆಂದೋಲನ ಒಂದು ಐತಿಹಾಸಿಕ ಪ್ರಸಂಗ. ಇಂಥ ಸಮುದಾಯಿಕ ಚಿಂತನೆಯನ್ನು ಜಗತ್ತಿನ ಯಾವುದೇ ಧರ್ಮದ ಇತಿಹಾಸದಲ್ಲೂ ಕಾಣುವುದಿಲ್ಲ. ಆಂತರಂಗಿಕ ಸ್ವಾತಂತ್ರ್ಯ, ಮುಕ್ತ ಚಿಂತನೆಯ ಮೇಲೆ ನಿರ್ಮಾಣವಾದಾಗ ಅದನ್ನು ಸಾಮಾಜಿಕ ಸ್ವಾತಂತ್ರ್ಯ ಎಂಬ ಭಾವವನ್ನು ಶರಣರು ಬಿತ್ತಿ ಬೆಳೆಸಿದರು ಎಂದರು. ಸಾನ್ನಿಧ್ಯ

ವಹಿಸಿದ್ದ ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ ಮಾತನಾಡಿ, ಬಸವಣ್ಣರಂತಹ ಕ್ರಾಂತಿ ಪುರುಷರನ್ನು ನಂದಿಯ ಅವತಾರವೆಂದು ದೈವೀಕರಿಸಿ ಪುರಾಣಕಾರರು ಬಹಳ ಅನ್ಯಾಯ ಮಾಡಿದರು. ಬಸವಣ್ಣನವರ ಪ್ರಗತಿಪರ ಚಿಂತನೆಯನ್ನು ವಿರೋಧಿಸುವ ಸಂಕುಚಿತ ಜನರು ಏನೆಲ್ಲ ತಪ್ಪು ಪ್ರಚಾರಗಳನ್ನು ಮಾಡಿದರೂ ಅವು ಬಸವ ಭಾಸ್ಕರನ ಕೀರ್ತಿ ಉಜ್ವಲಗೊಳ್ಳುತ್ತಿದೆ ಮತ್ತು ವಿಸ್ತಾರಗೊಳ್ಳುತ್ತದೆ ಎಂದು ತಿಳಿಸಿದರು. ಪತ್ರಕರ್ತೆ ಕೆ.ಆರ್.ಮಂಗಳಾ ಪ್ರಕಾಶ್ ಅವರನ್ನು 'ಚರಕ' ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ ಸನ್ಮಾನಿಸಲಾಯಿತು. ಧಾರ್ಮಿಕ ಪ್ರಶ್ನೆಸ್ಪರ್ಧೆ ವಿಜೇತರಿಗೆ ತಿಪಟೂರು ಕಲ್ಪತರು ಕಾಲೇಜಿನ ನಿವೃತ್ತ ಪ್ರಾಂಶುಪಾಲೆ ಸುಜಯಾದೇವಿ ಮಹಾಲಿಂಗಯ್ಯ ಬಹುಮಾನ ವಿತರಿಸಿದರು.ಲಿಂಗಾಯತ ಧರ್ಮ ಮಹಾ ಸಭಾಧ್ಯಕ್ಷ ಪುಟ್ಟರುದ್ರಪ್ಪ ಸ್ವಾಗತಿಸಿದರು.

ಕೃಪೆ : ವಿಜಯ ಕರ್ನಾಟಕ 23-8-2004

'ಬಸವಣ್ಣ ಶರಣರ ಹೃದಯದ ಜ್ಯೋತಿ'

ಬೆಂಗಳೂರು ಆ.22- ಬಸವಣ್ಣನವರು ಶಾರೀರಿಕವಾಗಿ ನಮ್ಮಿಂದ ಅಗಲಿದ್ದರೂ ಸಹ ಎಲ್ಲ ಶರಣರ ಹೃದಯದಲ್ಲಿ ಜ್ಯೋತಿಯಂತೆ ಬೆಳಗುತ್ತಿದ್ದಾರೆ ಎಂದು ಕೂಡಲ ಸಂಗಮದ ಬಸವ. ಧರ್ಮ ಪೀಠಾಧ್ಯಕ್ಷೆ ಮಾತೆ ಮಹಾದೇವಿ ನುಡಿದರು. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ರಾಷ್ಟ್ರೀಯ ಬಸವ ದಳ ಮತ್ತು ವಿಶ್ವಕಲ್ಯಾಣ ಮಿಷನ್ ವತಿಯಿಂದ ಏರ್ಪಡಿಸಲಾಗಿದ್ದ ಗುರು ಬಸವೇಶ್ವರರ 809ನೇ ಲಿಂಗೈಕ್ಯ ಸಂಸ್ಮರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಪ್ರವಚನ ನೀಡಿದ ಅವರು, ಬಸವ ಕಲ್ಯಾಣ ಮತ್ತು ಕೂಡಲಸಂಗಮ ಇವು ಬಸವ ಧರ್ಮೀಯರಿಗೆ ಪವಿತ್ರ ಕ್ಷೇತ್ರಗಳು. ಕೂಡಲ ಸಂಗಮವು ಈಗಾಗಲೇ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದೆ. ಆದ್ದರಿಂದ ಈಗ ಬಸವ ಕಲ್ಯಾಣದಲ್ಲಿ 108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿಯನ್ನು ಸ್ಥಾಪಿಸುವ ಯೋಜನೆ ಹಮ್ಮಿಕೊಂಡಿದ್ದೇವೆ ಎಂದರು. ಬಸವ ಕಲ್ಯಾಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಬೃಹತ್ ಬಸವ ಪುತ್ಥಳಿಯ ಯೋಜನಾ ಪತ್ರವನ್ನು ಬಿಡುಗಡೆ ಮಾಡಿದ ಡಾ. ಸಿ. ವೀರಪ್ಪ ಮಾತನಾಡಿ, ಬಸವಣ್ಣನವರು ಲಿಂಗೈಕ್ಯರಾದ ಇಂದಿನ ದಿನ ನಮಗೆಲ್ಲ ಸಂತಾಪದ ದಿನ. ನಮ್ಮೆಲ್ಲರ ಹೃದಯದಲ್ಲಿ ಅವರು ಇಂದಿಗೂ ಪ್ರಕಾಶಿಸುತ್ತಿದ್ದಾರೆ ಎಂದರು. ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ. ಪ್ರಭುದೇವ ಅವರು ವರ್ಣ, ಲಿಂಗ, ಜಾತಿ ಭೇದವಿಲ್ಲದ ಸರ್ವಸಮಾನತೆಯ ಸುಂದರ ಸಮಾಜವನ್ನು ನಿರ್ಮಿಸಿದವರು ಬಸವಣ್ಣ. ಜಾತಿವಾದದ ವಿರುದ್ಧ ಸಿಡಿದೆದ್ದ ಗುರು ಬಸವಣ್ಣನವರು ಕಾಯಕ-ದಾಸೋಹದ ಸಿದ್ಧಾಂತದ ತಳಹದಿಯ ಮೇಲೆ ನವಸಮಾಜ ನಿರ್ಮಾಣ ಮಾಡಿದರು. ಜಗತ್ತಿನ ಪ್ರತಿಯೊಬ್ಬ ಮಾನವನಿಗೂ ಧರ್ಮಸಂಸ್ಕಾರ ಸಿಗಬೇಕು. ಎಲ್ಲರಿಗೂ ಪರಮಾತ್ಮನ ಅನುಗ್ರಹ ಸಿಗುವಂತಾಗಬೇಕೆಂದು ಇಷ್ಟಲಿಂಗವನ್ನು ನೀಡಿದರು ಎಂದರು. ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಭದ್ರಾವತಿ ಶಾಸಕ ಸಂಗಮೇಶ್ವರ ಅವರನ್ನು ಸನ್ಮಾನಿಸಲಾಯಿತು. ಲಿಂಗಾಯತ ಧರ್ಮ ಮಹಾಸಭಾದ ಅಧ್ಯಕ್ಷ ಎನ್.ಪುಟ್ಟರುದ್ರ ಸ್ವಾಗತಿಸಿದರು.

ಕೃಪೆ: ಪ್ರಜಾವಾಣಿ 23-8-2004

ಬಸವ ಪಂಚಮಿ: ಬಸವಣ್ಣನವರ ಲಿಂಗೈಕ್ಯ ಸಂಸ್ಮರಣೆ
ಬಸವ ಧರ್ಮ ಪಾಲನೆಗೆ ಮಾತಾಜಿ ಕರೆ

- ವರದಿ : ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಮಂತ್ರಪುರುಷ ಬಸವಣ್ಣನವರು ಶಾರೀರಿಕವಾಗಿ ನಮ್ಮಿಂದ ಅಗಲಿದ್ದರೂ ಸಹ ಎಲ್ಲ ಶರಣರ ಹೃದಯದಲ್ಲಿ ಜ್ಯೋತಿಯಂತೆ ಬೆಳಗುತ್ತಿದ್ದಾರೆ. ಅವರು ಅಮರಾತ್ಮರು. 1196ರಂದು ಶ್ರಾವಣ ಶುದ್ಧ ಪಂಚಮಿಯ ದಿನದಂದು ಬಸವೇಶ್ವರರು ಉರಿಯುಂಡ ಕರ್ಪುರದಂತೆ ಬಯಲಲ್ಲಿ ಬಯಲಾದರು. ಆ ಮಹಾಗುರುವಿನ ತತ್ತ್ವವನ್ನು ಅರಿತು ಆಚರಿಸುವುದೇ ನಿಜವಾದ ಸಂಸ್ಮರಣೆ ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಇಂದು ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ರಾಷ್ಟ್ರೀಯ ಬವ ದಳ ಮತ್ತು ವಿಶ್ವಕಲ್ಯಾಣ ಮಿಷನ್ ವತಿಯಿಂದ ಏರ್ಪಡಿಸಲಾದ ಗುರು ಬಸವೇಶ್ವರರ 809ನೆಯ ಲಿಂಗೈಕ್ಯ ಸಂಸ್ಮರಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವಹಿಸಿ ಪ್ರವಚನ ನೀಡುತ್ತ, ಬಸವ ಕಲ್ಯಾಣ ಮತ್ತು ಕೂಡಲ ಸಂಗಮ ಇವು ಬಸವ ಧರ್ಮೀಯರಿಗೆ ಪವಿತ್ರ ಕ್ಷೇತ್ರಗಳು. ಕೂಡಲ ಸಂಗಮವು ಈಗಾಗಲೇ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದೆ. ಆದ್ದರಿಂದ ಈಗ ಬಸವ ಕಲ್ಯಾಣದಲ್ಲಿ 108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿಯನ್ನು ಸ್ಥಾಪಿಸುವ ಯೋಜನೆ ಹಮ್ಮಿಕೊಂಡಿದ್ದೇವೆ. ಇದಕ್ಕೆ ಎಲ್ಲರೂ, ಸಹಾಯ ಸಹಕಾರ ನೀಡಬೇಕೆಂದು ಕೋರಿದರು. ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ ಧ್ವಜಾರೋಹಣ ಮಾಡಿ ಮಾತನಾಡಿದರು. ಭದ್ರಾವತಿಯ ಶಾಸಕರಾದ ಶರಣ ಸಂಗಮೇಶ್ವರ ಅವರು ಪೂಜ್ಯ ಮಾತಾಜಿಯವರಿಂದ ಶಾಲು ಸತ್ಕಾರ ಸ್ವೀಕರಿಸಿ, ಮಾತನಾಡಿ, ಮಾತಾಜಿಯವರ ಆಶೀರ್ವಾದದಿಂದಲೇ ತಾವು ಶಾಸಕರಾಗಿದ್ದು, ಅವರಲ್ಲಿ ಅದ್ಭುತ ಶಕ್ತಿಯಿದೆ. ಮಾತಾಜಿಯವರ ಮಾರ್ಗದರ್ಶನದಲ್ಲಿ ನಡೆದಾಗ ಈ ಬಸವ ಧರ್ಮ ಜಗದ್ವಿಖ್ಯಾತವಾಗುವುದರಲ್ಲಿ ಎರಡು ಮಾತಿಲ್ಲ ಎಂದು ನುಡಿದರು.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ನಿರ್ಮಿಸಲು ಯೋಜಿಸಲಾಗಿರುವ ಬೃಹತ್ ಬಸವ ಪುತ್ಥಳಿಯ ಯೋಜನಾ ಪತ್ರವನ್ನು ಬಿಡುಗಡೆ ಮಾಡಿದ ಅಮೆರಿಕದ ಡಾ|| ಸಿ. ವೀರಪ್ಪನವರು ಮಾತನಾಡಿ, ಬಸವಣ್ಣನವರು ಲಿಂಗೈಕ್ಯರಾದ ಇಂದಿನ ದಿನ ನಮಗೆಲ್ಲ ಸಂತಾಪದ ದಿನ. ನಮ್ಮೆಲ್ಲರ ಹೃದಯದಲ್ಲಿ ಅವರು ಇಂದಿಗೂ ಪ್ರಕಾಶಿಸುತ್ತಿದ್ದಾರೆ, ಅಮರಾತ್ಮರಾಗಿದ್ದಾರೆ. ಪರಮಪೂಜ್ಯ ಮಾತಾಜಿಯವರು ಕೇವಲ ವ್ಯಕ್ತಿಯಲ್ಲ, ಬಸವ ಶಕ್ತಿಯ ಸಾಕಾರ ಮೂರ್ತಿಯೇ ತಾವಾಗಿದ್ದು ಅತ್ಯಂತ ಪ್ರಾಮಾಣಿಕವಾಗಿ, ನಿಸ್ವಾರ್ಥದಿಂದ ಬಸವ ಧರ್ಮ ಪ್ರಚಾರ ಮಾಡುತ್ತಿದ್ದಾರೆ. ಪರಿಶುದ್ಧ ಪರಿಪೂರ್ಣ ಚೇತನರಾದ ಮಾತಾಜಿಯವರಲ್ಲಿ ಧೈರ್ಯವಿದೆ. ಸತ್ಯ ಪ್ರತಿಪಾದನೆ ಮಾಡುವ ಸಾಹಸ ಗುಣವಿದೆ. ಧಾರ್ಮಿಕ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆ ಮಾಡಿದ್ದಾರೆ ಎಂದು ಮನಬಿಚ್ಚಿ ಮಾತನಾಡಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಜ್ಯೋತಿ ಬೆಳಗಿಸಿ ನೆರವೇರಿಸಿ ಮಾತನಾಡಿದ ಜಯದೇವ್ ಹೃದ್ರೋಗ್ರ ಆಸ್ಪತ್ರೆಯ ನಿರ್ದೇಶಕರಾದ ಡಾ|| ಪ್ರಭುದೇವ ಅವರು ವರ್ಗ, ವರ್ಣ, ಲಿಂಗ, ಜಾತಿ ಭೇದವಿಲ್ಲದ ಸರ್ವಸಮಾನತೆಯ ಸುಂದರ ಸಮಾಜವನ್ನು ನಿರ್ಮಿಸಿದವರು. ಬಸವಣ್ಣನವರು ಕರ್ಮವಾದದ ವಿರುದ್ಧ ಸಿಡಿದೆದ್ದ ಗುರು ಬಸವಣ್ಣನವರು ಕಾಯಕ-ದಾಸೋಹದ ಸಿದ್ಧಾಂತದ ತಳಹದಿಯ ಮೇಲೆ ನವಸಮಾಜ ನಿರ್ಮಾಣ ಮಾಡಿದರು. ಜಗತ್ತಿನ ಪ್ರತಿಯೊಬ್ಬ ಮಾನವನಿಗೂ ಧರ್ಮಸಂಸ್ಕಾರ ಸಿಗಬೇಕು. ಎಲ್ಲರಿಗೂ ಪರಮಾತ್ಮನ ಅನುಗ್ರಹ ಸಿಗುವಂತಾಗಬೇಕೆಂದು ಇಷ್ಟಲಿಂಗವನ್ನು ನೀಡಿದರು ಎಂದು ಗುರುಬಸವೇಶ್ವರರ ಸಮಗ್ರ ಕ್ರಾಂತಿಯ ಬಗ್ಗೆ ಮಾತನಾಡಿದರು.

ಮೊದಲಿಗೆ ಪೂಜ್ಯರಾದ ಮಾತೆ ಕಸ್ತೂರಿ ದೇವಿ, ಮಾತೆ ಮಂಗಳಾದೇವಿ, ಮಾತೆ ಜ್ಞಾನೇಶ್ವರಿ ಮತ್ತು ಗಣನಾಯಕಿ ದೇವಿಕಾ ಶರಣಪ್ಪನವರು ಮಂತ್ರಪುರುಷ ಬಸವಣ್ಣನವರ ಪೂಜೆ ನೆರವೇರಿಸಿದರು. ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರು ಬಸವ ಧ್ವಜಾರೋಹಣ ನೆರವೇರಿಸಿದರು. ಲಿಂಗಾಯತ ಧರ್ಮ ಮಹಾಸಭಾದ ಅಧ್ಯಕ್ಷರಾದ ಶರಣ ಎನ್.ಪುಟ್ಟರುದ್ರ ಸ್ವಾಗತಭಾಷಣ ಮಾಡಿದರು.

ಕು. ಸುನಂದಾರವರು 'ಶರಣು ಶರಣು' ಹಾಗೂ 'ಜಯತು ಜಯ' ಎಂಬ ಹಾಡಿಗೆ ವಚನಾಭಿನಯ ನೃತ್ಯ ಮಾಡಿದರು. ಆರಂಭದಲ್ಲಿ ಗಾಯಕ ರಂಗನಾಥ ಮತ್ತು ಶರಣೆ. ಭಾರತಿ ಕೆಂಪಯ್ಯ ಅವರು ವಚನಗಾಯನ ಮಾಡಿದರು. ಗಣಾಚಾರ ದಳದ ಶರಣ ಚಂದ್ರಮೌಳಿಯವರು ಕಾರ್ಯಕ್ರಮ ನಿರ್ವಹಿಸಿದರು. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಮೆರಿಕದ ಪಿಟ್ಸ್‌ಬರ್ಗ್‌ದಿಂದೆ ಆಗಮಿಸಿದ ಶರಣ ಕೆ.ಆರ್. ಚನ್ನನರಸಪ್ಪನವರು, ಹೆಚ್. ಎ. ಶರಣಪ್ಪ, ಚಿತ್ರದುರ್ಗದ ಚಂದ್ರಣ್ಣನವರು, ಬೆಂಗಳೂರಿನ ಮಾನಸಗಂಗೋತ್ರಿ ಶಾಲೆಯ ಸಂಸ್ಥಾಪಕ ಬಸವರಾಜಪ್ಪನವರು ಉಪಸ್ಥಿತರಿದ್ದರು. ಶರಣರಾದ ಎಸ್.ಎನ್.ನೀಲಕಂಠ, ಪ್ರಶಾಂತ ಪಾಟೀಲ್, ಸುಮಂಗಲಿ ಸೇವಾಶ್ರಮದ ಶರಣೆ.ಸುಶೀಲಮ್ಮನವರು, ಸಿದ್ಧರಾಮಪ್ಪ ಪಾಟೀಲ್ ಮತ್ತು ದಾಳಿಂಬದ ರಾಮಣ್ಣ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಬಸವ ಮಂಟಪದಲ್ಲಿ ಭಕ್ತಿ-ಶ್ರದ್ಧೆಯಿಂದ ನೀಲಾಂಬಿಕಾ ಸಂಸ್ಮರಣೆ ಆಚರಣೆ

ವಿಶ್ವಗುರು ಬಸವಣ್ಣನವರ ಧರ್ಮಪತ್ನಿ ನೀಲಗಂಗಮ್ಮ ಮಹಾನ್ ದಾಸೋಹಿ ಮತ್ತು ಲಿಂಗಯೋಗದಲ್ಲಿ ಬಲ್ಲಿದಳು. ಆದರ್ಶಗೃಹಿಣಿಯಾಗಿ, ಅನುಭವ ಮಂಟಪದ ಮಹಾತಾಯಿಯಾಗಿ ಎಲ್ಲರನ್ನೂ ಇಂಬಿಟ್ಟುಕೊಂಡರು. ಅಂಥ ಸದ್ಗುಣಿ ನೀಲಗಂಗಮ್ಮನವರು ಇಂದಿನ ಗೃಹಿಣಿಯರಿಗೆ ಆದರ್ಶವಾಗಿದ್ದಾರೆ ಎಂದು ಕೂಡಲಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ನಗರದ ಬಸವ ಮಂಟಪದಲ್ಲಿ ವಿಶ್ವಕಲ್ಯಾಣ ಮಿಷನ್ ವತಿಯಿಂದ ಏರ್ಪಡಿಸಲಾಗಿದ್ದ ನೀಲಾಂಬಿಕಾ ಸಂಸ್ಮರಣಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡುತ್ತ, ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ, ಅವಳ ಹೆಸರು ನೀಲಗಂಗಮ್ಮ ಅಥವಾ ನೀಲಾಂಬಿಕೆ. ಸ್ಪಷ್ಟ

ಇತಿಹಾಸ ಗೊತ್ತಾಗದ ಕಾರಣ ಕೆಲವು ಕವಿಗಳು ನೀಲಮ್ಮ ಮತ್ತು ಗಂಗಮ್ಮ ಎಂದು ಕಲ್ಪಿಸಿಕೊಂಡು ಬರೆದರು. ಆಂಧ್ರಪ್ರದೇಶದ ಬಾಡಾಲ ರಾಮಯ್ಯ ಎಂಬುವರು ಬಸವೇಶ್ವರರಿಗೆ ಒಬ್ಬಳೇ ಪತ್ನಿ ಇದ್ದರು ಎಂಬುದನ್ನು ಸಂಶೋಧನೆ ಮೂಲಕ ಕಂಡುಹಿಡಿದಿದ್ದಾರೆ ಎಂದು ಪೂಜ್ಯ ಮಾತಾಜಿ ವಿವರಿಸಿದರು.

ಮಂತ್ರಪುರುಷ ಬಸವಣ್ಣನವರು ಪಂಚಮಿ ದಿವಸ ಲಿಂಗೈಕ್ಯರಾಗಿದ್ದು, ಅವರ ಧರ್ಮಪತ್ನಿ ನೀಲಗಂಗಮ್ಮನವರು ಪಂಚಮಿಯ ಮರುದಿವಸ ಅಂದರೆ ಷಷ್ಠಿಯ ದಿನ ಲಿಂಗೈಕ್ಯರಾಗಿದ್ದಾರೆ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿ ಈ ದಿನಗಳು ಬಸವ ಧರ್ಮೀಯರಿಗೆ ಅತ್ಯಂತ ಪವಿತ್ರವಾದ ದಿನಗಳು ಎಂದು ಮಾತಾಜಿ ತಿಳಿಸಿದರು.

ಲಿಂಗಾಂಗಯೋಗಿಣಿ ನೀಲಾಂಬಿಕೆಯವರ ಸಂಸ್ಮರಣೆ ನಿಮಿತ್ತ ಸಾಮೂಹಿಕ ಇಷ್ಟಲಿಂಗ ಪೂಜಾ ಕಾರ್ಯಕ್ರಮವನ್ನು ಪೂಜ್ಯ ಮಾತಾಜಿಯವರ ಸನ್ನಿಧಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಧರ್ಮಗುರು ಬಸವಣ್ಣ, ಶರಣೆ. ನೀಲಾಂಬಿಕೆಯವರ ಪೂಜೆ ಹಾಗೂ ಇಷ್ಟಲಿಂಗಪೂಜೆಯನ್ನು ಭಕ್ತಿ-ಶ್ರದ್ಧೆಯಿಂದ ನೆರವೇರಿಸಲಾಯಿತು. ಸಾವಿರಾರು ಶರಣ-ಶರಣೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಸವ ಧರ್ಮ ಪೀಠದ ಪೂಜ್ಯ ಶ್ರೀ ಸದ್ಗುರು ಬಸವ ಕುಮಾರ ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ ಮತ್ತು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿಯವರು ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಭಾಗವಹಿಸಿದ್ದರು.

ಲೋಕದ ಡೊಂಕು....... !?

- ಮಾತೆ ಕಸ್ತೂರಿದೇವಿ

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ
ಮೆಚ್ಚ ಲಿಂಗದೇವ।

- ವಿಶ್ವಗುರು ಬಸವಣ್ಣನವರು (ಬ.ವ.ದೀ. 126)

"ಓ ! ವಚನವೇ, ಧರ್ಮಪಿತರ ಪರುಷಹಸ್ತದಿಂದ ರೂಪುಗೊಂಡಿರುವ ನೀನು ನಿಜಕ್ಕೂ ಧನ್ಯ ! ಏಕೆ ಗೊತ್ತೆ ?! ವಚನಾಭ್ಯಾಸಿಯನ್ನು ಸಾಕಷ್ಟು ಜಿಜ್ಞಾಸೆಗೆ ಒಳಗು ಮಾಡುವೆ. ಸಮಾಜ ಸುಧಾರಕರನ್ನು, ಸಾಮಾಜಿಕ, ನೈತಿಕ, ಆಧ್ಯಾತ್ಮಿಕ, ಮೌಲ್ಯಗಳನ್ನು ಜನಮನದಲ್ಲಿ ಬಿತ್ತಿಬೆಳೆಯುತ್ತಿರುವ ಧರ್ಮ ಪ್ರಸಾರಕರನ್ನು ಆಕ್ಷೇಪಿಸುತ್ತಾ ಕ್ಷಣಕಾಲ ಹಿಂಜರಿಸಿದರೂ ಬೆನ್ನ ಹಿಂದೆಯೇ ಸಾಂತ್ವನಗೊಳಿಸುವೆ, ಧೈರ್ಯ ತುಂಬುವೆ. ಆತ್ಮಾವಲೋಕನಕ್ಕೆ ಪ್ರಚೋದಿಸುವೆ. ಲೋಕಾನುಭವವನ್ನು ಬಿತ್ತರಿಸುವೆ. ಸಮಾಜೋದ್ಧಾರಕ್ಕೆ ಅಗತ್ಯವಿರುವ ನೈತಿಕಬಲವನ್ನು ತುಂಬುತ್ತಿರುವೆ. ಮತ್ತೊಬ್ಬರ

ದೋಷಗಳನ್ನು ಎಣಿಸುವುದರಲ್ಲೇ ನಿರತರಾದವರಿಗೆ ಬುದ್ಧಿ ಹೇಳುತ್ತಿರುವೆ. ತಮ್ಮನ್ನು ತಿದ್ದಿಕೊಳ್ಳಲಾರದ ದುರ್ಬಲರನ್ನು ಕಂಡು ಮರುಕ ಪಡುತ್ತಿರುವೆ. ಆತ್ಮ ಸಾಕ್ಷಿಯನ್ನೇ ಪಣಕ್ಕಿಡುತ್ತಿರುವೆ. ಡೊಂಕುಗಳನ್ನು ತಿದ್ದುವಲ್ಲಿ ಶಕ್ತಿ ವ್ಯರ್ಥವಾಗಬಾರದೆಂದು ತಡೆಯುತ್ತಿರುವೆ. ಕೊನೆಯಲ್ಲಿ ನಿರ್ಧಾರವನ್ನು ಪ್ರಕಟಿಸುತ್ತಿರುವೆ. ಶಿಲ್ಪಿ ಕೇವಲ ಭೌತಿಕ ಶಿಲೆಯ ಬಾಹ್ಯ ಸೌಂದರ್ಯವನ್ನು ಕಟೆಯುವಲ್ಲಿ ಯಶಸ್ವಿಯಾದರೆ ನೀನು ಮಾನವನ ಸದೃಢ-ಸುಂದರ ವ್ಯಕ್ತಿತ್ವ ವಿಕಾಸಕ್ಕೆ ಬೇಕಾದ ಅಂತರಂಗದ ಚಲುವನ್ನು ಇಮ್ಮಡಿಸಲು, ಕಟೆಯಲು ಶ್ರಮಿಸುತ್ತಿರುವೆ. ಆದ್ದರಿಂದ ಇದೋ ನಿನಗೆ ಸಹಸ್ರ ನಮನ''.

ಹಾಗಾದರೆ ಇನ್ನೊಬ್ಬರ ತಪ್ಪು-ಒಪ್ಪುಗಳನ್ನು ತೋರಿಸಿ ಬುದ್ಧಿ ಹೇಳಿ ಸರಿದಾರಿಗೆ ತರುವ ಪ್ರಯತ್ನ ಮಾಡಬಾರದೆ ? ತನ್ನ ಬೆನ್ನು ತನಗೆ ಕಾಣದ ಜಗತ್ತಿನಲ್ಲಿ ಇನ್ನೊಬ್ಬರು ತಪ್ಪುಗಳನ್ನು ತೋರಿಸದಿದ್ದರೆ ತಿದ್ದಿಕೊಳ್ಳುವುದಾದರು ಹೇಗೆ ? ಎಂಬ ಆಲೋಚನೆಗಳು ಸುಳಿಯುತ್ತವೆ.

ಶರಣ ಬಂಧುಗಳೇ, ಈಗ ಮೇಲಿನ ಆಲೋಚನೆಗಳಿಗೆ, ಧರ್ಮಪಿತರ ವಚನಕ್ಕೆ ವ್ಯಾಖ್ಯಾನದಂತೆ, ಹೋಲಿಕೆಯಂತಿರುವ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ವಚನದೊಂದಿಗೆ ವಿಶ್ಲೇಷಿಸೋಣ.

ಲೋಕದ ಡೊಂಕ ನೀವು ತಿದ್ದುವಿರಯ್ಯಾ.
ನಿಮ್ಮ(ತನು ಮನದ) ಡೊಂಡ ತಿದ್ದಿ ತಿಳುಹಿಕೊಳಲರಿಯದೆ
ಪುರಾತರು ನುಡಿದಂತೆ ನಡೆಯದವರೆಲ್ಲ
ಕಡು ಓದಿದ ಗಿಳಿ ತನ್ನ ಮಲವ ತಾ ತಿಂದಂತೆ
ನೆರೆಮನೆಯವರ ದುಃಖವ ಕೇಳಿ
ಗಡ್ಡ ಮೀಸೆ ಮಂಡೆಯ ಬೋಳಿಸಿಕೊಂಡು
(ಕಡೆಯಲ್ಲಿ) ಹೋಗಿ ಅಳುತ್ತಿಪ್ಪವರ ಕಂಡರೆ
ಕೂಡಲಚನ್ನ ಸಂಗನ ಶರಣರು ನಗುತ್ತಿಪ್ಪರಯ್ಯಾ -1615

ಲೋಕದ ಜನರ ಡೊಂಕುಗಳನ್ನು ಅಂದರೆ ವಕ್ರ (ಕೆಟ್ಟ) ಸ್ವಭಾವಗಳನ್ನು ತಿದ್ದುವುದು, ಸರಿಪಡಿಸುವುದು, ಪರಿವರ್ತಿಸುವುದು, ಸುಧಾರಿಸುವುದು, ಅಷ್ಟೇನೂ ಸುಲಭದ ಮಾತಲ್ಲ. ಅಧಿಕಾರ ಅಥವಾ ದಂಡದ ಬಲದಿಂದ ಇಂಥವರನ್ನು ತಾತ್ಕಾಲಿಕವಾಗಿ ನಿಯಂತ್ರಿಸಬಹುದಾದರು ಪರಿವರ್ತನೆ ಅಸಾಧ್ಯವಾಗುತ್ತದೆ. ಏಕೆಂದರೆ ತಿದ್ದಿಸಿಕೊಳ್ಳುವವರು ವಿಧೇಯರೂ, ಸಾತ್ವಿಕ ಗುಣ ಸಂಪನ್ನರು, ಗುರುಹಿರಿಯರಲ್ಲಿ ಭಕ್ತಿಗೌರವವುಳ್ಳವರೂ ಆಗಿದ್ದರೆ ಮಾತ್ರ ತಿದ್ದುವ ಶ್ರಮ ಸಾರ್ಥಕವಾಗುತ್ತದೆ. ದುರ್ಬಲ ಮನಸ್ಸಿನವರು, ಚಂಚಲಚಿತ್ತರೂ ಆಗಿದ್ದರೆ ಮಂಜುಗಡ್ಡೆಯಲ್ಲಿ ಮೂರ್ತಿ ಕಟೆದಂತೆ ವ್ಯರ್ಥವಾಗುತ್ತದೆ. ಕೆಟ್ಟ ಸ್ವಭಾವದವರಿದ್ದರೆ ಕೆಸರಿನ ಮೇಲೆ ಕಲ್ಲು ಒಗೆದು ಮೈಮೇಲೆ ಸಿಡಿಸಿಕೊಂಡಂತಾಗುತ್ತದೆ. ಮಾತ್ರವಲ್ಲ ಕೆಲವೊಮ್ಮೆ ಇನ್ನು ಹೆಚ್ಚಿನ ಅಪಾಯ ತಂದುಕೊಂಡಂತಾಗುತ್ತದೆ. ಇದಕ್ಕೊಂದು ಸುಂದರವಾದ ಕಥೆಯಿದೆ. ಹೇಳಲೆ ?

ಕಾಡಿನ ಒಂದು ಮರದಲ್ಲಿ ಗುಬ್ಬಿ ದಂಪತಿಗಳು ಗೂಡು ಕಟ್ಟಿಕೊಂಡು ತಮ್ಮ ಮರಿಗಳೊಂದಿಗೆ ಅನ್ಯೋನ್ಯತೆಯಿಂದ ವಾಸವಾಗಿದ್ದವು. ಅದರಂತೆ ಪಕ್ಕದ ಕೊಂಬೆಯಲ್ಲಿ ಒಂದು ಮಂಗ ವಾಸವಾಗಿತ್ತು. ಒಂದು ದಿನ ಗುಬ್ಬಿ ಮಂಗನಿಗೆ ಹೇಳಿತು "ಮಂಗಣ್ಣ ನೀನು ಬಿಸಿಲಿನಲ್ಲಿ ಒಣಗುವೆ, ಚಳಿಯಲ್ಲಿ ನಡುಗುವೆ, ಮಳೆಯಲ್ಲಿ ತೋಯುವೆ. ನಿನ್ನನ್ನು ನೋಡಿದರೆ ಮರುಕವುಂಟಾಗುತ್ತದೆ. ಆದ್ದರಿಂದ ನೀನು ಗೂಡುಕಟ್ಟಿಕೊಂಡು ನಮ್ಮಂತೆ ಸುಖವಾಗಿರಬಾರದೇಕೆ ? ಗೂಡು ಕಟ್ಟಲು ನಿನಗೆ ನಾವು ಸಹಾಯ ಮಾಡುತ್ತೇವೆ" ಎಂದು ಬುದ್ಧಿ ಹೇಳಿತು. ಈ ಮಾತುಗಳಿಂದ ಮಂಗನಿಗೆ ಬಹಳ ಸಿಟ್ಟು ಬಂತು. ಅದು ಹೇಳಿತು. "ಇದನ್ನು ಹೇಳಲು ನೀನಾರು? ನಿನ್ನ ಆಕಾರವೇನು ? ನನ್ನದೇನು ? ನನಗೇ ಬುದ್ಧಿ ಹೇಳುವೆಯಾ ? ತಾಳು, ನಿನಗೆ ನಾನೇ ಸರಿಯಾಗಿ ಬುದ್ಧಿ ಕಲಿಸುತ್ತೇನೆ" ಎಂದು ಗುಬ್ಬಿಯ ಗೂಡನ್ನೆಲ್ಲ ಸರಪರ ಎಂದು ಕಿತ್ತು ಹಾಕಿತು. ಆದ್ದರಿಂದ ದುಷ್ಟರಿಗೆ ಬುದ್ಧಿ ಹೇಳುವ ಬದಲಿಗೆ ಅವರಿಂದ ದೂರ ಸಾಗುವುದು ಲೇಸು. ಇಂಥ ಜನರ ನಡೆಯನ್ನು ಕುರಿತು ಷಣ್ಮುಖಸ್ವಾಮಿಗಳು ಅದೆಷ್ಟು ಚೆನ್ನಾಗಿ ನಮಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ. ನೋಡಿ

ತಮ್ಮೊಳಗೆ ತಾವು ತಿಳಿಯರು
ಪರವಾಗಿ ಹೇಳಿದರು ಗ್ರಹಿಸರು
ದುರುಳಬುದ್ಧಿಯಲ್ಲಿ ನಡೆವ
ದುರಾಚಾರಿಗಳ ಮುಖವ
ನೋಡಲಾಗದಯ್ಯಾ ಅಖಂಡೇಶ್ವರಾ - 206

ಇದು ಒಂದು ಬಗೆಯಾಯಿತು. ಇನ್ನೊಂದು ಬಗೆಯ ಜನರುಂಟು. ಅಂಥವರನ್ನು ಕಂಡು ಚನ್ನಬಸವಣ್ಣನವರು "ಕಡು ಓದಿದ ಗಿಳಿ ತನ್ನ ಮಲವ ತಾ ತಿಂದಂತೆ" ಎಂದು ವಿಡಂಬಿಸಿ ನಗುತ್ತಿದ್ದಾರೆ. ಅಂದರೆ ಅವರು ಅತಿಬುದ್ಧಿವಂತರು, ಬಹಳಷ್ಟು ಓದಿಕೊಂಡವರು, ತಿಳಿದವರು. ದಡ್ಡರು, ಮೂರ್ಖರು, ಕಿರಿಯರು, ದುಷ್ಟರು, ಅಜ್ಞಾನಿಗಳು ಮಾತ್ರ ತಪ್ಪು ಮಾಡುತ್ತಾರೆ ಎಂದೇನಿಲ್ಲ. ತಿಳಿದೂ ತಿಳಿದೂ ತಪ್ಪುಗಳನ್ನು ಮಾಡುವವರು ಜಗತ್ತಿನಲ್ಲಿ ಉಂಟು. ಇತ್ತೀಚೆಗಂತೂ ಇಂಥವರ ಸಂಖ್ಯೆ ಜಾಸ್ತಿಯಾಗಿದೆ. ರಾಜಕಾರಣಿಗಳು, ಸರ್ಕಾರಿ ವಲಯದ ಉನ್ನತ ಅಧಿಕಾರಿಗಳು ಮತ್ತಿತರು ಈ ಪಟ್ಟಿಗೆ ಸೇರುತ್ತಾರೆ. ಇವರನ್ನು ತಿದ್ದುವುದು ಹೇಗೆ? ಬಲ್ಲವರ ಸಲ್ಲದ ನಡೆಯನ್ನು ಚನ್ನಬಸವಣ್ಣನವರು ಇಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ಪಕ್ಕದ ಮನೆಯಲ್ಲಿ ಒಂದು ಸಾವಾಗಿದೆ. ಸಹಜವಾಗಿ ಸಂಬಂಧಪಟ್ಟವರಿಗೆಲ್ಲ ದುಃಖವಾಗಿದೆ. ಆದರೂ ಮಾಡಬೇಕಾದ ಮುಂದಿನ ಅನಿವಾರ್ಯ ಕರ್ತವ್ಯಗಳಿಗಾಗಿ ದುಃಖವನ್ನು ನುಂಗಿಕೊಂಡು ಮನಸ್ಸು ಕೊಡಬೇಕಾಗಿದೆ. ಅದರಂತೆ ಎಲ್ಲಾ ವಿಧಿಗಳನ್ನು ಪೂರೈಸಿ "ಅಳುತ್ತಾ ಕುಳಿತರೆ ಸತ್ತವರು ಎದ್ದು ಬರುವುದಿಲ್ಲ" ಎಂಬ ಸತ್ಯವನ್ನು ಅರಗಿಸಿಕೊಂಡು ಸಮಾಧಾನ ಪಡುತ್ತಿದ್ದಾರೆ. ಅಷ್ಟರಲ್ಲಿಯೇ ಸಾವಿನ ಸುದ್ದಿ ತಲುಪಿದರೂ, ಸಕಾಲಕ್ಕೆ ಬಂದು ಅಂತ್ಯಕ್ರಿಯೆಗಳಲ್ಲಿ ಭಾಗವಹಿಸದೆ, ಕೊನೆಯಲ್ಲಿ ಬಂದು, ಸಂಬಂಧವಿಲ್ಲದಿದ್ದರೂ

ಶೋಕಸೂಚಕವೆಂಬಂತೆ ಗಡ್ಡ-ಮೀಸೆ-ತಲೆ ಬೋಳಿಸಿಕೊಂಡು, ಜೋರಾಗಿ ಎದೆ ಬಡಿದುಕೊಂಡು ಅಳುವುದರಲ್ಲಿ ಏನರ್ಥವಿದೆ ?! ಬದಲಿಗೆ ನೊಂದ ಆಪ್ತರಿಗೆ ಸಾಂತ್ವನ ಹೇಳಿ, ಸಹಕಾರ ನೀಡಿ, ಧೈರ್ಯ ತುಂಬಬೇಕಲ್ಲವೆ ? ಇಂಥ ಜನರಿಗೆ ಶರಣೆ ಸತ್ಯಕ್ಕ ತಮ್ಮ ವಚನವೊಂದರಲ್ಲಿ ಹೀಗೆ ನುಡಿದಿದ್ದಾರೆ.

ಕಾರಣದಿಂದ ಕಾಯವ ಬಿಟ್ಟಡೆ ಶೋಕವೇಕೆ ?
ಶಿವಭಕ್ತರು ಶಿವಾತ್ಮಸ್ವರೂಪು
ಎನ್ನವರು ಅನ್ಯರೆಂದುಂಟೆ ?
ಇದು ಗನ್ನದ ಮಾತೆಂದೆ
ಶಂಭು ಜಕ್ಕೇಶ್ವರಾ - 967

ಇಲ್ಲಿ ಗನ್ನದ ಮಾತು ಅಂದರೆ ಮೋಸದ ಮಾತೆಂದು ಸತ್ಯಕ್ಕನವರು ನಿಷ್ಠುರವಾಗಿ ಸಾರುತ್ತಿದ್ದಾರೆ. ತಿಳಿದೂ ತಪ್ಪಿ ನಡೆಯುವವರಿಗೆ ದೇವರು ಒಲಿಯುವುದಿಲ್ಲ ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು.

ಲೌಕಿಕವೇ ಇರಲಿ, ಪಾರಮಾರ್ಥಿಕವೇ ಇರಲಿ. ಸತ್ಕ್ರಿಯಾಚರಣೆಯ ಮೂಲಕ, ಸನ್ಮಾರ್ಗದಲ್ಲಿ ಸಾಗುತ್ತಾ, ಸದ್ಗುರಿಯನ್ನು ಮುಟ್ಟಬೇಕೆಂಬ ಮಹತ್ವಾಕಾಂಕ್ಷೆಯುಳ್ಳ ಸದ್ಭಕ್ತನು ತನ್ನ ಸಾಧನೆಗೆ ಪೋಷಕವಾಗಿರಲಿ ಎಂದೋ, ಜತೆಯವರನ್ನು ಸಹಪಥಿಕನಾಗಿ ಸತ್ಯದ ಹಾದಿಯಲ್ಲಿ ಕರೆದೊಯ್ಯಬೇಕೆಂದೋ ಅಥವಾ ಭೇದಭಾವವಿಲ್ಲದೆ ಎಲ್ಲರನ್ನು ಇಂಬಿಟ್ಟುಕೊಂಡು ಮುಕ್ತಿ ಪಥ ತೋರಬೇಕೆಂದೋ, ಸಾಧನೆಯ ಯಶಸ್ಸಿಗೆ ಅಡ್ಡಿಯಾಗುತ್ತಿರುವ ಅಂಥವರ ಲೋಪದೋಷಗಳನ್ನು ತಿದ್ದಿ ತಿಳುಹಿ ಮುನ್ನಡೆಸಬೇಕೆಂದು ಹಂಬಲಿಸುತ್ತಾನೆ. ಈ ಮಾರ್ಗದಲ್ಲಿ ನಿರಂತರವಾಗಿ ಶ್ರಮಿಸುತ್ತಾನೆ. ಹಾಗೇ ಶ್ರಮಿಸುವುದು ತನ್ನ ಧರ್ಮ ಎಂದೇ ಭಾವಿಸುತ್ತಾನೆ. ಆದರೆ ಎಷ್ಟೋ ಸಾರಿ ಜೀವನದಲ್ಲಿ ಇಂಥ ಪ್ರಯತ್ನಗಳು ಫಲಕೊಡದೆ ಇದ್ದಾಗ, ನಿರೀಕ್ಷೆಗೂ ಮೀರಿ ವಿರುದ್ಧ ದಿಕ್ಕಿನಲ್ಲಿ ಸಾಗಿದಾಗ, ತನ್ನ ನಂಬಿಕೆಗೆ ದ್ರೋಹವಾದಾಗ ಅಷ್ಟೇ ಪ್ರಮಾಣದಲ್ಲಿ ಘಾಸಿಗೊಳಗಾಗುತ್ತಾನೆ; ಭ್ರಮನಿರಸನ ಹೊಂದುತ್ತಾನೆ; ಮಾನಸಿಕವಾಗಿ ಆಘಾತಗೊಳ್ಳುತ್ತಾನೆ. ಹೀಗಾಗಬಾರದೆಂದು ಧರ್ಮಪಿತರು ತಮ್ಮ ಧರ್ಮಬಂಧುಗಳಿಗೆ ಮೊದಲೇ ಕಿವಿಮಾತು ಹೇಳುತ್ತಿದ್ದಾರೆ.

" ತನ್ನೊಡನೆ ಮಲಗಿರ್ದ ಸತಿಯನೆಬ್ಬಿಸದೆ ಶಿವಲಿಂಗಕ್ಕೆರೆವ
ಸದ್ಭಕ್ತನ ಶ್ರೀಪಾದವ ತೋರಿ ಬದುಕಿಸಯ್ಯ ಲಿಂಗದೇವಾ"

ಬ.ವ.ದೀ. 1031

ಇಲ್ಲಿ ತನ್ನ ಅರ್ಧಾಂಗಿ, ಜೀವನ ಸಂಗಾತಿ, ಸಹಧರ್ಮಿಣಿ ಎಂದು ನಂಬಿದ್ದರೂ ಪತಿಯ ಸಾಧನೆಗೆ ಸಹಕರಿಸದಿದ್ದರೆ ಚಿಂತಿಸಬೇಕಾಗಿಲ್ಲ; ಆಕೆಯ ಮೇಲೆ ಕೋಪಗೊಳ್ಳುವ ಅಗತ್ಯವಿಲ್ಲ. ಆಕೆಯ ದಾರಿಗೆ ಆಕೆಯನ್ನು ಬಿಟ್ಟು, ಸಮಚಿತ್ತತೆಯನ್ನು ಕಾಯ್ದುಕೊಂಡು, ತಾನು ಮುಕ್ತಿ ಪಥದಲ್ಲಿ ಸಾಗಿದರಾಯಿತು ಎನ್ನುತ್ತಿದ್ದಾರೆ ಬಸವಣ್ಣನವರು.

ಈಗ ಬಸವಣ್ಣನವರ ವಚನಗಳಲ್ಲಿ ಲೋಕದಲ್ಲಿರಬಹುದಾದ ಸ್ವಾಭಾವಿಕ ಡೊಂಕುಗಳು ಹೇಗೆ ವ್ಯಕ್ತವಾಗಿವೆ ಎಂಬುದನ್ನು ನೋಡೋಣ

★ ಕುಬುದ್ಧಿಯುಳ್ಳವರಿಗೆ ಸುಬುದ್ಧಿಯ ಹೇಳಿದಡೆ
ಕುಬುದ್ಧಿ ಮಾಣ್ಬುದೇ ಲಿಂಗದೇವಾ ?

★ ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟಡೆ
ಭಕ್ತಿಯಂತಪ್ಪುದು ಮುನ್ನಿನಂತಲ್ಲದೆ ?

★ ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟಡೆ
ಕೆಟ್ಟವನೇಕೆ ಸದ್ಭಕ್ತನಹನು, ಲಿಂಗದೇವಾ ?

★ ಒಳಗೆ ಕುಟಿಲ, ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ ಲಿಂಗವು

★ ಗಂಡ ಲಿಂಗದೇವರ ಭಕ್ತ
ಹೆಂಡತಿ ಮಾರಿ ಮಸಣಿಯ ಭಕ್ತೆ!

★ ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬರು
ಕಂಗಳಿಚ್ಛೆಗೆ ಪರವಧುವ ನೆರೆವರು

★ ಒಂದನಾಡ ಹೋಗಿ ಒಂಬತ್ತನಾಡುವ ಡಂಭಕರ ಮೆಚ್ಚ ನಮ್ಮ ಲಿಂಗದೇವ

★ ಕೆಡುವೊಡಲ ನಚ್ಚಿ, ಕಡುಹುಸಿಯನೆ ಹುಸಿದು,
ಒಡಲ ಹೊರೆವವರ ಲಿಂಗದೇವನವರನೊಲ್ಲ ಕಾಣಿರಣ್ಣಾ!

★ ನುಡಿದು ಹುಸಿವ, ನಡೆದು ತಪ್ಪುವ
ಪ್ರಪಂಚಿಯನೊಲ್ಲ ಲಿಂಗದೇವಾ.

ಇಂಥ ಅಸಂಖ್ಯಾತ ಡೊಂಕುಗಳನ್ನು ನಮ್ಮ ಮುಂದಿಡುತ್ತಾರೆ. ಈ ಡೊಂಕುಗಳನ್ನು ತಿದ್ದುವುದು ಅಸಾಧ್ಯದ ಮಾತೇ ಸರಿ. ಏಕೆಂದರೆ ಅವರಲ್ಲಿ "ಇವರು ಹೇಳುತ್ತಿರುವುದು ನಮ್ಮ ಒಳ್ಳೆಯದಕ್ಕೇ" ಎಂದು ಅರಿಯುವ ಸದ್ಗುಣ ಇರುವುದಿಲ್ಲ. ಮಾತ್ರವಲ್ಲ ಜೀವನದಲ್ಲಿ ಬಂದೆರಗುವ ಕಷ್ಟನಷ್ಟಗಳು ಸಹ ಇಂಥವರನ್ನು ಪರಿವರ್ತಿಸುವಲ್ಲಿ ಸೋಲುತ್ತವೆ ಎಂಬುದು ಕಹಿಯಾದರೂ ಸತ್ಯ. ಆದ್ದರಿಂದಲೇ ಇಂಥ ಸಂಕಷ್ಟ ಪರಿಸರದಲ್ಲಿ ಭಕ್ತನು ತಿದ್ದುವ ಶ್ರಮದ ಬದಲಿಗೆ ತನ್ನನ್ನು ತಾನು ತಿದ್ದಿಕೊಳ್ಳಲು ಪ್ರಯತ್ನಿಸುವುದೇ ಲೇಸು. ಸ್ವಪರಿವರ್ತನೆಯಿಂದ ಶ್ರೀಗಂಧದ ಮರದೊಂದಿಗೆ ಒಡನಾಡಿದ ಬೇವು ಬೊಬ್ಬುಲಿಗಳು ಕೊಂಚಕಾಲವಾದರೂ ಸುವಾಸನೆ ಬೀರುವಂತೆ ವ್ಯಕ್ತಿಯ ಪ್ರಭಾವದಿಂದ ಪರಿಸರವು ಬದಲಾಗುವ ಸಾಧ್ಯತೆಯುಂಟು. ಇಲ್ಲದಿದ್ದರೆ ತನ್ನ ಉನ್ನತಿಯಾದರೂ ಸಾಧ್ಯವಾಗುತ್ತದೆ. ಆದರೆ ಅಂಥ ಜೀವನದಲ್ಲಿ, ವ್ಯಕ್ತಿಗೆ ಆದರ್ಶಗಳು, ಮೌಲ್ಯಗಳಿರುವುದು ತಪ್ಪಲ್ಲ. ಆದರ್ಶಗಳು ಕಾರ್ಯರೂಪಕ್ಕೆ ಬರಲು, ಪೋಷಕವಾಗಿ ಕೆಲವು ಸದ್ಗುಣಗಳು ಬೇಕಾಗುತ್ತವೆ. ಕಾರ್ಯಗಳು ಅಗತ್ಯವಿರುವ ಸದ್ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ಕೇವಲ ಆದರ್ಶ ಮಾತ್ರದಿಂದಲೇ ಸಿದ್ಧಿಸುವುದಿಲ್ಲ. ಈ ಕಾರಣಕ್ಕಾಗಿಯೇ ಜಡ ಆದರ್ಶವಾದಿಗಳು, ಆದರ್ಶವೀರರು ಜೀವನದಲ್ಲಿ

ಯಶಸ್ಸು ಕಾಣದೆ ಸೋಲನ್ನು ಅನುಭವಿಸುತ್ತಾರೆ. ಅಂಥವರು ಆತ್ಮಾವಲೋಕನ ಮಾಡಿಕೊಳ್ಳುವುದನ್ನು ಅಥವ (ಪ್ರಾಮಾಣಿಕವಾಗಿ) ತಮ್ಮ ದೌರ್ಬಲ್ಯಗಳನ್ನು ಒಪ್ಪಿಕೊಂಡು ತಿದ್ದಿಕೊಳ್ಳುವುದನ್ನು ಅಪಮಾನ ಎಂದೇ ಭಾವಿಸುತ್ತಾರೆ. ಇಂಥ ಆತ್ಮ ವಂಚಕರಿಗೆ ಪೂಜ್ಯ ಬಾಪೂಜಿಯವರ ಮಾತುಗಳು ಮನನಯೋಗ್ಯವಾಗಿವೆ. ''ನನ್ನ ದೌರ್ಬಲ್ಯಗಳೆಷ್ಟೆಂಬ ಅರಿವು ನನಗಿದೆ. ಆ ಅರಿವೇ ನನ್ನ ಎಲ್ಲ ಶಕ್ತಿಯ ಮೂಲ. ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನ ಅಪೂರ್ವ ಬಲ. ತನ್ನ ಸಂದೇಶ ಮಾನ್ಯವಾಗಲಿಲ್ಲ ಎಂದು ಕೋಪಗೊಳ್ಳುವ ಸುಧಾರಕ ಆ ಕ್ಷಣದಲ್ಲಿ ಅಲ್ಲಿಂದ ದೂರವಾಗಿ ಕಾಡು ಸೇರಬೇಕು. ತಾಳ್ಮೆಯಿಂದ ಅವಲೋಕಿಸುವುದನ್ನು, ನಿಂತು ಕಾಯುವುದನ್ನು, ಬಲಸಂವರ್ಧನೆಗಾಗಿ ಪ್ರಾರ್ಥಿಸುವುದನ್ನು ಕಲಿಯಬೇಕು''.

ಪ್ರವಚನ ಪಿತಾಮಹ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ನುಡಿಮುತ್ತುಗಳನ್ನು ಕೇಳಿರಿ ''ವಚನೋಪದೇಶಕ್ಕಿಂತ ವರ್ತನೋಪದೇಶ ಹೆಚ್ಚು ಪರಿಣಾಮಕಾರಿ''.

ಬಸವ ಧರ್ಮ ಪೀಠಾಧ್ಯಕ್ಷರೂ, ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳೂ ಆದ ಪೂಜ್ಯ ಶ್ರೀ ಮಾತಾಜಿಯವರ ಕಿವಿ ಮಾತುಗಳಿಗೆ ಕಿವಿಗೊಡೋಣ ''ಸಾಧನೆ, ಅನುಭವ, ಜ್ಞಾನಕ್ಕಿಂತಲೂ ಹೆಚ್ಚಾಗಿ ಅಳವಡಿಸಿಕೊಳ್ಳುವ ಬಗ್ಗೆ ಬೋಧಿಸಬೇಕು''.

ಜೀವನದಲ್ಲಿ ತನ್ನ ದೌರ್ಬಲ್ಯಗಳನ್ನು, ತಪ್ಪುಗಳನ್ನು ಅರಿತು ತಿದ್ದಿಕೊಂಡು ನಡೆದಾಗ ಮಾತ್ರ ಸಾಧಕನಿಗೆ ತೊಂದರೆಗಳು ಕಡಿಮೆಯಾಗಿ ಮುಂದಿನ ಪಥ ಗೋಚರವಾಗುತ್ತದೆ. ಅಂತೆಯೇ ಪ್ರಗತಿಯ ಹೆಜ್ಜೆಯಲ್ಲಿ ತೊಡಕಾಗಿರುವ ತನುಮನದ ಡೊಂಕುಗಳನ್ನು ಸರಿಪಡಿಸಿಕೊಂಡು ತಿದ್ದಿಕೊಂಡು, ಸಂತೈಸಿಕೊಂಡು ಬದುಕಿನಲ್ಲಿ ಮುನ್ನಡೆಯಲೆಂದು ಬಸವಣ್ಣನವರು ತಮ್ಮ ವಚನಗಳಲ್ಲಿ ಉಪದೇಶಿಸಿದ್ದಾರೆ. ಅಕ್ಕನ ವಾಣಿ ''ಕರಣಂಗಳ ಚೇಷ್ಟೆಗೆ ಮನವೇ ಬೀಜ'' ಎಂಬಂತೆ ಎಲ್ಲಕ್ಕೂ ಮೂಲ ಕಾರಣವೂ, ತನ್ನನ್ನು ತಾನು ತಿದ್ದಿಕೊಳ್ಳಲು ಅಸಮರ್ಥವೂ ಆದ ಮನಸ್ಸು ಹೇಗೆ ಅಪ್ರಯೋಜಕವಾದ ಚಟುವಟಿಕೆಗಳಲ್ಲಿ ತೊಡಗುತ್ತದೆ ಎಂಬುದನ್ನು ಈ ವಚನ ಚೆನ್ನಾಗಿ ನಿರೂಪಿಸುತ್ತಿದೆ.

ತನ್ನ ವಿಚಾರಿಸಲೊಲ್ಲದು; ಇದಿರ ವಿಚಾರಿಸ
ಹೋಹುದೀ ಮನವು
ಏನು ಮಾಡುವೆನೀ ಮನವನು ?
ಎಂತು ಮಾಡುವೆ ನೀ ಮನವನು ?
ಲಿಂಗದೇವನ ಶರಣರ ನಚ್ಚದ ಮಚ್ಚದ
ಮನವನು ಕಿಚ್ಚಿನೊಳಗಿಕ್ಕು ಬ.ವ.ದೀ-36

ಮನಸ್ಸು ಚಂಚಲಯುಕ್ತವಾದುದು ಮತ್ತು ನಂಬಿಕೆಗೆ ಅನರ್ಹವಾದುದು ಎಂದು ಎಲ್ಲರಿಗೂ ಗೊತ್ತು. ಅಂಥ ಮನಸ್ಸು ಮಾಡುವ ಕೆಲಸ ಅಷ್ಟಿಷ್ಟಲ್ಲ. ನಮ್ಮ ವಿಷಯವೇ ನಮಗೆ ಹಾಸಿಕೊಂಡು ಹೊದ್ದುಕೊಳ್ಳುವಷ್ಟಿರುವಾಗ, ತನ್ನನ್ನು ವಿಚಾರಿಸಿಕೊಳ್ಳಲು ಅದಕ್ಕೆ ಆಸಕ್ತಿಯಿಲ್ಲ. ಸಮಯವೂ ಇಲ್ಲ. ಆದರೆ ತನಗೆ ಸಂಬಂಧಪಡದ ಬೇರೊಬ್ಬರ ವಿಷಯಕ್ಕೆ ಮಾತ್ರ ಬೇಗನೆ ತಲೆತೂರಿಸುತ್ತದೆ.

ಅವರ ಬಗ್ಗೆ ನಖಶಿಖಾಂತ ವಿಚಾರಿಸಿಕೊಳ್ಳುತ್ತದೆ. ರಹಸ್ಯವನ್ನು ಬೇಧಿಸಿದಂತೆ ಭ್ರಮಿಸುತ್ತದೆ. ನಲಿಯುತ್ತದೆ. ಇಂಥ ಮನಸ್ಸನ್ನು ಏನು ಮಾಡಬೇಕು ? ಅದಕ್ಕೆ ಹೀಗೆ ಶಿಕ್ಷೆ ಕೊಟ್ಟು ಬುದ್ಧಿ ಕಲಿಸಬೇಕು ? ಇಂಥ ತುಂಟ ಮನಸ್ಸಿಗೆ ಒಳ್ಳೆಯ ಶಿಕ್ಷಣಕೊಟ್ಟು ಉದ್ಧರಿಸಲು ಸಮರ್ಥರಾದ, ಮನದೊಡೆಯ ಲಿಂಗದೇವನನ್ನು ನಂಬಿದ ಶರಣರು, ಕಣ್ಣೆದುರಿದ್ದು ಬುದ್ಧಿ ಹೇಳಿದರೂ, ಅವರನ್ನು ಗುರುತಿಸಿ ನಂಬಿ ನಚ್ಚಲು-ಅದಕ್ಕೆ ಇಷ್ಟವಿಲ್ಲ. ಆದ್ದರಿಂದ ಇಂಥ ಅವಿಧೇಯ ಮನಸ್ಸನ್ನು ಕಿಚ್ಚು-ಬೆಂಕಿಯಲ್ಲಿ ಹಾಕಿ ಸುಡಬೇಕೆಂದು ಹೇಳುತ್ತಿದ್ದಾರೆ. ಬೆಂಕಿಗೆ ಹಾಕಿ ಸುಡಲು ಅದು ಕೈಗೆ ಸಿಗುವ ವಸ್ತುವಲ್ಲ. ಆದ್ದರಿಂದ ಮನಸ್ಸನ್ನು ಸುಜ್ಞಾನದ ಕಿಚ್ಚಿನಲ್ಲಿ ಹಾಕಿ ಚೆನ್ನಾಗಿ ಬೇಯಿಸಬೇಕು, ಪಕ್ವಗೊಳಿಸಬೇಕು.

ಮನಸ್ಸಿನ ನಿಜಸ್ಥಿತಿ ಹೀಗಿದ್ದರೆ, ಇಂಥ ಅಪಕ್ವ ಮನಸ್ಸಿಗೆ ವಶನಾದ ಮಾನವನ ಡೊಂಕನ್ನು ಷಣ್ಮುಖಸ್ವಾಮಿಗಳು ತಮ್ಮ ವಚನದಲ್ಲಿ ಹೀಗೆ ಸೆರೆ ಹಿಡಿದಿದ್ದಾರೆ:

ತನ್ನ ಎಡೆಯಲ್ಲಿ ಕಪ್ಪೆ ಸತ್ತು ಬಿದ್ದುದನರಿಯದೆ
ಪರರ ಎಡೆಯಲ್ಲಿ ನೊಣನ ಅರಸುವ ಮರುಳ ಮಾನವನಂತೆ
ತನ್ನಂಗ ಮನದವಗುಣಂಗಳ ತೊಲಗನೂಂಕಲರಿಯದೆ
ಅನ್ಯರಲ್ಲಿ ಅವಗುಣ ಸಂಪಾದನೆಯ ಮಾಡುವ
ಕುನ್ನಿಗಳ ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರಾ. -305

ತಾನು ಊಟ ಮಾಡುವ ತಟ್ಟೆಯಲ್ಲಿ, ಎಲ್ಲರಿಗೂ ಕಾಣುವಂತೆ ಕಪ್ಪೆ ಸತ್ತು ಬಿದ್ದಿದ್ದರೂ ಅದು ಅವನ ಕಣ್ಣಿಗೆ ಮಾತ್ರ ಕಾಣುತ್ತಿಲ್ಲ. ಆದರೆ ಎದುರಿಗೆ ಅಥವ ಪಕ್ಕದಲ್ಲಿ ಕುಳಿತವರ ತಟ್ಟೆಯಲ್ಲಿ ಕಪ್ಪೆಗಿಂತಲೂ ಅತಿ ಚಿಕ್ಕದಾದ ಪ್ರಾಣಿ ನೊಣ ಸತ್ತು ಬಿದ್ದಿರುವುದನ್ನು ಕೆಟ್ಟ ಕುತೂಹಲದಿಂದ ಹುಡುಕುವ ಹಂಬಲ-ಹುಚ್ಚು ಈತನದು. ಅದೇ ರೀತಿ ತನ್ನ ಶರೀರ ಮತ್ತು ಮನಸ್ಸಿನಲ್ಲಿರುವ ಕೆಟ್ಟಗುಣಗಳನ್ನು ತೊರೆಯಲು ಪ್ರಯತ್ನಿಸದೆ ಬೇರೆಯವರಲ್ಲಿರುವ ದುರ್ಗುಣಗಳನ್ನು ನೋಡುವ ದೋಷಾರ್ಥಿಗಳ ಸಂಗದಿಂದ ದೂರವಿರಿಸು ಎಂದು ದೇವನಲ್ಲಿ ಬೇಡುವುದನ್ನು ಕಲಿಸುತ್ತಿದ್ದಾರೆ.

ತನುಮನಗಳನ್ನು ಸಂತೈಸಿಕೊಳ್ಳಲು ಅಸಮರ್ಥರಾದವರಿಗೆ ಶರಣರ ಸತ್ಸಂಗದಲ್ಲಿ ಬೆರೆತು, ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳಲು ಧರ್ಮಪಿತರು ತಮ್ಮ ಈ ವಚನದಲ್ಲಿ ಸೂಚಿಸುತ್ತಿದ್ದಾರೆ.

ಕಾಯವಿಕಾರ ಕಾಡಿಹುದಯ್ಯ
ಮನೋವಿಕಾರ ಕೂಡಿಹುದಯ್ಯ
ಇಂದ್ರಿಯವಿಕಾರ ಸುಳಿವುದಯ್ಯ
ಸುಳಿವಿನೊಳಗೆ ಸುಳಿವುತ್ತಲಿದ್ದೇನೆ, ಸಿಲುಕಿಸದಿರಯ್ಯ
ಅನ್ಯಚಿತ್ತವಿರಿಸದಿರಯ್ಯ, ನಿಮ್ಮ ಚಿತ್ತವಿರಿಸಯ್ಯ
ಅನುಪಮ ಸುಖಸಾರಾಯ ಶರಣರಲ್ಲಿ
ಲಿಂಗದೇವಯ್ಯ ಇದನೇ ಬೇಡುವೆನಯ್ಯ ಬ.ವ.ದೀ. 46

ಓ ! ಲಿಂಗದೇವನೇ, ಸರ್ವಸುಖದ ಸಾಧನ ಎಂದು ಭ್ರಮಿಸಿದ್ದ ಈ ಶರೀರದಲ್ಲಿ ಏನೆಲ್ಲ ಡೊಂಕುಗಳು-ವಿಕಾರಗಳು ಮನೆ ಮಾಡಿಕೊಂಡಿವೆ !! ನಿನ್ನಿಂದ ದೂರವಾಗಿ ದೇಹಧಾರಿಯಾಗಿ ಈ ಜಗತ್ತಿಗೆ ಬಂದ ಮೇಲೆ, ಮತ್ತೆ ನಿನ್ನನ್ನು ಸೇರುವ ಹಂಬಲದಲ್ಲಿರುವಾಗ ಅವು ದಾರಿ ತಪ್ಪಿಸುವ ಪರಿ ನನ್ನಲ್ಲಿ ಭಯವುಂಟು ಮಾಡುತ್ತದೆ. ಅವುಗಳಲ್ಲಿ ಮೊದಲನೆಯದಾದ ಕಾಯವಿಕಾರಗಳೆಂದೆನಿಸಿದ ಹಸಿವು, ತೃಷೆ, ನಿದ್ರೆಗಳು ಒಂದಕ್ಕಿಂತ ಒಂದು ಪ್ರಬಲವಾಗಿ ಕಾಡುತ್ತವೆ. ಅದಕ್ಕೆ ಅಲ್ಲವೆ ಅಕ್ಕ ''ಹಸಿವು, ತೃಷೆ, ನಿದ್ರೆಗಳೆ ನೀವು ಅಲ್ಲೆ ನಿಲ್ಲಿರಿ ಮುಂದೆ ಬಂದು ತೊಂದರೆ ಕೊಡಬೇಡಿ'' ಎಂದು ಕೇಳಿಕೊಂಡಿದ್ದು. ಇವುಗಳೊಂದಿಗೆ ಹೋರಾಡುತ್ತಿರುವಾಗಲೇ ಮನೋವಿಕಾರಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಕೂಡಿಕೊಂಡು ಮತ್ತಷ್ಟು ದಿಕ್ಕು ತಪ್ಪಿಸುತ್ತವೆ. ಹೀಗೆ ಭವ ಸಾಗರವನ್ನು ದಾಟುತ್ತಿರುವಾಗ ಕಾಯ ವಿಕಾರ ಎಂಬ ಅಲೆಗಳ ಹೊಡೆತವನ್ನು ತಪ್ಪಿಸಿಕೊಂಡು, ಮನೋವಿಕಾರ ಎಂಬ ಭಯಂಕರ ಜಲಚರಗಳಿಂದ ಪಾರಾಗಿ ದಡ ಸೇರಬೇಕೆನ್ನುವಾಗಲೇ ಇಂದ್ರಿಯ ವಿಕಾರಗಳು, ಸಪ್ತ ವ್ಯಸನಗಳೆಂಬ ಮರಣಾಂತಿಕ ಸುಳಿಗಳು ಸಿಕ್ಕಿದರೆ ಬದುಕಿ ಉಳಿಯುವುದಾದರು ಹೇಗೆ ? ಇಂಥ ದಾರುಣ ಸ್ಥಿತಿಯಲ್ಲಿ ನಿನ್ನ ನೆನಪೊಂದೆ ದಿವ್ಯ ಸಂಜೀವಿನಿ ಎಂದು ಮೊರೆಯಿಟ್ಟರೆ, ನನ್ನ ಆರ್ತನಾದವನ್ನು ನೀನು ಕೇಳಿಸಿಕೊಳ್ಳುತ್ತಲಿಲ್ಲ, ರಕ್ಷಣೆಗೆ ಧಾವಿಸಿ ಬರುತ್ತಲಿಲ್ಲ. ಆದ್ದರಿಂದ ಬದುಕುಳಿಯಲು ನನಗೀಗ ಹೊಳೆಯುತ್ತಿರುವ ಉಪಾಯ ಒಂದೇ. ಅದೇ ಈಗಾಗಲೇ ಇದೇ ದಾರಿಯಲ್ಲಿ ಸಾಗಿ, ನಿನ್ನನ್ನು ಸಾಕ್ಷಾತ್ಕರಿಸಿಕೊಂಡು ಪರಮಸುಖದಲ್ಲಿ ಓಲಾಡುತ್ತಿರುವ ಶರಣರ ಸಂಗವನ್ನು ಸೇರುವುದು. ಅವರಲ್ಲಿ ಬೇಡುವುದು. ಅವರಾದರೆ ಕರುಣೆಯಿಂದ ಬೇಗ ಒಲಿದು ಮುಂದೆ ದಾರಿತೋರುವರು, ನನ್ನ ಡೊಂಕುಗಳನ್ನು ತಿದ್ದಿ, ತೀಡಿ, ಒಪ್ಪಗೊಳಿಸುವರು. ನಾನಿನ್ನು ಹೋಗಿ ಬರುತ್ತೇನೆ. ಅಕ್ಕನ ಅಮರವಾಣಿಯಂತೆ ಶರಣರೊಂದಿಗೆ ನಿನ್ನನ್ನು ಭೇಟಿಯಾಗುತ್ತೇನೆ. ಜೈ ಜೈ....

ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ತನು ಶುದ್ಧವಾಯಿತ್ತು
ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಮನ ಶುದ್ಧವಾಯಿತ್ತು
ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಪ್ರಾಣ ಶುದ್ಧವಾಯಿತ್ತು
ಅಯ್ಯಾ ನಿಮ್ಮ ಅನುಭಾವಿಗಳು
ಎನ್ನ ಒರೆದೊರೆದು ಆಗುಮಾಡಿದ ಕಾರಣ
ಚೆನ್ನಮಲ್ಲಿಕಾರ್ಜುನ ಮಹದೇವಿಯಕ್ಕ ಪ್ರಿಯ ಲಿಂಗದೇವಾ
ನಿಮಗಾನು ತೊಡಿಗೆಯಾದೆನು.

★★★

ಪರಿಪೂರ್ಣ ಚೇತನ ಪೂಜ್ಯ ಅಪ್ಪಾಜಿಯವರು

ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮೀಜಿ

''ವಚನ ಸಾಹಿತ್ಯ ಧರ್ಮದ ಜೀವಾಳ. ಬಸವ ಧರ್ಮವನ್ನು ಮತ್ತೆ ಎತ್ತಿ ಹಿಡಿಯಬೇಕು. ಇಂದು ಮತ್ತು ಮುಂದೆ ಈ ಧರ್ಮದಿಂದ ಮಾತ್ರ ವಿಶ್ವಕುಟುಂಬ ಸಾಧ್ಯ. ಅಷ್ಟೇ ಅಲ್ಲದೆ ವಿಶ್ವದ ವೈಚಾರಿಕ ಧರ್ಮ ಸಹ. ದೇವನನ್ನು ಕಾಣುವ ಹಂಬಲವಿದ್ದವರಿಗೆ ಅತ್ಯಂತ ಸುಲಭ ಮಾರ್ಗ ತೋರುವ ಧರ್ಮವಿದು. ಇದು ನಶಿಸಿದರೆ ವಿಶ್ವದ ಅಧೋಗತಿ, ನಾಶ ಖಂಡಿತ''.

ಇದು ಪರಮ ಪೂಜ್ಯ ಅಪ್ಪಾಜಿಯವರ ದಿವ್ಯ ಸಂದೇಶ. ತಮ್ಮ ಕೊನೆಯ ಉಸಿರಿರುವವರೆಗೂ ಬಸವಣ್ಣನವರ ತತ್ತ್ವ ಸಿದ್ಧಾಂತಗಳನ್ನು ಮನೆಮನೆಗೆ ಮನಮನಕ್ಕೆ ಮುಟ್ಟಿಸಿದ ಅವಿಶ್ರಾಂತ ಚೇತನ ಪೂಜ್ಯ ಅಪ್ಪಾಜಿಯವರ ತೀವ್ರ ಕಳಕಳಿಯ ನುಡಿಗಳಿವು. ಬಸವ ತತ್ತ್ವ ಸಿದ್ಧಾಂತದಲ್ಲಿ ವಿಶ್ವದ ಉಜ್ವಲ ಭವಿಷ್ಯವಿದೆ ಎಂದು ಮನಗಂಡ ಪೂಜ್ಯ ಅಪ್ಪಾಜಿಯವರು ಪ್ರಾರಂಭದಲ್ಲಿ ಏಕಾಂಗಿಯಾಗಿ ಧರ್ಮ ಬೋಧನೆಯ ಬೀಜವನ್ನು ಬಿತ್ತಿದ್ದು ಇಂದು ಅದರ ಫಲವನ್ನು ನಾಡಿನಾದ್ಯಂತ ಕಾಣುತ್ತಿದ್ದೇವೆ.

''ಮರ್ತ್ಯದ ಮಣಿಹವ ಪೂರೈಸಲು ಶರಣರ ಅಮರ ವಚನಗಳನ್ನು ತಲೆಯ ಮೇಲಿಟ್ಟು ಹೊತ್ತುಕೊಂಡು ಜನಮನದಲ್ಲಿ ಬಿತ್ತರಿಸುವುದು ನಾನು ಕೈಗೊಂಡ ಒಂದು ಪವಿತ್ರ ಕಾಯಕ''- ಇಂಥ ಸಂಕಲ್ಪವನ್ನು ಹೊತ್ತು ತಮ್ಮ ಜೀವನವನ್ನು ಧರ್ಮ ಪ್ರಚಾರಕ್ಕಾಗಿ ಮುಡುಪಿಟ್ಟ ತ್ಯಾಗ ಜೀವಿ ಪೂಜ್ಯ ಅಪ್ಪಾಜಿಯವರು ನಂತರ ಮಾಡಿದ ಕಾರ್ಯಗಳು ಅಸಾಮಾನ್ಯ. ನಿಂತಲ್ಲಿ ನಿಲ್ಲದೆ, ಕೂತಲ್ಲಿ ಕೂರದೆ ಚರಿಸುವ ಜ್ಞಾನ ಭಂಡಾರವಾಗಿ ತಮ್ಮ 20ನೇ ವಯಸ್ಸಿನಿಂದ 64ನೇ ವಯಸ್ಸಿನವರೆಗೆ ಸುಮಾರು 44 ವರ್ಷಗಳ ಕಾಲ ನಿರಂತರವಾಗಿ, ಅಖಂಡವಾಗಿ, ಕಾಲ್ನಡಿಗೆಯಲ್ಲಿ, ಕುದುರೆ ಮೇಲೆ ಹೋಗಿ ಸಹ ಧರ್ಮ ಪ್ರಚಾರ ಮಾಡಿದರು. ಹೀಗೆ ನಿಸ್ವಾರ್ಥದಿಂದ, ತೀವ್ರ ಕಳಕಳಿಯಿಂದ ಧರ್ಮ ಪ್ರಚಾರ ಕಾರ್ಯವನ್ನು ಮಾಡುತ್ತಿದ್ದಾಗ, ಇದನ್ನು ಸಹಿಸದ ಸಂಪ್ರದಾಯವಾದಿಗಳು, ನಿರಂತರವಾಗಿ ಅನೇಕ ರೀತಿಯ ಕಿರುಕುಳವನ್ನು ನೀಡಿ ಪ್ರವಚನ ನಡೆಯದಂತೆ ಮಾಡಲು ಪ್ರಯತ್ನ ಪಟ್ಟರು. ಜನರಲ್ಲಿ ವಿಚಾರತೆಯನ್ನು ಬೆಳೆಸಿದರೆ ತಮ್ಮ ವೃತ್ತಿಗೆ ಸಂಚಕಾರ ಎಂಬುದನ್ನು ಅರಿತ ಸಂಪ್ರದಾಯ ವಾದಿಗಳು ವಿಪರೀತವಾಗಿ ತೊಂದರೆ ಕೊಟ್ಟರೂ ಸಹ ಇಟ್ಟ ಹೆಜ್ಜೆಯನ್ನು ಹಿಂತೆಗೆಯದೆ ಪೂಜ್ಯ ಅಪ್ಪಾಜಿಯವರು ಅತ್ಯಂತ ಧೈರ್ಯದಿಂದ ಬಂದ ಎಡರು ತೊಡರುಗಳನ್ನು ಎದುರಿಸಿ ಮುನ್ನಡೆದು ಮುಂದಿನವರಿಗೆ ಮಾರ್ಗದರ್ಶಿಗಳಾಗಿದ್ದಾರೆ. ಅವರೇ ಒಂದು ಕಡೆ ಹೇಳುತ್ತಾರೆ ''ನಾನಾ ಬಗೆಯ ಜನರನ್ನು ಕಂಡು ಬಾಳಿನ ಸಿಹಿ-ಕಹಿಗಳನ್ನು ಅನುಭವಿಸಿದ್ದೇನೆ. ಅನೇಕ ಸದ್ಭಕ್ತರ ಸಹೃದಯತೆಯಿಂದ ಭಾವಪುಳಕಿತನಾಗಿದ್ದೇನೆ. ಅನೇಕ ಕರ್ಮಠರ ಕಾಕ ದೃಷ್ಟಿಯಿಂದ ಕಳವಳಗೊಂಡಿದ್ದೇನೆ. ಆದರೂ ನಾನು ಕೈಗೊಂಡ ಧರ್ಮ ಪ್ರಚಾರ ಕಾರ್ಯವನ್ನು ಏಕಾಂಗಿಯಾಗಿ ಸಾಗಿಸಿಕೊಂಡು ಬಂದಿದ್ದೇನೆ''. ಎಂತಹ ಎಡರು ತೊಡರು ಬಂದರೂ, ಸಂಪ್ರದಾಯವಾದಿಗಳಿಂದ ನಿರಂತರ ಕಿರುಕುಳಗಳು ಬಂದರೂ ಅದನ್ನೆಲ್ಲ ಹಿಮ್ಮೆಟ್ಟಿಸಿ, ಕ್ರಾಂತಿ ಮಾಡಿದರು ಪೂಜ್ಯರು. ಪೂಜ್ಯ ಅಪ್ಪಾಜಿಯವರ ಸಿಂಹವಾಣಿ, ವಾಗ್ಮಿತ್ವ, ಬಸವಣ್ಣನವರ ಬಗ್ಗೆಯಿದ್ದ ತೀವ್ರತರ ಭಕ್ತಿ, ಧರ್ಮದ ಬಗ್ಗೆ ಕಳಕಳಿ, ಅದ್ಭುತ ಜ್ಞಾನ, ವೈಚಾರಿಕ ಮನೋಭಾವ, ಅಪ್ರತಿಮ ಧೈರ್ಯ ಈ ಎಲ್ಲವೂ ಜನರನ್ನು ಆಕರ್ಷಿಸಿತು. ಎಲ್ಲರ ಮನದಲ್ಲೂ

ಹೃದಯದಲ್ಲೂ ಪೂಜ್ಯ ಅಪ್ಪಾಜಿಯವರು ನೆಲೆ ನಿಂತರು. ಜನ ಜೀವನವನ್ನು ಪೂಜ್ಯ ಅಪ್ಪಾಜಿಯವರು ಕೃಷಿ ಮಾಡಿದರು. ಅವಗುಣಗಳನ್ನು ಬೇರು ಸಹಿತ ಕಿತ್ತೊಗೆದರು. ದುಶ್ಚಟ ದುರ್ಗುಣಗಳೆಂಬ ಹೆಂಟೆಯ್ನು ಒಡೆದು ಬಸವ ತತ್ತ್ವದ ಬೀಜವನ್ನು ಬಿತ್ತಿದರು. ಇಂದು ಎಲ್ಲೆಡೆ ಬಸವ ಪ್ರಜ್ಞೆಯ ಬೆಳೆಯನ್ನು ಕಾಣುತ್ತಿದ್ದೇವೆ. ಇಂದು, ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲನ್ನು ಕಾಣುತ್ತಿದ್ದೇವೆ. ಲಿಂಗಾಯತ ಧರ್ಮವನ್ನು ಪುನರುತ್ಥಾನಗೊಳಿಸಿದ ಕೀರ್ತಿ ಪೂಜ್ಯ ಅಪ್ಪಾಜಿಯವರದು.

'ಮುರುಘೇಶಾಯ ನಮಃ', 'ಸಿದ್ಧಗಂಗಾಯ ನಮಃ' ಮುಂತಾದುವೆಲ್ಲವೂ ಹೋಗಿ ''ಓಂ ಶ್ರೀ ಗುರು ಬಸವ ಲಿಂಗಾಯ ನಮಃ'' ಮಂತ್ರ ಎಲ್ಲೆಡೆ ರಾರಾಜಿಸುವಂತಾಯಿತು. ಬಸವ ತತ್ತ್ವ ಸಿದ್ಧಾಂತಗಳು ಪೂಜ್ಯ ಅಪ್ಪಾಜಿಯವರ ದಿಟ್ಟ ಹೆಜ್ಜೆಯ ಹಿನ್ನೆಲೆಯಲ್ಲಿ ಮತ್ತೆ ಕ್ರಾಂತಿಯ ಕಿರಣಗಳಾಗಿ ಬೆಳಕು ತೋರಿದವು. ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ರಚನೆಯಾಗಿ ಪೂಜ್ಯ ಶ್ರೀ ಮಾತಾಜಿಯವರನ್ನು ಜಗದ್ಗುರುವನ್ನಾಗಿ ಮಾಡಿದುದು ಪೂಜ್ಯ ಅಪ್ಪಾಜಿಯವರ ದಿಟ್ಟತನ ಒಂದು ನಿದರ್ಶನ ಪೂಜ್ಯ ಅಪ್ಪಾಜಿಯವರು ಶ್ರೇಷ್ಠ ಸಮಾಜ ಸುಧಾರಕರು. ಸಮಾಜದಲ್ಲಿನ ಅನಿಷ್ಠ ಜಾತಿಪದ್ಧತಿಯ ವಿರುದ್ಧ ಸಮರ ಸಾರಿದರು. ತಮ್ಮ ಪ್ರವಚನಗಳ ಮೂಲಕ ಜಾಗೃತಿ ಮೂಡಿಸಲು ಅವಿರಳ ಪ್ರಯತ್ನಪಟ್ಟರು. ಅವರು ಸಮಾಜದ ಬಗೆಗಿನ ಕಳಕಳಿಯಿಂದ ಹೇಳುತ್ತಾರೆ, ''ಶತಶತಮಾನಗಳಿಂದಲೂ ಬಂದ ಜಾತಿಯತೆ, ಅಸ್ಪೃಶ್ಯತೆ, ಮೂಢನಂಬಿಕೆ, ಯಜ್ಞ-ಯಾಗಾದಿಗಳ ಗತ ಸತ್ವವನ್ನು ಅರಿಯದೇ ಇಂದಿಗೂ ಜೋಪಾನ ಮಾಡಬೇಕೆಂಬ ಕಪಿಮುಷ್ಟಿಯ ಜನ, ತಮಗರಿವಿಲ್ಲದೆಯೇ ಹಲವಾರು ಜನರನ್ನು, ದೀನ ದಲಿತರನ್ನು, ವಿಚಾರವಾದಿಗಳನ್ನು ಹೊರಗಟ್ಟುತ್ತಿದ್ದಾರೆ. ಜ್ಞಾನ ಮಾರ್ಗದಿಂದ ಆಕರ್ಷಿತರಾಗಿ ಬರುವ ಜನರು ಶುಷ್ಕಾ ಕರ್ಮಕಾಂಡದಿಂದ ಬೇಸತ್ತು ಬರದಿದ್ದರೆ ಅಥವಾ ಇದ್ದವರೂ ಹೊರಹೋದರೆ ಇದಿರಾಗುವ ವಿಪತ್ತಿಗೆ ಕಾರಣರಾರು ?''. ಸಮಗ್ರವಾಗಿ ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವ ಅವರ ಈ ನುಡಿಗಳನ್ನು ಚಿಂತಿಸಿದರೆ.

ಭಾರತಕ್ಕೆ ಅಂಟಿರುವ ಈ ಜಾತೀಯತೆಯ ಗೊಂದಲಮಯ ವಾತಾವರಣ ದೂರವಾಗದೆ ?. ಕೇವಲ ಧರ್ಮ ಬೋಧನೆಯ ಕಾರ್ಯದಿಂದ ಧರ್ಮ ನೆಲೆ ನಿಲ್ಲದು. ಅದರ ಜೊತೆ ಜೊತೆಗೇ ಸಮಾಜ ಸೇವೆ ಅರ್ಥಾತ್ ಜಂಗಮ ಸೇವೆ ನಿರಂತರವಾಗಿ ನಡೆಯಬೇಕೆಂದು ನಾಡಿನಾದ್ಯಂತ ರಾಷ್ಟ್ರೀಯ ಬಸವ ದಳವನ್ನು ಹುಟ್ಟುಹಾಕಿದರು, ಪೂಜ್ಯ ಅಪ್ಪಾಜಿಯವರು. ಇಂದು ಸುಮಾರು 400 ಕ್ಕೂ ಹೆಚ್ಚು ಊರುಗಳಲ್ಲಿ ಅವು ಯಶಸ್ವಿಯಾಗಿ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಇಂಥ ಮಹಾನ್ ಚೇತನ, ಪ್ರವಚನ ಪಿತಾಮಹ, ಬಸವ ಧರ್ಮ ಪುನರುತ್ಥಾನಕರಾದ ಪೂಜ್ಯ ಅಪ್ಪಾಜಿಯವರ 74ನೇ ವರ್ಧಂತಿಯು ಇದೇ 18ರಂದು ನಡೆಯುತ್ತಲಿದ್ದು, ಅಂದೇ ಅವರ ಅಪೇಕ್ಷೆ ಮೇರೆಗೆ ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬವನ್ನು ಸಹ ನಾಡಿನಾದ್ಯಂತ ಆಚರಿಸಲಾಗುತ್ತಿದ್ದು, ಅವರ ದಿವ್ಯ ಆಶೀರ್ವಾದ ನಮ್ಮ ನಿಮ್ಮೆಲ್ಲರಲ್ಲಿ ನಿರಂತರವಾಗಿ ಹರಿದು ಬರಲಿ, ಧರ್ಮ ಪ್ರಚಾರ ಕಾರ್ಯದಲ್ಲಿ ನಮ್ಮನ್ನು ನಾವು ಇನ್ನಷ್ಟು ಹೆಚ್ಚು ತೊಡಗಿಸಿಕೊಳ್ಳುವಂತಾಗಲೆಂದು ಆಶಿಸೋಣ.

★★★

ವಿಸ್ತಾರಗೊಂಡ

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ ''ಕಲ್ಯಾಣ ನಗರ'' ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ. ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ

''ಬಸವ ಗಂಗೋತ್ರಿ''ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ ''ಆರೋವಿಲ್ಲೆ'' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿ ದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. ''ಬಸವ ಗಂಗೋತ್ರಿ ನಗರ'' 2ನೆಯ ಹಂತದ ಯೋಜನೆಯು ಸಹ ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು
ವರ್ಗ 'ಬಿ'-40' X 40'-ವಿಸ್ತೀರ್ಣ 1600 ಚ.ಅಡಿಗಳು
ವರ್ಗ 'ಸಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ

ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 2000-00 (ಎರಡು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 125-00(ಒಂದುನೂರಾ ಇಪ್ಪತ್ತೈದು) ರೂಗಳನ್ನು ಎಂ.ಓ/ ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. 2ನೆಯ ಹಂತದ ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂ : **080 - 23325335 / 23322790**

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು,
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೆಯ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ಬಸವ ಗಂಗೋತ್ರಿ ವಿಶೇಷ ವಿವರಗಳು

★ ಬೆಂಗಳೂರು-ಮೈಸೂರು ನಗರಗಳ ಚತುಷ್ಪಥ ಹೆದ್ದಾರಿಗೆ ಹೊಂದಿಕೊಂಡಿದೆ.

★ ರಾಜರಾಜೇಶ್ವರಿ ಡೆಂಟಲ್ ಕಾಲೇಜು, ಡಾನ್‌ಬಾಸ್ಕೋ ಎಂಜಿನಿಯರಿಂಗ್ ಕಾಲೇಜ್ ಮುಂತಾದ ಸಂಸ್ಥೆಗಳ ಸಮೀಪದಲ್ಲಿದೆ.

★ ಬೆಂಗಳೂರು ನಗರದಿಂದ ಸಾರಿಗೆ ವ್ಯವಸ್ಥೆಯ ಅನುಕೂಲವಿದೆ. ಹೀಗಾಗಿ ನಗರದಲ್ಲಿ ಉದ್ಯೋಗಿಗಳಾಗಿರುವವರಿಗೆ ಹೋಗಿ ಬರಲು ಅನುಕೂಲತೆ ಇದೆ.

★ ಮೊದಲನೆಯ ಹಂತದಲ್ಲಿ ರೂಪಿಸಿದ ನಿವೇಶನಗಳು ಮಾರಾಟವಾಗಿದ್ದು ಜನರ ಬೇಡಿಕೆ ಬಹಳವಾಗಿರುವುದರಿಂದ ಎರಡನೆಯ ಹಂತದ ಯೋಜನೆ ಪ್ರಾರಂಭಿಸಲಾಗಿದೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ 21 ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು 231, 227, 228, 229, 226ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ಪ್ರವೇಶ ದ್ವಾರವಿದೆ.

ಬೃಹತ್ ಬಸವ ಪುತ್ಥಳಿಗೆ ನಾಂದಿ ಪೂಜೆ

- ಮಾತಾಜಿ

ಬಸವ ಕಲ್ಯಾಣದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಬಸವ ಮಹಾಮನೆಯ ಆವರಣ ಹಿಂದೆ ತಲೆ ಎತ್ತಿ ನಿಂತಿದೆ ಶರಣ ಶೈಲ. 2002ರ ಮೇ 1,2 ಮತ್ತು 3 ರಂದು ನಡೆದ ಮೊಟ್ಟ ಮೊದಲ ಕಲ್ಯಾಣಪರ್ವದ ಸಮಯದಲ್ಲಿ ಮುಳ್ಳುಕಂಟಿಗಳಿಂದ ತುಂಬಿ ಹೋಗಿದ್ದ ಆ ಮರಡಿ ಇಂದು ಶರಣ ಶೈಲವಾಗಿದ್ದು, ನಳನಳಿಸುವ ಗಾಢ ಹಸಿರು ಬಣ್ಣದ ಬೇವಿನ ವೃಕ್ಷಗಳು, ಮುತ್ತುಗದ ಮರ ಮತ್ತು ಬಿಲ್ವ ವೃಕ್ಷಗಳಿಂದ ಕಣ್ಣಿಗೆ ತಂಪೆರೆಯುತ್ತಿದೆ. ಜೊತೆಗೆ ಸೊಂಪಾಗಿ ಬೆಳೆಯುತ್ತಿವೆ ತೇಗ, ಬಾದಾಮಿ ಗಿಡಗಳು. ಮಧ್ಯೆಮಧ್ಯೆ ಚೆನ್ನಾಗಿ ಬೆಳೆದು ಸುಳಿವ ಗಾಳಿಗೆ ತಲೆದೂಗುತ್ತಿವೆ ಎತ್ತರವಾಗಿ ಬೆಳೆದ ಜೋಳದ ಮತ್ತು ತೊಗರಿಯ ಬೆಳೆ. ಹುರುಳಿ, ಸೂರ್ಯಪಾನ, ಅರಿಷಿಣದ ಗಿಡಗಳೂ ಸೊಂಪಾಗಿ ಬೆಳೆದಿವೆ. ಎತ್ತರದ ದಿಬ್ಬದ ಮೇಲೆ ನಿಂತಾಗ ಬೀಸಿ ಬಂದು ಕಚಗುಳಿ ಇಡುವ ಗಾಳಿಯ ಒಯ್ಯಾರ ಬಸವ ಕಲ್ಯಾಣದ ಶರಣ ಶೈಲವನ್ನು ಒಂದು ಗಿರಿಧಾಮ (ಹಿಲ್ ಸ್ಟೇಷನ್)ವನ್ನಾಗಿ ಮಾಡಿದೆ. ಪರಿಶುದ್ಧ ಗಾಳಿ, ಸ್ಫಟಿಕದಷ್ಟು ಶುಭ್ರವಾದ ಸಿಹಿ ನೀರು ಯಾವುದೋ ವಿಶೇಷ ಆನಂದಾನುಭೂತಿಗೆ ಸಂದರ್ಶಕರನ್ನು ಒಯ್ಯುತ್ತಿದೆ.

ಸೆಪ್ಟಂಬರ್ 1, ಕಲ್ಯಾಣ ಬಸವೇಶ್ವರರ ಕಾರಣಿಕೋತ್ಸವದ ದಿನ; ಅಂದು ಬೃಹತ್ ಬಸವ ಪುತ್ಥಳಿ ನಿರ್ಮಾಣದ ನಾಂದಿ ಪೂಜೆಯ ಕಾರ್ಯಕ್ರಮ ನಿಯೋಜಿತವಾಗಿತ್ತು. ಆಗಸ್ಟ್ ತಿಂಗಳಲ್ಲಿ ಶಿಲ್ಪಿಗಳಾದ ಶ್ರೀ ಕೆ. ಶ್ರೀಧರ ಮೂರ್ತಿಯವರೊಡನೆ ಮಾತುಕತೆ ಆಡಿದ ನಂತರ 63 ಅಡಿ ಎತ್ತರದ ಮೂರ್ತಿಯ ನಿರ್ಮಾಣಕಾರ್ಯಕ್ಕೆ ಚಾಲನೆ ನೀಡುವ ಸಂಕಲ್ಪ ಉಂಟಾಯಿತು. ಬಸವ ಪಂಚಮಿಗೆ ಇಡೋಣ ಎಂದರೆ ಬೆಂಗಳೂರಲ್ಲಿ ಕಾರ್ಯಕ್ರಮ ಮಾಡಲು ಸರ್. ಕೆ.ಪಿ. ಪುಟ್ಟಣ್ಣ ಚೆಟ್ಟಿ ಪುರಭವನವನ್ನು ಮುಂಗಡವಾಗಿ ಕಾಯ್ದಿರಿಸಲಾಗಿತ್ತು. ಯಾವುದಾದರೂ ಬಸವಣ್ಣನವರಿಗೆ ಸಂಬಂಧಿಸಿದ ಮಹತ್ವದ ದಿನವನ್ನು ಹುಡುಕಲು ಸಾಧ್ಯವೆ ? ಎಂದು ಬೆಂಗಳೂರು ಮುದ್ರಣಾಲಯದ ದಿನದರ್ಶಿಯನ್ನು ತೆಗೆದುಕೊಂಡೆ. ಕಲ್ಯಾಣ ಬಸವೇಶ್ವರ ಕಾರಣಿಕೋತ್ಸವದ ದಿನ ಎಂದು ಸೆಪ್ಟಂಬರ್ 1 ರಂದು ಕಾಣಿಸಲಾಗಿತ್ತು. ಇಂಗ್ಲೀಷ್ ಮತ್ತು ಕನ್ನಡ ಆವೃತ್ತಿಯ ಎರಡೂ ದಿನದರ್ಶಿಗಳಲ್ಲಿತ್ತು. ತುಂಬಾ ಸಂತೋಷ ಮತ್ತು ಆಶ್ಚರ್ಯ ಉಂಟಾಗಿ ಬಸವ ಕಲ್ಯಾಣದಲ್ಲಿ ಏನಾದರೂ ಸಾಂಪ್ರದಾಯಿಕ ಪೂಜೆ ಇತ್ಯಾದಿ ನಡೆಯುವುದೆ? ವಿಚಾರಿಸಿರಿ ಎಂದು ನಮ್ಮ ಸಂಸ್ಥೆಯ ಮಾತೆ ನೀಲಗಂಗಮ್ಮನವರಿಗೆ ತಿಳಿಸಿದೆ. ಅಂಥದೇನೂ ಇಲ್ಲವೆಂದು ತಿಳಿಯಿತು. ಬೆಂಗಳೂರು ಮುದ್ರಣಾಲಯ ದಿನದರ್ಶಿಯ ಸಂಪಾದಕರಿಗೆ ಫೋನ್ ಮಾಡಿ ಈ ಮಾಹಿತಿ ನಿಮಗೆ ಹೇಗೆ ಸಿಕ್ಕಿತು ಎಂದು ಕೇಳಿದಾಗ ಹುಬ್ಬಳ್ಳಿಯ ಓರ್ವ ಪಂಡಿತರಾದ ರಾಜೇಶ್ವರ ಶಾಸ್ತ್ರಿ ಎಂಬುವವರು ಕೊಟ್ಟ ಮಾಹಿತಿಯಿಂದ ನಾವು ಮುದ್ರಿಸಿದ್ದೇವೆ ಎಂದರು. ಶರಣ. ಕಲ್ಯಾಣಪ್ಪ ಪರಮಾದಿ ಅವರಿಗೆ ಫೋನ್ ಮಾಡಿ ಶ್ರೀ ಶಾಸ್ತ್ರಿಗಳವರನ್ನು ಭೇಟಿ ಮಾಡಿ ವಿವರ ಪಡೆಯಿರಿ ಎಂದಾಗ ಶ್ರೀ ಶಾಸ್ತ್ರಿಗಳು ಹೇಳಿದರಂತೆ, "ಪ್ರತಿ ವರ್ಷ ಮುಂದಿನ ವರ್ಷದ ಕ್ಯಾಲೆಂಡರ್ ಬರೆಯುವ ಮುನ್ನ ಎಲ್ಲ ಪಂಚಾಂಗ ಕರ್ತರೂ ಸೇರಿ ಚರ್ಚಿಸುತ್ತೇವೆ.

ಬೇರೆಬೇರೆಯವರು ಕೊಡುವ ಮಾಹಿತಿಯನ್ನು ಸಂಗ್ರಹಿಸಿ ಕ್ಯಾಲೆಂಡರ್ ಸಿದ್ಧಪಡಿಸುತ್ತೇವೆ. ಆ ರೀತಿಯಲ್ಲಿ ಸಿಕ್ಕ ಮಾಹಿತಿ ಇದು'' ಎಂದರಂತೆ. ಹಿಂದಿನ ವರ್ಷದ ದಿನದರ್ಶಿಯಲ್ಲಿಯೂ ಇದು ಇದೆ. ನಾವು ಗಮನಿಸಿರಲಿಲ್ಲ.

ನಾನೊಮ್ಮೆ ಕೇಳಿದ್ದೆ ''ಬಾಗೇವಾಡಿಯಲ್ಲಿ ಬಸವಣ್ಣನವರ ರಥೋತ್ಸವಕ್ಕೆ ಮೊದಲು ದೇವಸ್ಥಾನದಿಂದ ಪಲ್ಲಕ್ಕಿಯು ಬಸವನ ಮರಡಿಗೆ ಹೋಗಿ ಬರುವುದು. ಅಲ್ಲಿ 'ಹೇಳಿಕೆ' ಆಗುತ್ತದೆ. ಅದಕ್ಕೆ ಕಾರಣಿಕ ಎನ್ನುತ್ತಾರೆ'' ಎಂದು. ಈ ಬಸವನ ಮರಡಿಯು ಬಾಗೇವಾಡಿಯಿಂದ ಇಂಗಳೇಶ್ವರಕ್ಕೆ ಹೋಗುವಾಗ ಬಲಗಡೆಗೆ ಹೋಗುವ ಒಂದು ಬಂಡಿದಾರಿಯಲ್ಲಿ ಹೋದಾಗ ಸಿಗುವ ದಿಬ್ಬ, ಈ ಬಸವನ ಮರಡಿಯ ಮೇಲೆ ಒಂದು ಚಿಕ್ಕ ಗುಡಿ ಇದೆ. ಅದು ಬಸವಣ್ಣನವರು ಹುಟ್ಟಿದ ಸ್ಥಳ ಎನ್ನುತ್ತಾರೆ. ತಾಯಿ ಮಾದಲಾಂಬಿಕೆ ಗರ್ಭಿಣಿ ಇರುವಾಗ ''ಹೊಲಕ್ಕೆ ಹೋಗುವ ಬಯಕೆ ವ್ಯಕ್ತಪಡಿಸುತ್ತಾಳೆ. ಜೋಳದ ತೆನೆ ತುಂಬಿ ನಿಂತ ಹೊಲದಲ್ಲಿ ಇರುವಾಗಲೇ ಹೆರಿಗೆಯ ಬೇನೆ ಆರಂಭವಾಗಿ ಅಲ್ಲೇ ಮಗುವು ಜನಿಸುತ್ತದೆ ಎಂಬ ಐತಿಹ್ಯವಿದೆ. ಆ ಜಾಗದಲ್ಲಿ ಜನರು ಗುಡಿಯೊಂದನ್ನು ಕಟ್ಟಿದ್ದಾರೆ. ಜಾತ್ರೆಗೆ ಮುನ್ನ ಅಲ್ಲಿಗೆ ಪಲ್ಲಕ್ಕಿ ಹೋದಾಗ ಪೂಜಾರಿಗಳು ''ಹೇಳಿಕೆ'' (ಕಾರಣಿಕ) ನುಡಿದು ನಂತರ ಬಾಗೇವಾಡಿಗೆ ಆಗಮಿಸುತ್ತಾರಂತೆ. ಧರ್ಮಪಿತ ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಶುದ್ಧ ಪಂಚಮಿಗೆ. ಅಂದಿಗೆ 12 ದಿವಸಕ್ಕೆ ಕಾರಣಿಕೋತ್ಸವ ಬರುತ್ತದೆ. ವ್ಯಕ್ತಿಗಳು ಲಿಂಗೈಕ್ಯರಾದ 11 ದಿವಸಗಳ ನಂತರ ಆಚರಿಸುವ ''ದಿನ'', ಲಿಂಗಾಯತ ಧರ್ಮದಲ್ಲಿ ಬರುವ ಗಣಾರಾಧನೆ ಅರ್ಥಾತ್ ಲಿಂಗೈಕ್ಯ ಸಂಸ್ಮರಣ ದಿನ ಇದು ಎಂದು ಊಹಿಸಬಹುದು ಎಂದುಕೊಳ್ಳುವಾಗಲೇ ಇದು ''ಬಸವ ದರ್ಶನ''ದ ದಿನ ಎಂಬ ಮಾಹಿತಿಯೂ ಲಭ್ಯವಾಗಿ ನಮಗೆಲ್ಲ ಅತೀವ ಸಂತೋಷವಾಯಿತು.

ಬಸವ ಗುರುವನ್ನು ಸರ್ವಾಂಗದಲ್ಲಿಯೂ ತುಂಬಿಕೊಂಡ ಮಡಿವಾಳ ಮಾಚಿದೇವರು ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ಗುರುತರ ಜವಾಬ್ದಾರಿ ನಿರ್ವಹಿಸಿದವರು. ಅವರ ನೇತೃತ್ವದಲ್ಲಿ ಹೋರಾಟ ನಡೆದು ಮುರುಗೋಡ ಬಳಿ ನಡೆದ ಹೋರಾಟದಲ್ಲಿ ಶರಣರಿಗೆ ಜಯವು ಸಿಗುತ್ತದೆ. ಸಾಹಿತ್ಯವನ್ನು ಸಹ್ಯಾದ್ರಿಯ ದುರ್ಗಮ ಪ್ರದೇಶಗಳ ಒಳಗೆ ಕಳಿಸುತ್ತಾರೆ. ಬಿಜ್ಜಳನ ಸೈನ್ಯ, ಅದರ ನೇತೃತ್ವ ವಹಿಸಿದ ಅಳಿಯ ಬಿಜ್ಜಳ ರಾಜಧಾನಿಯ ಕಡೆಗೆ ಮರಳುತ್ತಾರೆ. ಈ ಎಲ್ಲ ಮಾಹಿತಿಯನ್ನು ಧರ್ಮಪಿತರಿಗೆ ಮುಟ್ಟಿಸಲು ಧೀರಶರಣ ಮಡಿವಾಳ ಮಾಚಿದೇವರು ಯುದ್ಧದಲ್ಲಿ ತಮಗಾದ ಪೆಟ್ಟನ್ನು ಸಹಿಸಿಕೊಂಡೂ ಕೂಡಲ ಸಂಗಮದತ್ತ ಪಯಣಿಸುತ್ತಾರೆ. ಕೂಡಲ ಸಂಗಮವನ್ನು ತಲುಪಿದ ಮಾಚಿದೇವರು ಧರ್ಮ ಗುರು ಬಸವಣ್ಣನವರನ್ನು ಕಾಣುವ ಭಾಗ್ಯ ಹೊಂದಿರದೆ ಅವರು ಲಿಂಗೈಕ್ಯರಾದ ವಿಷಯ ತಿಳಿದು ಆಘಾತಕ್ಕೊಳಗಾಗುತ್ತಾರೆ. ತೀವ್ರವಾದ ಭಾವಾವೇಶ, ಭಕ್ತಿಯಿಂದ ಉದ್ದೀಪಿತರಾಗಿ ಬಸವಣ್ಣನವರ ಸಮಾಧಿ ಸ್ಥಳದಲ್ಲಿ ಕುಳಿತು ಮಡಿವಾಳ ಮಾಚಿದೇವರು ಬಸವಣ್ಣನವರನ್ನು ಸ್ತುತಿಸುವಾಗ ತೇಜೋಮೂರ್ತಿಯಾಗಿ ಬಸವಣ್ಣ ದಿವ್ಯ ದರ್ಶನವನ್ನು ನೀಡುತ್ತಾರೆ. ''ನಮ್ಮೆಲ್ಲರನ್ನು ನೀನು ಅಗಲಿಹೋದೆಯಲ್ಲಾ ಬಸವಣ್ಣ'' ಎಂಬ ದುಃಖದ ಮೊರೆಗೆ ಉತ್ತರವಾಗಿ ದರ್ಶನ ನೀಡಿದ ಬಸವಣ್ಣನವರು, ''ನಾನು ನಿಮ್ಮನ್ನೂ ಅಗಲಿಲ್ಲ, ಈವರೆಗೂ ದೇಹ ಧಾರಿಯಾಗಿದ್ದು ಸೀಮಿತನಾಗಿದ್ದೆ. ಈಗ ದೇಹದ ಆವರಣ ಕಳಚಿಕೊಂಡು ಸೀಮೆ-ಸಂಬಂಧ ತಪ್ಪಿ ನಿರಾಕಾರ ಸ್ವರೂಪಿಯಾಗಿ ಎಲ್ಲರ

ಹೃದಯದಲ್ಲಿಯೂ ಅಡಗಿದ್ದೇನೆ ಎಂದಾಗ ಇನ್ನು ಅಗಲುವುದೆಲ್ಲಿಂದ ಬಂದಿತು?'' ಎಂದು ನುಡಿಯುತ್ತಾರೆ. ಆಗ ಮಡಿವಾಳ ಮಾಚಿದೇವರು ಹೃದಯ ತುಂಬಿ ''ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣ; ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣ; ಆ ಬಸವಣ್ಣಂಗೆ ಶರಣೆಂಬ ಪಥವನೇ ತೋರುಕಂಡಾ ಕಲಿದೇವರದೇವಾ'' ಎಂದು ಕೊಂಡಾಡಿ ಸಮಾಧಾನ ಹೊಂದುತ್ತಾರೆ. ಲಿಂಗೈಕ್ಯರಾದ ಬಸವಣ್ಣನವರು ಮರುದಿನವೇ ನೀಲಾಂಬಿಕಾ ತಾಯಿಯ ಕರದಿಷ್ಟಲಿಂಗದಲ್ಲಿ ದರ್ಶನ ಕೊಟ್ಟು, ಆ ತಾಯಿಯವರು ಆ ಲಿಂಗದೇವನಲ್ಲಿ ಲೀನವಾಗಲು ನಿರೂಪ ಕೊಡುವುದು ನೀಲಮ್ಮನವರ ಗೀತೆಯಲ್ಲಿ ದಾಖಲಿಸಲ್ಪಟ್ಟಿದೆ. ಅದೇ ರೀತಿ ಮಡಿವಾಳ ಮಾಚಿದೇವರಿಗೆ ದರ್ಶನ ನೀಡಿದ ದಿನವು ಬಸವಣ್ಣನವರ ಕಾರಣಿಕೋತ್ಸವ ಎಂದು ದಾಖಲಿಸಲ್ಪಟ್ಟಿರುವುದು ಗಮನಾರ್ಹ ಸಂಗತಿ.

ಇಂಥ ಬಸವ ದರ್ಶನದ ಪವಿತ್ರ ದಿನದಂದು 63 ಅಡಿ ಎತ್ತರದ ಬೃಹತ್ ಬಸವ ಪುತ್ಥಳಿ ನಿರ್ಮಾಣಕ್ಕೆ ನಾಂದಿ ಪೂಜೆ ನೆರವೇರಿಸಲು ನಿಶ್ಚಯಿಸಿದೆವು. ಪ್ರಚಾರಕ್ಕೆ ಸಮಯ ತೀರಾ ಕಮ್ಮಿ ಇದ್ದುದರಿಂದ ಕರಪತ್ರಗಳನ್ನೂ ಹೆಚ್ಚು ಮುದ್ರಿಸಲಿಲ್ಲ. ಉದಗೀರ್‌ನಲ್ಲಿ ಪ್ರವಚನ ಮಾಡುತ್ತಿದ್ದ ಪೂಜ್ಯ ಗಂಗಾ ಮಾತಾಜಿಗೆ ಬರಲು ತಿಳಿಸಿದೆವು. ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೋಕಿನ ಬಳವಟಿ ಎಂಬಲ್ಲಿದ್ದ ಪೂಜ್ಯ ಚನ್ನಬಸವಾನಂದ ಸ್ವಾಮೀಜಿಯವರಿಗೆ ತಿಳಿಸಿದೆವು. ಬೀದರ್, ಗುಲ್ಬರ್ಗಾ, ಹೈದರಾಬಾದ್ ರಾಷ್ಟ್ರೀಯ ಬಸವ ದಳದ ಮುಖ್ಯಸ್ಥರಿಗೆ ತಿಳಿಸಿದೆವು. ಬಹಳ ಎಂದರೆ ಸ್ಥಳೀಯರೂ ಸೇರಿ ಐವತ್ತರಿಂದ ನೂರು ಜನ ಬರಬಹುದು ಎಂದು ನಾವು ಭಾವಿಸಿದ್ದೆವು. ಒಂದು ದಿನ ಮೊದಲು ಅಂದರೆ ದಿ. 31-8-2004ರ ಪ್ರಮುಖ ದಿನ ಪತ್ರಿಕೆಗಳಲ್ಲಿ ಬೃಹತ್ ಮೂರ್ತಿ ನಿರ್ಮಾಣದ ನಾಂದಿ ಪೂಜೆಯ ವಿಷಯ ಬಹಳ ಚೆನ್ನಾಗಿ ಬಂದಿತು. ದಿ. 30 ರಂದು ಗುಲಬರ್ಗಾದಲ್ಲಿ ಪತ್ರಿಕಾಗೋಷ್ಠಿ ಕರೆದಿದ್ದೆ. ಅದರ ಫಲಶ್ರುತಿಯಾಗಿ ಜನರಿಗೆ ಸುದ್ದಿ ತಿಳಿದು ಹತ್ತಾರು ವಾಹನಗಳಲ್ಲಿ ಸಾವಿರಾರು ಜನರು ಬಂದು ಭಾಗವಹಿಸಿದಾಗ ಜನರಲ್ಲಿ ತುಂಬಿರುವ ಬಸವ ಭಕ್ತಿ ಮತ್ತು ನಮ್ಮ ಮೇಲಿಟ್ಟ ಅಭಿಮಾನ ತಿಳಿದು ಹೃದಯವು ತುಂಬಿ ಬಂದಿತು.

ದಿ. 1 ರಂದು ಬೆಳಗಿನ ಜಾವ 6 ಗಂಟೆಗೆಲ್ಲ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಸವೇಶ್ವರ ಪೂಜಾವ್ರತ ಆರಂಭಿಸಿದ್ದಲ್ಲದೆ 1008 ಬಸವ ಮಂತ್ರಗಳನ್ನು ಪಠಿಸುತ್ತ ಸಹಸ್ರ ಬಿಲ್ವಾರ್ಚನೆಯನ್ನು ನೆರವೇರಿಸಿದರು. ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು ಆ ಸ್ಥಳದಲ್ಲಿ ಇಷ್ಟಲಿಂಗಾರ್ಚನೆ ಮಾಡಿದರು. ಸಿಮೆಂಟಿನಲ್ಲಿ ಮಾಡಿದ ಕುಳಿತುಕೊಂಡ, ಅಭಯ ಮುದ್ರೆಯ ಬಸವಣ್ಣನವರ ಲೈಫ್ ಸೈಜ್ (Model) ಮಾದರಿ ಪ್ರತಿಕೃತಿಯನ್ನು ನಿವೇಶನದಲ್ಲಿ ಇಟ್ಟು ಪೂಜೆ ನೆರವೇರಿಸಿದೆವು. ಪುಷ್ಪವೃಷ್ಟಿ ಆರತಿ ಮಾಡಿದೆವು. ಧ್ವಜಾರೋಹಣವನ್ನು ಪೂಜ್ಯ ಅಲ್ಲಮಪ್ರಭು ಸ್ವಾಮಿಗಳು ನೆರವೇರಿಸಿದರು.

63 ಅಡಿ ಬದಲಿಗೆ 108 ಅಡಿ

ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷರಾದ ಶರಣ ಎನ್.ಪುಟ್ಟರುದ್ರಪ್ಪ ಅವರು ಬಂದು ಒಂದು ಪ್ರಸ್ತಾವನೆ ಮುಂದಿಟ್ಟರು.

''ಸುಂದರವಾದ ಮತ್ತು ವಿಸ್ತಾರವಾದ ಗುಡ್ಡದ ಮೇಲೆ 63 ಅಡಿ ಎತ್ತರ ಮೂರ್ತಿ ಸಾಲದು ; ಕನಿಷ್ಟ ಪಕ್ಷ100 ಅಡಿ ಎತ್ತರವಾದರೂ ಬೇಕು ಎಂದು ಸಮಾವೇಶವಾಗಿರುವ ಶರಣ ಬಂಧುಗಳು ಅಭಿಪ್ರಾಯ ಪಡುತ್ತಿದ್ದಾರೆ. ತಮ್ಮ ಅಭಿಪ್ರಾಯಕ್ಕಾಗಿ ಕಾತುರರಾಗಿದ್ದಾರೆ''.

''ಧರ್ಮಪಿತ ಬಸವಣ್ಣನವರ ಕೀರ್ತಿ ವಿಸ್ತರಿಸಲು ನಾನು ಯಾವುದೇ ತ್ಯಾಗ-ಪರಿಶ್ರಮಕ್ಕೂ ಸಿದ್ಧ. ನೀವೆಲ್ಲ ಇಚ್ಛಿಸಿದರೆ ನನಗೂ ಒಪ್ಪಿಗೆ'' ಎಂದೆ. ಶಿಲ್ಪಿಗಳೂ ಒಪ್ಪಿದರು. ಶರಣ ಬಂಧುಗಳು ಹರ್ಷೋದ್ಗಾರ ಮಾಡಿದರು. 63 ಅಡಿ ಎತ್ತರದ ಮೂರ್ತಿಗೆ 60 ಲಕ್ಷ, ಅದಕ್ಕೆ ಅತ್ಯಗತ್ಯವಾದ ಇನ್ನಿತರ ಅಡಿಪಾಯ ಇತ್ಯಾದಿಗೆ 20 ಲಕ್ಷ, ಕೃತಕ ಸರೋವರ ಅದರ ಮಧ್ಯೆ ಬಸವ ಲಿಂಗೈಕ್ಯ ಮಂಟಪದ ಪ್ರತಿಕೃತಿಗೆ 20 ಲಕ್ಷ ಹೀಗೆ ನಾವು ಒಂದು ಕೋಟಿಯ ಅಂದಾಜು ಹಾಕಿದ್ದೆವು. ಈಗ ಇದು ಒಂದೂವರೆ ಕೋಟಿಯನ್ನು ದಾಟುತ್ತದೆ. ಬಸವಾಭಿಮಾನಿಗಳು ಲಿಂಗಾಯತರು ಮತ್ತು ಲಿಂಗಾಯತೇತರರು ಉಭಯತರಲ್ಲೂ ಇದ್ದಾರೆ. ಇವರುಗಳೆಲ್ಲ ತಾವೂ ಸ್ವತಃ ಕೊಟ್ಟು ಇನ್ನಿತರರಿಂದಲೂ ಕೊಡಿಸಿದರೆ ಇದು ಅಸಾಧ್ಯದ ಕಾರ್ಯವೇನಲ್ಲ. ಧರ್ಮಪಿತರ ಮಹಾನ್ ಕೊಡುಗೆಗೆ ನಾವು ಸಲ್ಲಿಸಬಹುದಾದ ಕಿಂಚಿತ್ ಸೇವೆ. ನೋಡೋಣ ಗಟ್ಟಿ ಮನಸ್ಸು, ಧೈರ್ಯ ಮಾಡಿ ಹೆಜ್ಜೆ ಇಟ್ಟಿದ್ದೇವೆ. ಶರಣ ಮೇಳದ ಸಮಯದಲ್ಲಿ ದೇಣಿಗೆ ಸಂಗ್ರಹ ಮಾಡುವ ಶರಣ ಬಂಧುಗಳು ಬೃಹತ್ ಮೂರ್ತಿಗೂ ಸಂಗ್ರಹ ಮಾಡಿಕೊಟ್ಟರೆ ಮಹತ್ವಪೂರ್ಣ ಸಾಧನೆಯಾಗುತ್ತದೆ.

ನಾಂದಿಪೂಜೆಯ ನಂತರ ಕಾರ್ಯಕ್ರಮದ ಉದ್ಘಾಟನೆಯನ್ನು ದೀಪೋಜ್ವಲನದ ಮೂಲಕ ಉದ್ಘಾಟಿಸಲಾಯಿತು. ಶರಣ. ಪುಟ್ಟರುದ್ರಪ್ಪನವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಆಂಧ್ರ ಪ್ರದೇಶ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಸುಭಾಷ್ ಪಾಟೀಲರು, ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ವೀರಣ್ಣ ಕೊರ್ಲ್ಹಳ್ಳಿ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳದ ಅಧ್ಯಕ್ಷೆ ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಮಾತನಾಡಿ ''108 ಅಡಿ ಮೂರ್ತಿ ಅದರ ಕೆಳಗೆ 25 ಅಡಿ ಪೀಠ-ಈ ಪರಿಕಲ್ಪನೆಯಲ್ಲಿ ಬಸವಣ್ಣನವರ ಪುತ್ಥಳಿ ಆದರೆ ಅದು ಅದ್ಭುತವಾದ ದೃಶ್ಯವಾಗುತ್ತದೆ'' ಎಂದು ಸಂತೋಷ ವ್ಯಕ್ತಪಡಿಸಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಮತ್ತು ಸನ್ನಿಧಿ ವಹಿಸಿದ್ದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು ಈ ಬೃಹತ್ ಮೂರ್ತಿಯ ನಿರ್ಮಾಣಕಾರ್ಯ ಪೂರೈಸುವವರೆಗೆ ಹಗಲಿರುಳು ದುಡಿಯುವ ಪ್ರತಿಜ್ಞೆ ಮಾಡಿದರು. ಈ ನಿರ್ಮಾಣ ಕಾರ್ಯದ ರೂಹಾರಿಗಳಾದ ಶ್ರೀ ಕೆ. ಶ್ರೀಧರ ಮೂರ್ತಿ ಮತ್ತು ಶ್ರೀ ಕೆ. ನಾಗಭೂಷಣ ಅವರನ್ನು ಶಾಲು ಹೊದಿಸಿ ಸತ್ಕರಿಸಲಾಯಿತು. ಸ್ಥಳೀಯವಾಗಿದ್ದುಕೊಂಡು ಮೇಲುಸ್ತುವಾರಿ ಮಾಡಲಿರುವ ಬೀದರಿನ ಅಭಿಯಂತರಾದ ಶರಣ. ಹಾವಶೆಟ್ಟಿ ಪಾಟೀಲ್ ಅವರನ್ನು, ಬಸವ ಮಹಾಮನೆಯಲ್ಲಿ ಕಟ್ಟಡ ನಿರ್ಮಾಣ ಕಾರ್ಯ ನೋಡಿಕೊಳ್ಳುವ ಪೂಜ್ಯ ಶ್ರೀ ಸದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳನ್ನು ಮತ್ತು ಶಿವರಾಯ ಚಂದ್ರಕಂಠಿಯವರನ್ನು ಸತ್ಕರಿಸಲಾಯಿತು. ನಿವೃತ್ತ ಶಿಕ್ಷಕರಾದ ಚಂದ್ರಕಂಠಿಯವರು ಒಂದು ಲಕ್ಷ ರೂ.ಗಳನ್ನು, ಗುಲಬರ್ಗಾದ ಶರಣ. ಸಂಗಪ್ಪ ದಾಬಶೆಟ್ಟಿಯವರು ಒಂದು ಲಕ್ಷ ರೂ.ಗಳನ್ನು ಮೂರ್ತಿ ನಿರ್ಮಾಣಕ್ಕೆ ಕೊಡುವ ನಿರ್ಧಾರ ಪ್ರಕಟಿಸಿದರು.

★★★

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ. 21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 21 ಎಕರೆ ಜಮೀನನ್ನು ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಶರಣರು ಭವಿಷ್ಯವಾಣಿ ನುಡಿದಿದ್ದಾರೆ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.

1. ಬಸವ ಮಹಾಮನೆಯ ಕಾರ್ಯಾಲಯ ಕಟ್ಟಡ ನಿರ್ಮಾಣ.

2. ನಿತ್ಯ ಪೂಜಾ ನಿಧಿ - 600 ರೂ : ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ ; ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ, ಪ್ರಸಾದವನ್ನು ಮನೆಗೆ ಅಂಚೆಯಲ್ಲಿ ಕಳಿಸಲಾಗುವುದು.

3. ದಾಸೋಹ ನಿಧಿ - 1200 ರೂ : ದಾಸೋಹಿಗಳು ಕೊಡುವ ಹಣವನ್ನು ನಿಧಿಗಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು ಮತ್ತು ಪ್ರಸಾದವನ್ನು ದಾನಿಗಳಿಗೆ ಅಂಚೆಯಲ್ಲಿ ಕಳಿಸುವುದು.

4. ಬಸವಾಲಯ ನಿರ್ಮಾಣ : ಬಸವಾಲಯ ನಿರ್ಮಿಸಿ ಶ್ರೀ ಗುರು ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಸ್ಥಾಪಿಸುವುದು.

5. ಬಸವ ಮಂಟಪ ನಿರ್ಮಾಣ : ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟುವುದು. ಭವ್ಯವಾದ ಪ್ರಾರ್ಥನಾ ಮಂದಿರ ''ಬಸವ ಮಂಟಪ'' ನಿರ್ಮಾಣಕ್ಕೆ 10,000 ರೂ. ಮತ್ತು ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು.

6. ಬಸವೇಶ್ವರ ಸಮುದಾಯ ಭವನ : ಯಾತ್ರಿಕರಿಗೆ ಉಚಿತವಾಗಿ ತಂಗಲು ವಿಶಾಲವಾದ ಹಾಲ್ ಮತ್ತು ಕೋಣೆಗಳು.

7. ಶರಣ ಧಾಮ : ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 61,000 (ಅರವತ್ತೊಂದು ಸಾವಿರ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 81,000 (ಎಂಬತ್ತೊಂದು ಸಾವಿರ) ರೂ. ದಂತೆ ಪಡೆಯಲಾಗುವುದು.

ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು.

8. 108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ: ಅಂದಾಜು ವೆಚ್ಚ 1.5 ಕೋಟಿ ರೂಪಾಯಿಗಳು.

9. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ.

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 17ನೆಯ ಶರಣ ಮೇಳವು ಇದೇ ತಾನೆ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪುರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ. **"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"** ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ. 1160)ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ. 1196)ದವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy Land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1,2 ಮತ್ತು 3 ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ-ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ,

ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿದೆ. ನಾಲ್ಕನೆಯ ಕಲ್ಯಾಣ ಪರ್ವವನ್ನು 2005ನೆಯ ಇಸವಿಯ ಮೇ 1,2 ಮತ್ತು 3 ರಂದು ಬಸವ ಮಹಾಮನೆಯ ಆವರಣದಲ್ಲಿ ಸಂಯೋಜಿಸಲಾಗಿದೆ.

ವಿಶ್ವಗುರು ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ ಯೋಜನೆಗೆ ಚಾಲನೆ

ಬೀದರ್ ಜಿಲ್ಲೆಯ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ಕ್ರಾಂತಿ ಪುರುಷ ಬಸವಣ್ಣನವರ ನೇತೃತ್ವದಲ್ಲಿ ಅಸಂಖ್ಯಾತ ಶರಣರನ್ನು ಆಕರ್ಷಿಸಿದ ಶರಣ ಭೂಮಿ. ಜಗತ್ತಿನ ಎಲ್ಲ ಭಾಗಗಳಿಂದಲೂ ಪ್ರವಾಸಿಕರನ್ನು, ಚಿಂತನಶೀಲರನ್ನು ಆಕರ್ಷಿಸುವಂತೆ ಇಂದು ಅದು ಪುನರ್ ನಿರ್ಮಾಣವಾಗಬೇಕಾಗಿದೆ. ಈ ಯೋಜನೆಯ ಅಂಗವಾಗಿ 108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿಯೊಂದನ್ನು ಮತ್ತು ಅನೇಕ ಶರಣರ ಮೂರ್ತಿಗಳನ್ನು, ಶರಣರಿಗೆ ಸ್ಮಾರಕಗಳನ್ನು ನಿರ್ಮಾಣ ಮಾಡುವ ಯೋಜನೆಯನ್ನು ರೂಪಿಸಲಾಗಿದೆ. ಬೃಹತ್ ಮೂರ್ತಿಯನ್ನು ಮಾಡಲು ಪರಿಣಿತರು, ಪ್ರಸಿದ್ಧರೂ ಆಗಿರುವ ಶಿಲ್ಪಿಯವರನ್ನು ಕರೆದುಕೊಂಡು ಹೋಗಿ ದಿ. 16-6-2004 ರಂದು ಸ್ಥಳ ವೀಕ್ಷಣೆ ಮಾಡಲಾಯಿತು. ಮಾತ್ರವಲ್ಲ ಬೃಹತ್ ಪುತ್ಥಳಿಯ ನಿರ್ಮಾಣಕ್ಕೆ ಸೂಕ್ತ ಸ್ಥಳವನ್ನೂ ಶರಣ ಶೈಲದ ಮೇಲೆ ಆಯ್ಕೆ ಮಾಡಲಾಗಿದೆ.

ಕೇವಲ 108 ಅಡಿ ಮೂರ್ತಿಯ ನಿರ್ಮಾಣಕ್ಕೆ ಅಂದಾಜು ವೆಚ್ಚ 1 ಕೋಟಿ ಎಂದು ಶಿಲ್ಪಿಗಳು ಎಸ್ಟಿಮೇಷನ್ ಮಾಡಿದ್ದಾರೆ. ಆದರೆ ಇದಕ್ಕೆ ಪೂರಕವಾಗಿ ಇನ್ನೂ ಕೆಲವು ವೆಚ್ಚಗಳು ಬರುತ್ತವೆ. ಮಾತ್ರವಲ್ಲದೆ ಶರಣರ ಮೂರ್ತಿ, ಸ್ಮಾರಕ, ಧ್ಯಾನ ಮಂಟಪ, ಗವಿ ಇತ್ಯಾದಿಗಳು ಸೇರಿ 50 ಲಕ್ಷ ಹೀಗೆ ಒಂದೂವರೆ ಕೋಟಿ ರೂಪಾಯಿಗಳ ಯೋಜನೆ ರೂಪಿಸಲಾಗಿದೆ. ಈ ಯೋಜನೆಯನ್ನು ಸಾಕಾರಗೊಳಿಸಲು 1. ಬಸವ ಧರ್ಮ ಪೀಠ ಟ್ರಸ್ಟ್, 2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, 3. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್. ಮೂರೂ ಸೇರಿ ಕಾರ್ಯಮಾಡಲು, ದೇಣಿಗೆ ಸಂಗ್ರಹಿಸಲು ನಿರ್ಧರಿಸಿವೆ.

1. ಅವರವರ ಶಕ್ತ್ಯಾನುಸಾರ ಭಕ್ತಿಯಿಂದ ಎಷ್ಟು ಕಾಣಿಕೆ ಕೊಟ್ಟರೂ ಸ್ವೀಕರಿಸಲಾಗುವುದು.
2. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಡೋನರ್ ಬೋರ್ಡ್, ದಾನಿಗಳ ಫಲಕದಲ್ಲಿ ಬರೆಸಲಾಗುವುದು.
3. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ (ಹಿಂದೆ, ಎಡ ಮತ್ತು ಬಲಪಕ್ಕ) ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದು.
4. 1,00,000 (ಒಂದು ಲಕ್ಷ) ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ ಬರುವ ಸ್ಥಳಗಳಲ್ಲಿ ಒಂದು ಕಡೆ ಒಳಗಿನ

ಮ್ಯುಸಿಯಮ್‌ನಲ್ಲಿ ಹಾಕಿಸಲಾಗುವುದಲ್ಲದೆ ಅವರ ಒಂದು ಫೋಟೋ ಸಹ ಪ್ರದರ್ಶಿಸಲಾಗುವುದು.

ಸಾಲದ ರೂಪದಲ್ಲಿ ಸಹಾಯ : ಪುತ್ಥಳಿಯ ಪೀಠದ ನಿರ್ಮಾಣದಿಂದ ಆರಂಭಿಸಿ ಬೃಹತ್ ಪುತ್ಥಳಿಯ ನಿರ್ಮಾಣ ಪೂರೈಸಲು ಶಿಲ್ಪಿಗಳು ಒಂದು ವರ್ಷದ ಅವಧಿ ನಿಗದಿ ಪಡಿಸಿದ್ದಾರೆ. ಕೆಲಸ ಆರಂಭವಾದರೆ ಮಧ್ಯೆ ತಡೆಯಿಲ್ಲದೆ ಮುಂದುವರೆಯಬೇಕು. ಇಲ್ಲದಿದ್ದರೆ ವೆಚ್ಚದ ಪ್ರಮಾಣ ಮಿತಿ ದಾಟುತ್ತದೆ ಎಂಬ ಅಭಿಪ್ರಾಯ ಶಿಲ್ಪಿಗಳದು. ಈ ಹಿನ್ನೆಲೆಯಲ್ಲಿ ದಾನಿಗಳಿಂದ ದೇಣಿಗೆ, ಸಾಲ ನೀಡಿ ಸಹಾಯಹಸ್ತ ಚಾಚಲು ಮುಂದೆ ಬರುವವರಿಂದ 12% ಬಡ್ಡಿಯದರದ ಮೇಲೆ ಸಾಲವನ್ನು ಪಡೆಯಲು ನಿರ್ಧರಿಸಲಾಗಿದೆ. ಬ್ಯಾಂಕ್‌ನ ಬಡ್ಡಿದರ ತೀರಾ ಕಡಿಮೆಯಿರುವುದರಿಂದ ಇರುವ ಹಣದ ಮೇಲೆ ಬಡ್ಡಿ ಪಡೆದು ಉಪಜೀವನ ಮಾಡುವವರಿಗೆ ಬಹಳ ತೊಂದರೆಯಾಗುತ್ತದೆ. ಅಂಥವರು ನಮ್ಮ ಟ್ರಸ್ಟ್‌ಗೆ ಸಾಲಕೊಟ್ಟರೆ ಅವರಿಗೆ 12% ಬಡ್ಡಿ ಕೊಡಲಾಗುವುದು ಮತ್ತು ಅವರು ಯಾವುದಾದರೂ ನಿಗದಿತ ಉದ್ದೇಶಕ್ಕೆ ಹಣ ಇಟ್ಟುಕೊಂಡಿದ್ದು ಉದಾ: ಮನೆ ಕಟ್ಟಿಸಲು, ಮದುವೆ ಮಾಡಲು, ಸೈಟುಕೊಳ್ಳಲು ಇತ್ಯಾದಿ ಆ ಕೆಲಸಕ್ಕೆ ಅಗತ್ಯಬಿದ್ದಾಗ ಎರಡು ತಿಂಗಳ ಮೊದಲಿಗೆ ಸೂಚನೆ ಕೊಟ್ಟರೆ ಅವರ ಹಣವನ್ನು ಹಿಂತಿರುಗಿಸಲಾಗುವುದು.

1. ರಸೀತಿ ಪುಸ್ತಕ ಪಡೆದು ದೇಣಿಗೆ ಸಂಗ್ರಹಿಸಿಕೊಡಲು ಆಸಕ್ತರಾದವರು ಪುಸ್ತಕಗಳನ್ನು ಪತ್ರ ಬರೆದು ತರಿಸಿಕೊಳ್ಳಬಹುದು. ನೀವೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಕೊಡಲು, ನಿಮ್ಮ ಬಂಧು-ಮಿತ್ರರಿಂದ ಕೊಡಿಸಲು ಆಸಕ್ತಿವಹಿಸಬೇಕಾಗಿ ವಿನಂತಿಸುತ್ತೇವೆ.

2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಪಡೆದಿದ್ದು, ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು. ಈ ಸೌಲಭ್ಯವು ನವೀಕರಣಗೊಂಡು ಚಾಲ್ತಿಯಲ್ಲಿದೆ ಎಂಬುದನ್ನು ದಾನಿಗಳ ಗಮನಕ್ಕೆ ತರಬಯಸುತ್ತೇವೆ.

3. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೃಹತ್ ಪುತ್ಥಳಿಯ ನಿರ್ಮಾಣದಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ಜೊತೆಗೆ ಕೈ ಜೋಡಿಸುತ್ತಲಿದೆ. ಬಸವ ಗಂಗೋತ್ರಿ ನಗರ ಯೋಜನೆಯ ಆದಾಯದ ಒಂದು ಭಾಗವನ್ನು ಪುತ್ಥಳಿಗೆ ದಾನ ರೂಪದಲ್ಲಿ ಕೊಡಲು ಬಯಸಿದೆ. ಆದ್ದರಿಂದ ನಿವೇಶನಕೊಳ್ಳುವ ಮೂಲಕವೂ ಪರೋಕ್ಷ-ನೆರವು ನೀಡಬಹುದು.

– ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ

ಸಂಪರ್ಕಿಸುವ ವಿಳಾಸ

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ (ರಿ.)
ಬಸವ ಮಂಟಪ,
2035, 20ನೇ ಮೇನ್ ರೋಡ್,
2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.
ದೂ : 080-23325335/23322790

ಬಸವ ಧರ್ಮ ಪೀಠ
ಬಸವ ಮಹಾಮನೆ
ಮುಖ್ಯ ರಸ್ತೆ, ಬಸವ ಕಲ್ಯಾಣ -585327
ತಾ-ಬಸವ ಕಲ್ಯಾಣ, ಜಿ-ಬೀದರ್
ದೂ : 08481-251921/252856



ದಿ. 10-8-2004 ರಿಂದ ದಿ. 20-8-2004ರವರೆಗೆ ಬೆಂಗಳೂರು ಬಸವ ಮಂಟಪದಲ್ಲಿ ನಡೆದ ಧರ್ಮ ಪ್ರಚಾರಕರ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದ ಶಿಬಿರಾರ್ಥಿಗಳು, ಬಸವ ಧರ್ಮ ಪೀಠದ ಪೂಜ್ಯರು ಹಾಗೂ

CPMG/KA/BGW-50/2003-2005
WPP (W) - 17 R. No. 19980/70



ಪರಮ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರ

47ನೆಯ ವರ್ಧಂತ್ಯೋತ್ಸವ ದಿ. 18-9-2004